

# ಸೂಕ್ತಿ-ವ್ಯಾಪ್ತಿ

## ಸುಭಾಷಿತ ಸಂಗ್ರಹ

೩

ಎನ್. ರಂಗನಾಥಶರ್ಮಾ

# ಸೂಕ್ತಿ-ವ್ಯಾಪ್ತಿ

## ಸುಭಾಷಿತ ಸಂಗ್ರಹ

ಸಂಪುಟ - ೨

रामकृष्ण भट्ट, कुडेलु
३/०२/०९

# ಸೂಕ್ತಿ - ವ್ಯಾಪ್ತಿ

## ಸುಭಾಷಿತ ಸಂಗ್ರಹ

**ಸಂಪುಟ - ೩**

**ಎನ್. ರಂಗನಾಥಶರ್ಮಾ**

ಪ್ರಕಟಣೆ ೯೩

**ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು**

ರಾಷ್ಟ್ರೋತ್ಥಾನ ಸಾಹಿತ್ಯ
'ಕೇಶವಶಿಲ್ಪ'
ಕೆಂಪೇಗೌಡನಗರ
ಬೆಂಗಳೂರು - ೫೬೦ ೦೧೯.

© ರಾಷ್ಟ್ರೋತ್ಥಾನ ಸಾಹಿತ್ಯ

ಮೊದಲನೆ ಮುದ್ರಣ: ಆಗಸ್ಟ್ ೨೦೦೪

ಬೆಲೆ : ರೂ. ೩೫-೦೦

ರಾಷ್ಟ್ರೋತ್ಥಾನ ಮುದ್ರಣಾಲಯ
ಬೆಂಗಳೂರು - ೫೬೦ ೦೧೯.

*'SOOKTI-VYAPTI'*. Kannada. By N. RANGANATHA SHARMA. Vol. 3. A collection of epigrammatic verses in Sanskrit, with new commentary, explaining their contemporary relevance. Published by RASHTROTTHANA SAHITYA, 'Keshava Shilpa', Kempegowda Nagar, Bangalore - 560 019 (India). Pages : viii + 92. Rs. 40-00.

First edition : August 2004

ISBN 81-7531-038-3

*Cover design :* U. T. Suresh

*Typeset by :*
CREATIVE GRAPHICS, Bangalore - 560 053. ✆ 26800723

*Printed at :*
RASHTROTTHANA MUDRAṆALAYA, Bangalore - 560 019.

# ಸಮಕ್ಷಮದಲ್ಲಿ

ಅನೇಕ ಶತಮಾನಗಳ ನಮ್ಮ ಸ್ವಾತಂತ್ರ್ಯ ಸಂಘರ್ಷ ಇಂದು ಯಶಸ್ಸಿನ ಒಂದು ಘಟ್ಟ ಮುಟ್ಟಿದೆ. ನಮ್ಮ ರಾಷ್ಟ್ರದ ಸ್ವತಂತ್ರ, ಸಾರ್ವಭೌಮ ಜೀವನವನ್ನು ಕಟ್ಟುವ ಸುವರ್ಣಸಂಧಿ ನಮಗಿಂದು ಒದಗಿಬಂದಿದೆ.

ಇದೊಂದು ಸುವರ್ಣಸಂಧಿ ಆಗಿರುವಂತೆಯೇ ಒಂದು ಗಂಭೀರ ಸವಾಲೂ ಆಗಿದೆ. ನಮ್ಮ ರಾಷ್ಟ್ರಜೀವನವನ್ನು ಯಾವ ಆದರ್ಶದ ಬೆಳಕಿನಲ್ಲಿ, ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಬೇಕು - ಎಂಬ ಸವಾಲಿಗೆ ನಾವಿಂದು ಉತ್ತರ ಕೊಡಬೇಕಾಗಿದೆ.

ಆದರೆ ನಮ್ಮ ನಾಡಿನ ದೌರ್ಭಾಗ್ಯದಿಂದ ಇವತ್ತಿಗೂ ಈ ಮೂಲಪ್ರಶ್ನೆಯ ಬಗೆಗೆ ನಮ್ಮ ಸ್ವತಂತ್ರ ಪ್ರತಿಭೆಯಿಂದ ವಿಚಾರಮಂಥನ ನಡೆಯುತ್ತಲೇ ಇಲ್ಲ. ಇಂಗ್ಲೆಂಡ್ ಅಮೆರಿಕಗಳಂತೆಯೋ ಇಲ್ಲವೆ ರಷ್ಯ ಚೀಣಾಗಳಂತೆಯೋ ನಮ್ಮ ಜೀವನವನ್ನು ಎರಕಹೊಯ್ಯುವ ಆತುರ ಎಲ್ಲ ಕ್ಷೇತ್ರಗಳಲ್ಲೂ ಕಂಡುಬರುತ್ತಿದೆ. ನಮ್ಮ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಇತ್ಯಾದಿ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತವನ್ನು ಪರದೇಶ, ಪರಸಂಸ್ಕೃತಿಗಳ ಅಗ್ಗದ ನಕಲಾಗಿ ಮಾಡುವ ಪ್ರಯತ್ನವೇ ನಡೆದಿದೆ. ನಮ್ಮ ರಾಷ್ಟ್ರೀಯ ಪ್ರತಿಭೆ, ಪರಂಪರೆ, ತತ್ತ್ವಜ್ಞಾನ, ಜೀವನಾದರ್ಶ ಇವೆಲ್ಲಕ್ಕೂ ಇಂದು ಗ್ರಹಣ ಹಿಡಿದಂತಾಗಿದೆ.

ಹೀಗಾಗಿ ಇಂದು ಕೋಟಿ ಕೋಟಿ ಭಾರತೀಯರ ಹೃದಯಕ್ಕೆ ನಮ್ಮ ಸ್ವತಂತ್ರ ರಾಷ್ಟ್ರಜೀವನದ ಅಮೃತಸ್ಪರ್ಶ ಅನುಭವಕ್ಕೆ ಬರುತ್ತಿಲ್ಲ. ನಮ್ಮ ಜನಸಾಮಾನ್ಯರ ಅಂತಃಕರಣವನ್ನು ತಟ್ಟಿ ಎಬ್ಬಿಸುವ ರಾಷ್ಟ್ರೀಯ ಆದರ್ಶಗಳಿಲ್ಲದೆಹೋದಲ್ಲಿ ರಾಷ್ಟ್ರದ ಪುನರುತ್ಥಾನಕ್ಕಾಗಿ ಅವರಲ್ಲಿ ಸ್ವಯಂಪ್ರೇರಣೆ, ಕಾರ್ಯೋತ್ಸಾಹ, ತ್ಯಾಗ, ಪೌರುಷಗಳು ಬೆಳೆದು ನಿಲ್ಲುವುದಾದರೂ ಹೇಗೆ? ಆದ್ದರಿಂದಲೇ ಇಂದು ರಾಷ್ಟ್ರದ ಆಗುಹೋಗುಗಳ ಬಗೆಗೆ ಸರ್ವತ್ರ ಉದಾಸೀನತೆ, ಕ್ರಿಯಾಶೂನ್ಯತೆ, ವಿಫಲತೆಗಳೇ ತಾಂಡವವಾಡುತ್ತಿವೆ. ಎಂದ ಮೇಲೆ ಜನರೆದೆಗೆ ಸ್ಫೂರ್ತಿ, ಉತ್ಸಾಹಗಳನ್ನೆರೆಯಬಲ್ಲ ಭಾರತೀಯತೆಯ ಆದರ್ಶವನ್ನು ಎತ್ತಿಹಿಡಿಯುವುದು ಇಂದು ತೀರಾ ಅನಿವಾರ್ಯ ಹಾಗೂ ತುರ್ತು ಕರ್ತವ್ಯವಾಗಿದೆ. ಭಾರತವು 'ತನ್ನತನ'ದಿಂದ ಎದ್ದುನಿಂತಾಗಲೇ ಅದು ಜಗತ್ತಿನಲ್ಲಿ ತಲೆಯೆತ್ತಿ ಬಾಳುವಂತಾದೀತು ಎಂಬುದು ಸ್ಪಷ್ಟವಿದೆ.

ನಮ್ಮ ಭಾರತೀಯತೆಯ - ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ತತ್ತ್ವಜ್ಞಾನ, ಜೀವನಾದರ್ಶಗಳ - ಹಿರಿಮೆ ಈ ಲೋಕದಲ್ಲಿ ಸಾಟಿಯಿಲ್ಲದ್ದು. ನೂರಾರು ಶತಮಾನಗಳವರೆಗೆ ನಮ್ಮ ರಾಷ್ಟ್ರಜೀವನವನ್ನು ವೈಭವಶಾಲಿಯಾಗಿ ಮಾಡಿದ್ದಷ್ಟೆ ಅಲ್ಲ, ಜಗತ್ತಿಗೆಲ್ಲ ದಿವ್ಯಜೀವನದ ಸುಧೆ ಕುಡಿಸಿದಂತಹ ಅದ್ಭುತ ಚೈತನ್ಯ

ಅದರಲ್ಲಿದೆ. ಇಂದಿಗೂ ಸಹ ಆಧುನಿಕ ಜೀವನದ ಅನೇಕ ವಿಕಟ ಸಮಸ್ಯೆ-ಸವಾಲುಗಳಿಗೆ ಸಮರ್ಪಕವಾಗಿ ಸಮಾಧಾನ ನೀಡಬಲ್ಲಂತಹ ಸಮಗ್ರ ಜೀವನದೃಷ್ಟಿ, ವಿಚಾರಸಂಪತ್ತು ಅದರಲ್ಲಿದೆ.

ರಾಷ್ಟ್ರೋತ್ಥಾನದ ಅಡಿಗಲ್ಲಾದ ನಮ್ಮ ಭಾರತೀಯ ಜೀವನದ ಜ್ಞಾನ-ನಿಷ್ಠೆಗಳನ್ನು ಜನಮನದಲ್ಲಿ ಬೇರೂರಿಸುವ ಈ ಚರಿತ್ರಾರ್ಹ ಕಾರ್ಯಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತು ೧೯೬೫ರಲ್ಲಿ ಜನ್ಮತಾಳಿತು. ಪರಿಷತ್ತು ಕಳೆದ ಮೂವತ್ತೊಂಬತ್ತು ವರ್ಷಗಳಲ್ಲಿ ಜನಜಾಗೃತಿಯ ಚಟುವಟಿಕೆಯಲ್ಲದೆ ಇನ್ನಿತರ ಹತ್ತುಹಲವು ಸಮಾಜಸೇವಾ ಚಟುವಟಿಕೆಗಳನ್ನು ಹಮ್ಮಿಕೊಂಡು ಬೆಳೆಯುತ್ತಾ ಬಂದಿದೆ. ಪರಿಣಾಮವಾಗಿ ಪರಿಷತ್ತಿನ ಆರಂಭದ ಕೆಲವು ಚಟುವಟಿಕೆಗಳನ್ನು ಜನವರಿ ೧೯೮೬ರಿಂದ ಬೇರ್ಪಡಿಸಲಾಯಿತು. ಈ ರೀತಿ ಬೇರ್ಪಡಿಸಿದ ಚಟುವಟಿಕೆಗಳಲ್ಲಿ ಪ್ರಕಾಶನಕ್ಕೆ ಸಂಬಂಧಿಸಿದ ಚಟುವಟಿಕೆಯು 'ರಾಷ್ಟ್ರೋತ್ಥಾನ ಸಾಹಿತ್ಯ ಟ್ರಸ್ಟ್' ಹೆಸರಿನಲ್ಲಿ ಮುಂದುವರಿದಿದೆ. ಪ್ರಕಾಶನದ ಮುಖ್ಯ ಯೋಜನೆ ಹೀಗಿದೆ:

* ಸಾಮಾಜಿಕ ಚಿಂತನ ಪ್ರಧಾನವಾದ ಗ್ರಂಥಗಳನ್ನು ಹೊರತರುವುದು. ಇಂದು ಕನ್ನಡ ಸಾಹಿತ್ಯಲೋಕದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಕೊರತೆ, ಅಗತ್ಯ ಇರುವುದು ಅಂತಹ ಗ್ರಂಥಗಳಿಗೇ. ಈ ಕೊರತೆಯನ್ನು ತುಂಬಲು ಮೂಲ ಕನ್ನಡ ಕೃತಿಗಳ ಜೊತೆಗೆ ಇತರ ಭಾಷೆಗಳಿಂದಲೂ ಉತ್ತಮ ರಾಷ್ಟ್ರೀಯ ಸಾಹಿತ್ಯವನ್ನು ಕನ್ನಡಕ್ಕೆ ತರುವುದು.
* ನಿಜವಾದ ರಾಷ್ಟ್ರೀಯ ಇತಿಹಾಸದ ಗ್ರಂಥಗಳಿಗಂತೂ ಕನ್ನಡದಲ್ಲೇ ಏಕೆ, ಇಡೀ ದೇಶದಲ್ಲೇ ತೀವ್ರ ಕೊರತೆ ಇದೆ. ಇದುವರೆಗೆ ಪಾಶ್ಚಾತ್ಯ ವಿದ್ವಾಂಸರ ಗ್ರಂಥಗಳು, ಅವರ ದೃಷ್ಟಿ-ಧೋರಣೆಗಳ ಜಾಡಿನಲ್ಲೇ ನಮ್ಮ ಇತಿಹಾಸದ ಅಧ್ಯಯನ ಸಾಗಿದೆ. ಇನ್ನಾದರೂ ನಮ್ಮ ರಾಷ್ಟ್ರೀಯ ದೃಷ್ಟಿಯಿಂದ ಚರಿತ್ರೆಯನ್ನು ಬರೆಯುವ, ಓದುವ ಅಭ್ಯಾಸವಾಗುವಂತೆ ನಮ್ಮ ರಾಷ್ಟ್ರೀಯ ಇತಿಹಾಸಗ್ರಂಥಗಳಿಗೆ 'ರಾಷ್ಟ್ರೋತ್ಥಾನ ಸಾಹಿತ್ಯ'ದಲ್ಲಿ ಅಗ್ರಸ್ಥಾನ ಕೊಡುವುದು.
* ಸಮಾಜದಲ್ಲಿ ಸತ್ಸಂಸ್ಕಾರಗಳನ್ನು ಮೂಡಿಸುವ ಸದಭಿರುಚಿಯ ಸಾಹಿತ್ಯವನ್ನು ಪ್ರಕಟಿಸುವುದು.
* ಸರಳ ಹಾಗೂ ಉದ್ಬೋಧಕ ರೀತಿಯಲ್ಲಿ ವೈಚಾರಿಕ ಮತ್ತು ವಿಶ್ಲೇಷಣಾತ್ಮಕ ಪುಸ್ತಕಗಳನ್ನು ಪ್ರಕಟಿಸುವುದು.
* ತಾಯಿ ಭಾರತಿಯ ದಿವ್ಯಮಂದಿರದಲ್ಲಿ ಹೊತ್ತಿರುವ ಈ ಜ್ಞಾನದ ಸೊಡರಿಗೆ ಜನರ ಒಲವು-ನೆರವುಗಳ ತೈಲಧಾರೆ ನಿರಂತರವಾಗಿ ಒದಗಿಬರಲಿ ಎಂಬುದು ನಮ್ಮ ಹೃದಯದಾಳದ ಹಾರೈಕೆ.

— *ಪ್ರಕಾಶಕರು*

# ಪುಸ್ತಕವನ್ನು ಕುರಿತು

ಇದು 'ಸೂಕ್ತಿ-ವ್ಯಾಪ್ತಿ'ಯ ಮೂರನೆಯ ಸಂಪುಟ. ಇದರಲ್ಲಿ ಸಂಕಲಿತವಾಗಿರುವವು 'ಉತ್ಥಾನ' ಮಾಸಪತ್ರಿಕೆಯಲ್ಲಿ ನಿಯಮಿತವಾಗಿ ೧೯೯೮-೨೦೦೩ರ ಅವಧಿಯಲ್ಲಿ ಪ್ರಕಟಗೊಂಡಿರುವ ಅಂಕಣಬರಹಗಳು. 'ಸೂಕ್ತಿ-ವ್ಯಾಪ್ತಿ'ಯ ಮೊದಲೆರಡು ಸಂಪುಟಗಳು ವಿಶಾಲ ಜನಾದರಣೆಯನ್ನು ಗಳಿಸಿಕೊಂಡಿರುವುದು ಪ್ರಕೃತ ಸಂಪುಟವನ್ನು ಹೊರತರಲು ಪ್ರೋತ್ಸಾಹಿಸಿದೆ.

ನಮ್ಮ ಪ್ರಾರ್ಥನೆಯಂತೆ 'ಉತ್ಥಾನ' ಪತ್ರಿಕೆಯಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ನಿರಂತರವಾಗಿ ಈ ಸುಭಾಷಿತ ಅರ್ಥವ್ಯಾಖ್ಯೆಗಳನ್ನು ಬರೆಯುತ್ತಿರುವವರು ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮಾ ಅವರು - 'ವಿಶ್ವಾಮಿತ್ರ' ಎಂಬ ಹೆಸರಿನಲ್ಲಿ. ಸಂಸ್ಕೃತ ಹಾಗೂ ಕನ್ನಡ ವಿದ್ವದ್ವಲಯದಲ್ಲಿ ವಿದ್ವಾನ್ ರಂಗನಾಥಶರ್ಮಾ ಅವರು ಸುಪರಿಚಿತರು; ಈ ಪೀಳಿಗೆಯ ಶ್ರೇಷ್ಠ ವಿದ್ವಾಂಸರ ಅಗ್ರಶ್ರೇಣಿಯಲ್ಲಿ ಸ್ಥಾನ .ಪಡೆದುಕೊಂಡಿರುವವರು. ಬೆಂಗಳೂರಿನ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವ್ಯಾಕರಣಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ವಿದ್ವಾನ್ ರಂಗನಾಥಶರ್ಮಾ ಅವರು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಸುಮಾರು ೫೦ ಗ್ರಂಥಗಳನ್ನು ರಚಿಸಿದ್ದಾರೆ. ಅವರ ವಾಲ್ಮೀಕಿರಾಮಾಯಣದ ಮತ್ತು ಭಾಗವತದ ಅನುವಾದಗಳೂ ಅಮರಕೋಶದ ಕನ್ನಡ ಅನುವಾದವೂ ಪ್ರಸಿದ್ಧವಾಗಿವೆ. ವಿಷ್ಣುಪುರಾಣ, ವಿದುರನೀತಿ ಮೊದಲಾದವುಗಳ ಅನುವಾದವನ್ನೂ ಅವರು ಲಭ್ಯವಾಗಿಸಿದ್ದಾರೆ. ಸಂಸ್ಕೃತದಲ್ಲಿ 'ಏಕಚಕ್ರಮ್', 'ಬಾಹುಬಲಿವಿಜಯಮ್' ಮೊದಲಾದ ಹಲವು ಸ್ವತಂತ್ರ ಗ್ರಂಥಗಳನ್ನಲ್ಲದೆ ಕನ್ನಡದಲ್ಲಿ ನೂರಾರು ಲೇಖನಗಳನ್ನು ಬರೆದಿದ್ದಾರೆ. ವ್ಯಾಕರಣ, ಅಲಂಕಾರಶಾಸ್ತ್ರಗಳಲ್ಲದೆ ವೇದಾಂತಾದಿ ದರ್ಶನಗಳಲ್ಲಿಯೂ ಕೃತಪರಿಶ್ರಮರಾದ

ವಿದ್ವಾನ್ ರಂಗನಾಥಶರ್ಮಾ ಅವರಿಗೆ ಸಂಸ್ಕೃತ ವಿದ್ವತ್ತಿಗಾಗಿ ರಾಷ್ಟ್ರಪ್ರಶಸ್ತಿಯೂ ಸಾಹಿತ್ಯಸೇವೆಗಾಗಿ ರಾಜ್ಯೋತ್ಸವ ಪ್ರಶಸ್ತಿಯೂ ಸಂದಿವೆ. ನಿರಂತರ ಸಾರಸ್ವತಸೇವೆಯಲ್ಲಿ ನಿರತರಾಗಿರುವ ವಿದ್ವಾನ್ ರಂಗನಾಥಶರ್ಮಾ ಅವರು ಎಲ್ಲ ಸಾಹಿತ್ಯಾಸಕ್ತರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. 'ಮಾಧವೀಯ ಶಂಕರವಿಜಯ' ಉದ್ಗ್ರಂಥದ ಕನ್ನಡ ಅನುವಾದ ಹಾಗೂ ಅವಲೋಕನದಿಂದ ಸಾಹಿತ್ಯಲೋಕವನ್ನು ಅವರು ಶ್ರೀಮಂತಗೊಳಿಸಿದ್ದಾರೆ. ಇತ್ತೀಚೆಗೆ ೮೮ರ ಇಳಿವಯಸ್ಸಿನಲ್ಲಿ ವೇದಾಂತಶಾಸ್ತ್ರದ ಪ್ರಸಿದ್ಧ ಪ್ರಕರಣಗ್ರಂಥವಾದ ಶ್ರೀ ವಿದ್ಯಾರಣ್ಯವಿರಚಿತ 'ಪಂಚದಶೀ' ಗ್ರಂಥದ ಮತ್ತು ಭರ್ತೃಹರಿಯ 'ವಾಕ್ಯಪದೀಯ'ದ 'ಕಾಲಸಮುದ್ದೇಶ' ಮತ್ತು 'ಕ್ರಿಯಾಸಮುದ್ದೇಶ' ಭಾಗಗಳ ವಿವರಣಾತ್ಮಕ ಅನುವಾದವನ್ನೂ ಕನ್ನಡ ಜನತೆಗೆ ನೀಡಿ ಉಪಕರಿಸಿದ್ದಾರೆ.

'ಸೂಕ್ತಿ-ವ್ಯಾಪ್ತಿ' ಬರಹದಲ್ಲಿ ವಿದ್ವಾನ್ ರಂಗನಾಥಶರ್ಮಾ ಅವರು ಆಯ್ಕೆ ಮಾಡಿ ವಿವರಿಸಿರುವ ಶ್ಲೋಕಗಳು ಸಾರ್ವತ್ರಿಕ ಅರ್ಥವ್ಯಾಪ್ತಿಯುಳ್ಳವು. ಅವರ ವ್ಯಾಖ್ಯಾನದಲ್ಲಿ ಎರಡು ವಿಶೇಷತೆಗಳಿವೆ : (೧) ಅರ್ಥವಿವರಣೆಯು ತೀರಾ ಸಂಕ್ಷಿಪ್ತವೂ ಅಲ್ಲದೆ ತೀರಾ ವಿಸ್ತೃತವೂ ಅಲ್ಲದೆ ಹಿತಮಿತವಾಗಿ ಸುಲಭಗ್ರಾಹ್ಯವಾಗಿರುವುದು; (೨) ಶ್ಲೋಕದ ಅರ್ಥವನ್ನು ಇಂದಿನ ಸಾಮಾಜಿಕ ಸನ್ನಿವೇಶದ ಹಿನ್ನೆಲೆಯಲ್ಲಿ ವಿವೇಚಿಸಿರುವುದು. ಈ ವಿಶಿಷ್ಟತೆಯ ಕಾರಣದಿಂದ ಈ ಸಂಪುಟವೂ ಹಿಂದಿನ ಸಂಪುಟಗಳಂತೆ ಕನ್ನಡ ಜನತೆಗೆ ಮೆಚ್ಚಿಕೆಯಾದೀತೆಂದು ಆಶಿಸಿದ್ದೇವೆ.

ಶ್ರೀ ತಾರಣ ಸಂ|| — ಪ್ರಕಾಶಕರು

ಅಧಿಕ ಶ್ರಾವಣ ಬಹುಳ ಪಂಚಮಿ

೫-೮-೨೦೦೪

# ಸೂಕ್ತಿ-ವ್ಯಾಪ್ತಿ

ಸಮುದ್ರಮಥನಾಲ್ಲೇಭೇ ಹರಿರ್ಲಕ್ಷ್ಮೀಂ ಹರೋ ವಿಷಂ ।
ಭಾಗ್ಯಂ ಫಲತಿ ಸರ್ವತ್ರ ನ ವಿದ್ಯಾ ನ ಚ ಪೌರುಷಮ್ ॥೧॥
— ಕ್ಷತ್ರಚೂಡಾಮಣಿ

''ಸಮುದ್ರಮಥನದಿಂದ ವಿಷ್ಣುವಿಗೆ ಲಕ್ಷ್ಮೀದೇವಿ ದೊರೆತಳು; ಶಿವನಿಗೆ ವಿಷ ಸಿಕ್ಕಿತು! ಅವರವರ ಭಾಗ್ಯವು ತಕ್ಕ ಫಲವನ್ನೀಯುತ್ತದೆ. ಅದಕ್ಕೆ ವಿದ್ಯೆಯೂ ಕಾರಣವಲ್ಲ, ಪುರುಷಯತ್ನವೂ ಅಲ್ಲ.''

ಪೌರುಷಕ್ಕಿಂತ ದೈವದ ಉತ್ಕರ್ಷವನ್ನು ಹೇಳುವುದು ಈ ಶ್ಲೋಕದ ಉದ್ದೇಶವಾಗಿದೆ. ಹೀಗೆ ದೈವದ ಹೆಚ್ಚುಗಾರಿಕೆಯನ್ನು ಹೇಳುವ ಶ್ಲೋಕಗಳು ಬೇಕಾದಷ್ಟು ದೊರಕುತ್ತವೆ. ಅಂತೆಯೇ ಪೌರುಷದ ಹೆಚ್ಚುಗಾರಿಕೆಯನ್ನು ಹೊಗಳುವ ಶ್ಲೋಕಗಳೂ ವಿಪುಲವಾಗಿವೆ - 'ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ' ಮುಂತಾದವು. ಇವನ್ನು ನೋಡಿದಾಗ ಸತ್ಯವೇನಿರಬಹುದೆಂಬ ಶಂಕೆ ಹುಟ್ಟಿದರೆ ಆಶ್ಚರ್ಯವಿಲ್ಲ. ಈ ನೀತಿಶಾಸ್ತ್ರಕಾರರು ತಮಗೆ ತೋರಿದಂತೆ ಹೇಳಿಕೊಂಡಿದ್ದಾರೆ ಎಂಬ ಭಾವನೆ ಬರಬಹುದು. ಆದರೆ ವಸ್ತುಸ್ಥಿತಿಯು ಬೇರೆಯಾಗಿದೆ.

ಯೋಗವಾಸಿಷ್ಠದಲ್ಲಿ ಇದಕ್ಕೆ ಸರಿಯಾದ ವಿವರಣೆ ದೊರೆಯುತ್ತದೆ. ದೈವ, ಅದೃಷ್ಟ, ಭಾಗ್ಯ, ವಿಧಿ - ಇವುಗಳ ಅರ್ಥ ಒಂದೇ. ನಮ್ಮ ಪ್ರಯತ್ನವು ಎಂದೂ ವ್ಯರ್ಥವಾಗುವುದಿಲ್ಲ. ಅದು ಒಳ್ಳೆಯದಾದರೆ ಒಳ್ಳೆಯ ಫಲ; ಕೆಟ್ಟದ್ದಾದರೆ ಕೆಟ್ಟ ಫಲ. ಯಾವ ಫಲವು ದೊರೆಯಬೇಕಾದರೂ ಅವರವರ ಪ್ರಯತ್ನವೇ ಕಾರಣ. ಕಾರಣವಿಲ್ಲದೆ ಕಾರ್ಯವು ಹುಟ್ಟುವುದಿಲ್ಲವೆಂಬ ಕಾರ್ಯಕಾರಣಭಾವ ತಪ್ಪುವುದಿಲ್ಲ. ಈ ದಿನ ದುಡಿದ ಹಣ ಈ ದಿನವೇ ಖರ್ಚಾಗಬೇಕೆಂಬ ನಿಯಮವಿಲ್ಲ. ಇಂದು

ಮನೆಯಲ್ಲಿ ತಿನ್ನಲು ಕೊರತೆಯಿಲ್ಲದಾಗ ದುಡಿದ ಹಣವು ಇನ್ನೊಂದು ದಿನ ಬಳಕೆಗೆ ಬರುತ್ತದೆ.

ನಮ್ಮ ಕರ್ಮಕ್ಕೆ ತಕ್ಕಂತೆ ಪಾಪ, ಪುಣ್ಯ ಎಂಬ ಎರಡು ಬಗೆಯ ಸಂಸ್ಕಾರಗಳು ಹುಟ್ಟುತ್ತವೆ. ಇವು ಈಗ ಫಲವನ್ನು ಕೊಡದಿದ್ದರೆ ಮುಂದಿನ ಜನ್ಮದಲ್ಲಿ ಫಲವನ್ನು ಕೊಡುತ್ತವೆಯೆಂದು ಶಾಸ್ತ್ರಕಾರರ ಒಮ್ಮತದ ಅಭಿಪ್ರಾಯ. ಈ ಸಂಸ್ಕಾರಗಳು ಕಣ್ಣಿಗೆ ಕಾಣಿಸುವುದಿಲ್ಲವಾದ್ದರಿಂದ 'ಅದೃಷ್ಟ'. ಇದು ದೇವರ ನಿಯಮವಾದ್ದರಿಂದ 'ದೈವ'. ಇದೇ ಸಂಪಾದಿಸಿದ ಹಣ - 'ಭಾಗ್ಯ'. ನಿಯಮಪ್ರಾಪ್ತವಾದ್ದರಿಂದ 'ವಿಧಿ'. ಏವಂ ಚ ಜನ್ಮಾಂತರದಲ್ಲಿ ಮಾಡಿದ ಕರ್ಮವೇ ದೈವ. ಈ ಜನ್ಮದಲ್ಲಿ ಮಾಡಿದ್ದಾದರೆ ಪೌರುಷ

ಈ ದೈವ-ಪೌರುಷಗಳಲ್ಲಿ ಯಾವುದು ಪ್ರಬಲವೋ ಅದು ಯಶಸ್ವಿಯಾಗುತ್ತದೆ. ಯೋಗವಾಸಿಷ್ಠದಲ್ಲಿ 'ಪೂರ್ವಜನ್ಮಕೃತಂ ಕರ್ಮ ತದ್ದೈವಮಿತಿ ಕಥ್ಯತೇ' - ''ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವೇನಿದೆ, ಅದು ದೈವ ಎನ್ನಿಸಿಕೊಳ್ಳುತ್ತದೆ. ಈ ದೈವವನ್ನು ಪ್ರಬಲವಾದ ಪೌರುಷದಿಂದ ಗೆಲ್ಲಬಹುದು'' ಎಂದು ಹೇಳಿದೆ. ಉದಾಹರಣೆಯಾಗಿ ವಸಿಷ್ಠರು ಶ್ರೀರಾಮನಿಗೆ ತಿಳಿಸುತ್ತಾರೆ:

**ವಿಶ್ವಾಮಿತ್ರೇಣ ಮುನಿನಾ ದೈವಮುತ್ಸೃಜ್ಯ ದೂರತಃ ।**
**ಪೌರುಷೇಣೈವ ಸಂಪ್ರಾಪ್ತೇ ಬ್ರಾಹ್ಮಣ್ಯಂ ರಾಮ ನಾನ್ಯಥಾ ॥**

''ರಾಮ, ವಿಶ್ವಾಮಿತ್ರನು ದೈವದಿಂದ ಕ್ಷತ್ರಿಯನಾಗಿ ಹುಟ್ಟಿದ್ದ. ಆ ದೈವವನ್ನು ಆತನು ದೂರಕ್ಕೆ ತಳ್ಳಿ ತನ್ನ ಪೌರುಷದಿಂದಲೇ ತಪಸ್ಸು ಮಾಡಿ ಬ್ರಾಹ್ಮಣ್ಯವನ್ನು ಸಂಪಾದಿಸಿ ಬ್ರಹ್ಮರ್ಷಿಯಾದ. ಇದು ಪೌರುಷದಿಂದ ಬಂದದ್ದು; ತಾನಾಗಿ ಬಂದದ್ದಲ್ಲ.''

ಆದ್ದರಿಂದ ದೈವ-ಪೌರುಷಗಳೆರಡೂ ಒಂದೇ. ಇವುಗಳಲ್ಲಿ ಭೇದವೇನೂ ಇಲ್ಲ. ದೈವವು ಹಿಂದಿನ ಜನ್ಮಕ್ಕೆ ಸೇರಿದ್ದು; ಪೌರುಷವು ಈ ಜನ್ಮಕ್ಕೆ ಸೇರಿದ್ದು.

ದಾನಂ ದರಿದ್ರಸ್ಯ ವಿಭೋಃ ಕ್ಷಮಿತ್ವಂ
ಯೂನಾಂ ತಪೋ ಜ್ಞಾನವತಾಂ ಚ ಮೌನಮ್ ।
ಇಚ್ಛಾನಿ ವೃತ್ತಿಶ್ಚ ಸುಖೋಚಿತಾನಾಂ
ದಯಾ ಪರೇಷಾಂ ಚ ದಿವಂ ನಯಂತಿ ॥ ೨ ॥

— ಅಜ್ಞಾತಮೂಲ

''ಬಡವನು ಮಾಡುವ ದಾನ, ಪ್ರಭುವಿನ ಕ್ಷಮಾಗುಣ, ಯುವಕರ ತಪಸ್ಸು, ಬಲ್ಲವರಾದರೂ ಮೌನವಾಗಿರುವುದು, ಸುಖವನ್ನು ಭೋಗಿಸ ತಕ್ಕವರಿಗೆ ತೃಪ್ತಿ, ಪರರ ವಿಷಯದಲ್ಲಿ ದಯೆ - ಈ ಗುಣಗಳು ಸ್ವರ್ಗವನ್ನು ಕೊಡತಕ್ಕವು.''

ಇಲ್ಲಿ ಹೇಳಿದ ದಾನ, ಕ್ಷಮೆ, ತಪಸ್ಸು - ಮೊದಲಾದವೆಲ್ಲ ಸದಾ ಸದ್ಗುಣಗಳೇ. ಇವುಗಳಲ್ಲಿ ಒಂದಾದರೂ ಮನುಷ್ಯನಲ್ಲಿ ಅವಶ್ಯ ಇರಬೇಕಾದ ಸದ್ಗುಣಗಳು ಇವು. ಅವುಗಳಲ್ಲಿ ಹಲವಾರು ಅಥವಾ ಸರ್ವಗುಣಗಳೂ ಇರುವುದು ಸರ್ವೋತ್ತಮ. ಅಂತಹ ಜನರು ಲೋಕದಲ್ಲಿ ದುರ್ಲಭ. ಹೀಗಿರುವಾಗ ಬಡವನು ಮಾಡುವ ದಾನ, ಪ್ರಭುವಿನ ಕ್ಷಮಾಗುಣ, ಯುವಕರ ತಪಸ್ಸು ಇತ್ಯಾದಿಯಾಗಿ ಕೆಲವರನ್ನು ಸೇರಿಸಿ ವರ್ಣಿಸಿರುವುದೇಕೆ? ಇದರಲ್ಲೊಂದು ತಾತ್ಪರ್ಯವಿಶೇಷ ಉಂಟು.

ಶ್ರೀಮಂತನು ದಾನ ಮಾಡುವುದು ದೊಡ್ಡದಲ್ಲ; ತನಗೆ ಹೆಚ್ಚಾಗಿದ್ದದ್ದನ್ನು ಕೊಡುತ್ತಾನೆ. ಅದರಿಂದ ಆತನಿಗೆ ಯಾವ ಕೊರತೆಯೂ ಆಗುವುದಿಲ್ಲ. ಒಂದು ಖ್ಯಾತಿಯ ಅಪೇಕ್ಷೆಯಿಂದಲೇ ಬಹುಶಃ ಕೊಡುತ್ತಾನೆ. ಬಡವನಾದರೋ ಹಾಗಲ್ಲ. ಅವನು ದಾನ ಮಾಡದಿದ್ದರೆ ಯಾರೂ ಆಕ್ಷೇಪಿಸುವುದಿಲ್ಲ. ತನ್ನ ಹೊಟ್ಟೆಬಟ್ಟೆಗಳನ್ನು ಕಟ್ಟಿ ಪರರಿಗೆ ಸದುಪಯೋಗವಾಗಲೆಂದು ದಾನ ಮಾಡುತ್ತಾನೆ. ಅಂತಹ ದಾನ ತುಂಬ ಬೆಲೆಬಾಳತಕ್ಕದ್ದು. ಹಾಗೆಯೇ ಕೈಲಾಗದವನಿಗೆ ತಾಳ್ಮೆಯೇ ಗತಿ. ಇಲ್ಲದಿದ್ದರೆ 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ಗಾದೆಯಂತಾದೀತು. ಶ್ರೀಮಂತನೂ

ದೊಡ್ಡ ಅಧಿಕಾರಿಯೂ ತೋರಿಸತಕ್ಕ ಕ್ಷಮೆ, ತಾಳ್ಮೆ ಅಮೂಲ್ಯವಾದವು. ಯುವಕರಿಗೆ ಇಂದ್ರಿಯನಿಗ್ರಹವು ಶಕ್ಯವಾದ್ದಲ್ಲ. ಅವರಲ್ಲಿಯೂ ಅಹಿಂಸೆ, ಸತ್ಯ, ಅಕ್ರೋಧ, ಮೃದುಸ್ವಭಾವ - ಮೊದಲಾದ ದೈವೀಸಂಪತ್ತುಗಳೂ ತಪಸ್ಸಿನ ಇಚ್ಛೆ ಮೊದಲಾದವೂ ತಲೆದೋರಿದರೆ ಅದೆಲ್ಲವೂ ಅತ್ಯಂತ ಪ್ರಶಂಸನೀಯ. ಇನ್ನು ಬಲ್ಲವರ ಮೌನವು ಸದ್ಗುಣವಾಗಬಹುದೋ? ಬಲ್ಲವರಲ್ಲವೆ ಸಭೆಯಲ್ಲಿ ಮಾತಾಡಬೇಕಾದ್ದು? ಆದ್ದರಿಂದ ಈ ಮಾತಿನ ಅಭಿಪ್ರಾಯ ಹೀಗಿರಬಹುದು: 'ನಾಪೃಷ್ಟಃ ಕಸ್ಯಚಿದ್ ಬ್ರೂಯಾತ್' ಎಂಬ ಸುಭಾಷಿತ ಉಂಟು. ಯಾರಾದರೂ ಜಿಜ್ಞಾಸೆಯಿಂದ ಪ್ರಶ್ನೆ ಮಾಡಿದರೆ ಮಾತ್ರ ಉಪದೇಶ ಮಾಡಿ ಆತನಿಗೆ ತಿಳಿವಳಿಕೆಯನ್ನು ಕೊಡಲೇ ಬೇಕಾಗುತ್ತದೆ. ಹಾಗಿಲ್ಲದಿದ್ದಾಗ ತಾನಾಗಿಯೇ ಅನಾವಶ್ಯಕವಾಗಿ ಮಾತಾಡ ಕೂಡದೆಂದು ಅಭಿಪ್ರಾಯ. ಅಲ್ಲದೆ ವಾದಗೋಷ್ಠಿಯಲ್ಲಿ ಪ್ರತಿವಾದಿಯು ಸೋತಾಗ ಶಾಂತವಾಗಿ ಸುಮ್ಮನಾಗಬೇಕು. ಮತ್ತೆ ಮಾತು ಬೆಳೆಸಿ ಪ್ರತಿವಾದಿಯ ತೇಜೋವಧೆಯನ್ನು ಮಾಡಕೂಡದು. ಸುಖಪಡಲು ಬೇಕಾದಷ್ಟು ಇದ್ದಾಗ ಅಷ್ಟರಲ್ಲಿಯೇ ತೃಪ್ತಿಯಿರಬೇಕು. ಅತ್ಯಾಸೆ ಒಳ್ಳೆಯದಲ್ಲ. ದೀನರಲ್ಲಿ ದಯೆ ಶ್ಲಾಘನೀಯವಾದದ್ದೇ. ದಯೆ ಯಾವಾಗಲೂ ಪರರಿಗೇ ಸಲ್ಲತಕ್ಕದ್ದು. ಆದರೂ ಮತ್ತೆ 'ಪರೇಷಾಂ' ಎಂದು ಹೇಳಿದ್ದೇಕೆ? 'ಪರ' ಶಬ್ದಕ್ಕೆ ಶತ್ರುವೆಂಬ ಇನ್ನೊಂದು ಅರ್ಥವಿದೆ. ತನಗೆ ಅಪಕಾರ ಮಾಡಿದವನು ಶತ್ರು. ಅವನ ವಿಷಯದಲ್ಲಿಯೂ ಮಾನವಧರ್ಮದಿಂದ ವರ್ತಿಸತಕ್ಕದ್ದು. ಕೊಲೆ, ಮನೆಗೆ ಬೆಂಕಿಹಚ್ಚುವುದು ಮುಂತಾದ ಹೀನಕೃತ್ಯಗಳಿಗೆ ಇಳಿಯಕೂಡದು. ತನಗೆ ಆತನಿಂದ ಅನ್ಯಾಯವಾಗಿದ್ದರೆ ನ್ಯಾಯಾಲಯಕ್ಕೆ ಹೋಗಿ ದೂರು ಕೊಡಬಹುದು. ಸೌಮ್ಯಮಾರ್ಗದಿಂದ ಅಪಕಾರಿಯನ್ನೆದುರಿಸಬೇಕೇ ಹೊರತು ಕ್ರೂರಮಾರ್ಗದಿಂದ ಅಲ್ಲ.

**ಏಕೇನಾಪಿ ಸುಪುತ್ರೇಣ ಸಿಂಹೀ ಸ್ವಪಿತಿ ನಿರ್ಭಯಂ ।**
**ಸಹೈವ ದಶಭಿಃ ಪುತ್ರೈರ್ಭಾರಂ ವಹತಿ ಗರ್ದಭೀ ॥ ೩ ॥**

— *ಸುಭಾಷಿತರತ್ನ-ಭಾಂಡಾಗಾರ*

"ಒಬ್ಬನೇ ಒಬ್ಬ ಸುಪುತ್ರನಿದ್ದರೂ ಸಾಕು, ಸಿಂಹಿಯು ನಿರ್ಭಯವಾಗಿ ನಿದ್ರೆಮಾಡುತ್ತದೆ. ಕತ್ತೆಯಾದರೋ ಹತ್ತು ಮಕ್ಕಳಿದ್ದರೂ ಅವರ ಜೊತೆಗೆ ತಾನೂ ಭಾರವನ್ನು ಹೊರುತ್ತಲೇ ಇರುತ್ತದೆ!"

ಕಾಡುಪ್ರಾಣಿಗಳ ಜೀವನ ತುಂಬ ಕಠಿಣವಾದದ್ದು. ಮನುಷ್ಯನಿಗಿರುವಂತೆ ನೂರಾರು ಚಿಂತೆಗಳು ಅವುಗಳಿಗಿಲ್ಲವಾದರೂ ಆಹಾರ, ನಿದ್ರೆ ಇವೆರಡರ ಚಿಂತೆ ಅವುಗಳಿಗೆ ತಪ್ಪಿದ್ದಲ್ಲ. ದಿನವೆಲ್ಲ ಆಹಾರಸಂಪಾದನೆಗೆ ಮೀಸಲು. ಆಹಾರವು ಸುಲಭವಾಗಿ ದೊರಕತಕ್ಕದ್ದೂ ಅಲ್ಲ. ಅದಕ್ಕಾಗಿ ಕಾಡೆಲ್ಲವನ್ನೂ ಸುತ್ತಬೇಕು. ಸುತ್ತುವಾಗ ತನಗಿಂತ ಬಲಿಶಾಲಿಗಳಾದ ಇತರ ಮೃಗಗಳ ದಾಳಿಯನ್ನೂ ಬೇಟೆಗಾರರ ಬಂದೂಕಿನ ಹೊಡೆತವನ್ನೂ ತಪ್ಪಿಸಿಕೊಳ್ಳಬೇಕು. ಒಂದೊಂದು ಕ್ಷಣದಲ್ಲಿಯೂ ಆ ಪ್ರಾಣಿಗಳಿಗೆ ಪ್ರಾಣಭಯವಿರುತ್ತದೆ. ಹೇಗೋ ಕಷ್ಟದಿಂದ ಆಹಾರವನ್ನು ಸಂಪಾದಿಸಿ ತಿಂದು ನಿದ್ರಿಸುವಂತೆಯೂ ಇಲ್ಲ. ಆಗಲೂ ಕ್ರೂರಮೃಗಗಳಿಂದ ಅಥವಾ ಕ್ರೂರಮೃಗಗಳಂತಿರುವ ಬೇಟೆಗಾರರಿಂದ ಹೆದರಿಕೆ ಇದ್ದೇ ಇದೆ. ಆದರೆ ಹೆಣ್ಣು ಸಿಂಹಕ್ಕೆ ಈ ಹೆದರಿಕೆ ಇಲ್ಲ. ಮರಿಸಿಂಹವು ಅದಕ್ಕೆ ಕಾವಲಾಗಿರುತ್ತದೆ. ಅದು ಸುಳಿದಾಡುತ್ತಿದ್ದರೆ, ಶತ್ರು ಯಾರೂ ಹತ್ತಿರ ಸುಳಿಯದು. ಕತ್ತೆಯ ಮರಿಗಳಾದರೋ ತಾಯಿಯ ಹೊರೆಯನ್ನು ತಪ್ಪಿಸುವುದಿರಲಿ, ತಾಯಿಯ ಜೊತೆಗೆ ತಾವೂ ಹೊರೆಯನ್ನು ಹೊರುತ್ತವೆ! ಅವು ಹತ್ತು ಸಂಖ್ಯೆಯಲ್ಲಿದ್ದರೂ ಸತ್ತವರ ಪಟ್ಟಿಯಲ್ಲಿ ಸೇರತಕ್ಕವೇ.

ವಸುದೇವನಿಗ ಶ್ರೀಕೃಷ್ಣ, ಬಲರಾಮ - ಇಬ್ಬರು ಮಕ್ಕಳು. ಶ್ರೀಕೃಷ್ಣನೊಬ್ಬನೇ ಕಂಸನನ್ನು ಕೊಂದು ತಂದೆತಾಯಿಗಳ ಸೆರೆಯನ್ನು ಬಿಡಿಸಿದ. ಉಗ್ರಸೇನ ಮತ್ತು ಎಲ್ಲ ಪ್ರಜೆಗಳ ಸೆರೆಯನ್ನೂ ಬಿಡಿಸಿದ. ತಂದೆ ವಸುದೇವನ ಹೆಸರು ಸ್ಥಿರಸ್ಥಾಯಿಯಾಗುವಂತೆ ಮಾಡಿದ. ಧೃತರಾಷ್ಟ್ರನಿಗೆ ನೂರು ಜನ ಮಕ್ಕಳಿದ್ದರೂ ಪ್ರಯೋಜನವಾಗಲಿಲ್ಲ, ಕಣ್ಣೀರು ಸುರಿಸುವುದು ತಪ್ಪಲಿಲ್ಲ. ಕಣ್ಣಿಂದಲೂ ಕುರುಡ, ಬುದ್ಧಿಯಿಂದಲೂ ಕುರುಡ - ಎಂಬ ಅಪಖ್ಯಾತಿ ಮಕ್ಕಳ ದೆಸೆಯಿಂದ ಪ್ರಾಪ್ತವಾಯಿತು.

ಜರ್ಮನಿ, ಜಪಾನ್ ದೇಶಗಳು ಹಿಂದಿನ ಮಹಾಯುದ್ಧದಲ್ಲಿ ಸೋತು ನೆಲಕಚ್ಚಿದ್ದವು. ಜರ್ಮನಿಯ ಪಾಡು ನಾಯಿಪಾಡಾಗಿತ್ತು. ಜನಸಂಖ್ಯೆಯ ಮಾರಣಹೋಮವಾಗಿತ್ತು. ಹೆಣ್ಣುಗಳಿಗೆ ಮದುವೆಯಾಗಲು ಗಂಡು ಸಿಗುತ್ತಿರಲಿಲ್ಲ. ಈಗ ನೋಡಿ, ಅವೆರಡು ರಾಷ್ಟ್ರಗಳೂ ಆಕಾಶದೆತ್ತರಕ್ಕೆ ಬೆಳೆದು ನಿಂತಿವೆ. ನಮಗೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದವು. ಅಖಂಡಭಾರತದಲ್ಲಿ ಪ್ರಜಾಸಂಖ್ಯೆ ಮೂವತ್ತುಮೂರು ಕೋಟಿ ಇತ್ತು. ಇಬ್ಭಾಗವಾದ ಈ ತುಂಡಿನಲ್ಲಿಯೇ ನಮ್ಮ ಸಂಖ್ಯೆ ಈಗ (೧೯೯೯) ತೊಂಬತ್ತುಮೂರು ಕೋಟಿಗೇರಿದೆ. ಐವತ್ತು ವರ್ಷಗಳಿಂದ ಗಳಿಸಿದ್ದು ಸಾಲದ ಹೊರೆ. ವರಕವಿ ದ.ರಾ. ಬೇಂದ್ರೆಯವರ ಕ್ಷಮೆಯನ್ನು ಕೇಳಿ ಭಾರತಾಂಬೆಯ ಪಾಡನ್ನು ಕುರಿತು ಈಗ ಹೀಗೆ ಹಾಡಬಹುದು -

ಮಕ್ಕಳಿವರೇನಮ್ಮ ಮಕ್ಕಳಿವರೇನಮ್ಮ
ತೊಂಬತ್ತುಮೂರು ಕೋಟಿ
ನಾ ಹಡೆದ ತೊಂಬತ್ತುಮೂರು ಕೋಟಿ ।
ಹಲಕೆಲವು ಹುಳುಗಳೆನ್ನಿ। ಹಲಕೆಲವು ಕುರುಡು ಕುನ್ನಿ ।
ಕೆಲಕೆಲವು ತುಂಟನರಿ । ಕೆಲವು ತೋಳಗಳ ಮರಿ ।
ಮಕ್ಕಳಿವರೇನಮ್ಮ ತೊಂಬತ್ತುಮೂರು ಕೋಟಿ ।

ಏಳಿರೋ ಬೀಳಲೆಂಬೆ । ಆಳಿರೋ ಅಳಿಯಲೆಂಬೆ ।
ಕೂಡಿರೋ ಕೂಡಲೆಂಬೆ । ಮಾಡಿರೋ ಮಡಿಯಲೆಂಬೆ ।
ದುಡಿಯಿರೋ ಕಡಿಯಲೆಂಬೆ । ಕುಡಿಯಲೆಂಬೆ ॥

ನಾಂತರಜ್ಞಾಃ ಶ್ರಿಯೋ ಜಾತು ಪ್ರಿಯೈರಾಸಾಂ ನ ಭೂಯತೇ ।
ಆಸಕ್ತಾಸ್ತಾಸ್ವಮೀ ಮೂಢಾ ವಾಮಶೀಲಾ ಹಿ ಜಂತವಃ ॥ ೪ ॥
— ಕಿರಾತಾರ್ಜುನೀಯ, ೧೧-೨೪

''ಗುಣಶಾಲಿಗೂ ನೀಚಮನುಷ್ಯನಿಗೂ ಇರುವ ಭೇದವನ್ನು ಸಂಪತ್ತು ಎಂದೂ ಗಮನಿಸುವುದಿಲ್ಲ. ಸಂಪತ್ತಿಗೆ ಪ್ರಿಯರಾದವರು ಯಾರು - ಎಂಬ ವ್ಯವಸ್ಥೆ ಏನೂ ಇಲ್ಲ. ಅಂತಹ ಸಂಪತ್ತಿನಲ್ಲಿಯೂ ಬುದ್ಧಿಗೇಡಿಗಳು ಆಸಕ್ತರಾಗಿರುತ್ತಾರೆ. ಏಕೆಂದರೆ ಜನರ ಸ್ವಭಾವವೇ ವಕ್ರವಾದದ್ದು.''

ಸಂಸ್ಕೃತದಲ್ಲಿ ಶ್ರೀ, ಲಕ್ಷ್ಮೀ, ಸಂಪತ್ - ಇವು ಸ್ತ್ರೀಲಿಂಗಗಳು. ಸಂಪತ್ತುಗಳು ಸ್ತ್ರೀಯರೆಂಬ ಕಲ್ಪನೆಯಿಂದ ಈ ಶ್ಲೋಕದ ವರ್ಣನೆ ಇದೆ. ಇದು ವೇಶ್ಯಾಸ್ತ್ರೀಯರ ನಡತೆಯನ್ನು ಹೋಲುತ್ತದೆ. ಐಶ್ವರ್ಯಕ್ಕಾಗಿ ಹಂಬಲಿಸತಕ್ಕವರು ಸೂಳೆಯರಿಗಾಗಿ ಹಂಬಲಿಸಿದವರಂತೆ ಕಷ್ಟಕ್ಕೆ ಒಳಗಾಗುತ್ತಾರೆಂಬುದು ಭಾರವಿಮಹಾಕವಿಯ ಆಶಯ.

ಅರ್ಜುನನು ದಿವ್ಯಾಸ್ತ್ರಗಳನ್ನು ಪಡೆಯುವುದಕ್ಕಾಗಿ ಇಂದ್ರಕೀಲದಲ್ಲಿ ತಪಸ್ಸು ಮಾಡುತ್ತಿದ್ದಾಗ, ಅವನ ನಿಶ್ಚಯವೇನೆಂಬುದನ್ನು ಪರೀಕ್ಷಿಸುವುದಕ್ಕಾಗಿ ಇಂದ್ರನು ವೃದ್ಧಬ್ರಾಹ್ಮಣನ ವೇಷದಿಂದ ಬಂದು ಹೇಳುತ್ತಿದ್ದಾನೆ:

''ಅಯ್ಯಾ, ನೀನು ಧನುರ್ಧಾರಿಯಾಗಿ ತಪಸ್ಸಿನಲ್ಲಿ ತೊಡಗಿರುವುದನ್ನು ನೋಡಿದರೆ ನಿನಗೆ ಹೊಡೆದಾಟದ ಇಚ್ಛೆಯಿದೆಯೆಂದು ಗೊತ್ತಾಗುತ್ತದೆ! ನೀನು ಪರಲೋಕದ ಶ್ರೇಯಸ್ಸಿಗಾಗಿ ತಪಸ್ಸು ಮಾಡುತ್ತಿಲ್ಲ; ಇಹಲೋಕದ ಪ್ರೇಯಸ್ಸು ಅರ್ಥಕಾಮಗಳು ನಿನಗೆ ಬೇಕಾಗಿವೆ. ಕಷ್ಟಪಟ್ಟು ತಪಸ್ಸು ಮಾಡಿ ಐಶ್ವರ್ಯವನ್ನು ಗಳಿಸಬೇಕೆ? ಹಾಗಿದ್ದರೆ ಅದು ಶಾಶ್ವತವೆಂದು ತಿಳಿಯಬೇಡ. ಅದನ್ನು ಗಳಿಸಲು ಮನುಷ್ಯಪ್ರಯತ್ನವೇ ಸಾಕಾಗುತ್ತದೆ. ಕೆಟ್ಟವರಲ್ಲಿಯೂ ಲಕ್ಷ್ಮಿಯು ಇರುವುದುಂಟು. ನಿನ್ನ ಈ ಭಕ್ತಿ-ತಪಸ್ಸು ಕ್ಷುದ್ರವಾದ ಹಣಕ್ಕಾಗಿ ವಿನಿಯೋಗವಾಗಕೂಡದು. ನೀನಾದರೋ ಅಂತಹ ಅಲ್ಪಫಲದಲ್ಲಿಯೇ ಆಸಕ್ತನಾಗಿದ್ದೀಯೆ. ಏನು ಮಾಡುವುದು, ಮನುಷ್ಯರ ಸ್ವಭಾವವೇ ವಕ್ರ!''

ಧರ್ಮ, ಅರ್ಥ, ಕಾಮ, ಮೋಕ್ಷ - ಇವು ನಾಲ್ಕು ಪುರುಷಾರ್ಥಗಳು. ಪುರುಷ ಎಂದರೆ ಮನುಷ್ಯ ಎಂದರ್ಥ. ಗಂಡಸು ಎಂದಲ್ಲ. ಮನುಷ್ಯಜನ್ಮದ ಗುರಿ ಇವು ನಾಲ್ಕು - ಎಂಬುದು ನಮ್ಮ ಶಾಸ್ತ್ರಕಾರರ ನಿರ್ಣಯ. ಅರ್ಥ, ಕಾಮಗಳನ್ನು

ಸಾಧಿಸಬೇಕೆಂದು ಶಾಸ್ತ್ರವೇನೂ ಬೋಧಿಸಬೇಕಾಗಿಲ್ಲ. ಮನುಷ್ಯಮಾತ್ರನಿಗೆ ಅವುಗಳಲ್ಲಿ ಆಸಕ್ತಿ ಸ್ವತಃ ಇರುತ್ತದೆ. ಆದರೆ ಅದನ್ನು ಧರ್ಮಮಾರ್ಗದಿಂದಲೇ ಪಡೆದು ಅನುಭವಿಸಬೇಕೆಂದು ಶಾಸ್ತ್ರವು ಗೊತ್ತುಮಾಡಿದೆ. ಅದಕ್ಕಾಗಿಯೇ ಮೊದಲು ಧರ್ಮವನ್ನು ಹೇಳಿರುವುದು. ತಪಸ್ಸು ಧರ್ಮದಲ್ಲಿ ಸೇರುತ್ತದೆ. ಅದನ್ನು ಆಚರಿಸುವುದು ಕ್ಲೇಶಕರ. ಧನಕಾಮನೆಯಿಂದ ತಪಸ್ಸಿನವರೆಗೆ ಹೋಗಬೇಕಾಗಿಲ್ಲ. ಮನುಷ್ಯಪ್ರಯತ್ನದಿಂದಲೇ, ಧರ್ಮಕ್ಕೆ ವಿರೋಧವಾಗದಂತೆ ಗಳಿಸಲು ಸಾಧ್ಯವಿದೆ. ತಪಸ್ಸಾದರೋ ನಾಲ್ಕನೆಯ ಪುರುಷಾರ್ಥವಾದ ಮೋಕ್ಷಕ್ಕಾಗಿ ವಿನಿಯೋಗಿಸಬೇಕಾದದ್ದು. ಅದರೆದುರಿಗೆ ಅರ್ಥಕಾಮಗಳು ಕ್ಷುದ್ರವಾದವು. ಇವು ಸ್ಥಿರವಾದವೂ ಅಲ್ಲ. ಕೆಟ್ಟ ಜನರೂ ಮೋಸದಿಂದ ಸಂಪಾದಿಸಬಲ್ಲರು. ಅತಿ ಕಠಿಣವಾದ ತಪಸ್ಸಿನಿಂದ ಕ್ಷುದ್ರವಾದ ಐಶ್ವರ್ಯವನ್ನು ಪಡೆಯುವುದು ದಡ್ಡತನವೇ ಸರಿ.

'ಅರ್ಥಮನರ್ಥಂ ಭಾವಯ ನಿತ್ಯಂ' ಎಂದು ಹೇಳಿರುವುದು ಪರಮಸತ್ಯವೇ ಹೌದು. ನಿತ್ಯಜೀವನಕ್ಕೆ ಎಷ್ಟು ಆವಶ್ಯಕವೋ ಅಷ್ಟು ಸಾಕು. ಅದಕ್ಕಿಂತ ಹೆಚ್ಚು ಧನವನ್ನು ಕೂಡಿಹಾಕುವುದು ಇನ್ನೊಬ್ಬರನ್ನು ದೋಚಿ ತಂದಂತೆ. 'ಪುತ್ರಾದಪಿ ಧನಭಾಜಾಂ ಭೀತಿಃ'. ಪತ್ರಿಕೆಗಳಲ್ಲಿ ಪ್ರತಿದಿನ ಜನರು ಇದನ್ನು ಓದುತ್ತಲೇ ಇದ್ದಾರೆ. ಆದರೆ ಜನರು ತಮ್ಮ ಶೀಲವನ್ನು ತಿದ್ದಿಕೊಳ್ಳಲಿಲ್ಲ. ವಾಮಶೀಲಾ ಹಿ ಜಂತವಃ !

**ಘಾತಯಿತುಮೇವ ನೀಚಃ ಪರಕಾರ್ಯಂ ವೇತ್ತಿ ನ ಪ್ರಸಾಧಯಿತುಮ್ ।**
**ಪಾತಯಿತುಮಸ್ತಿ ಶಕ್ತಿಃ ವಾಯೋರ್ವೃಕ್ಷಂ ನ ಚೋನ್ನಮಿತುಮ್ ॥ ೫ ॥**

— *ಪಂಚತಂತ್ರ, ಮಿತ್ರಭೇದ - ೩೯೪*

''ಪರರ ಕಾರ್ಯವನ್ನು ಕೆಡಿಸುವುದು ಹೇಗೆಂಬುದು ಮಾತ್ರ ನೀಚಮನುಷ್ಯನಿಗೆ ಗೊತ್ತಿರುತ್ತದೆ. ಅದನ್ನು ಉತ್ತಮಪಡಿಸುವುದು ಹೇಗೆಂಬುದು ಅವನಿಗೆ ತಿಳಿಯದು. ಬಿರುಗಾಳಿಗೆ ಮರವನ್ನು ಉರುಳಿಸುವ ಶಕ್ತಿ ಇದೆ, ಬಿದ್ದದ್ದನ್ನು ಎತ್ತಿ ನಿಲ್ಲಿಸುವ ಶಕ್ತಿ ಮಾತ್ರ ಇಲ್ಲ!''

'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎಂಬ ಗಾದೆ ಇದೆ. ಕಟ್ಟುವುದು, ಕಾರ್ಯವನ್ನು ಮಾಡುವುದು ಕಷ್ಟ. ಒಡೆಯುವುದು, ಹಾಳುಮಾಡುವುದು ಸುಲಭ. 'ಕುಂಬಾರನಿಗೆ ಬೇಕು ವರ್ಷ, ದೊಣ್ಣೆಗೆ ಸಾಕು ನಿಮಿಷ' ಎಂಬ ಗಾದೆಯೂ ಉಂಟು. ಮನೆ ಕಟ್ಟುವಾಗ ಒಬ್ಬನು ಅನುಭವಿಸಬೇಕಾದ ಕಷ್ಟವು ಬುಲ್‌ಡೋಜರಿಗೆ ತಿಳಿಯದು, ಐದು ನಿಮಿಷಗಳಲ್ಲಿ ಮನೆಯನ್ನು ನೆಲಸಮ ಮಾಡಿ ಮುಂದೆ ಸಾಗಬಲ್ಲದು. ದುಷ್ಟಜನರು ಸಾಧಿಸುವ ಕಾರ್ಯ ಇಂತಹುದೇ. ಬಹುದಿನಗಳ ವ್ಯವಹಾರದಿಂದ ಗೊತ್ತಾದ ಒಂದು ಮದುವೆಯನ್ನು ಚಾಡಿ ಹೇಳಿ ನಿಲ್ಲಿಸಿ ಬಿಡತಕ್ಕವರಿದ್ದಾರೆ. ಈ ಚಾಡಿಖೋರರಿಗೆ ಪಿಶುನರೆಂದು ಹೆಸರು. ಈ ಪೈಶುನ್ಯ ಅಥವಾ ಪಿಶುನತೆ ಸಾಮಾಜಿಕ ವ್ಯವಹಾರದಲ್ಲಿ, ಹಣಕಾಸುಗಳಿಗೆ ಸಂಬಂಧಿಸಿದ ಉದ್ಯೋಗದಲ್ಲಿ, ರಾಜಕೀಯದಲ್ಲಿ ಎಲ್ಲೆಡೆಯೂ ವಿಜೃಂಭಿಸಿದೆ. ಗೆದ್ದಲಿನಂತೆ ಒಳಗೊಳಗೇ ಸೇರಿಕೊಂಡು ಸಮಾಜವನ್ನು ಕಡಿದು, ವ್ಯವಹಾರವನ್ನು ಮುರಿದು, ರಾಜಕೀಯವನ್ನು ಒಡೆಯುತ್ತದೆ. ಹೊಟ್ಟೆಕಿಚ್ಚು, ದ್ವೇಷಸಾಧನೆಯ ಫಲ, ಸ್ವಾರ್ಥ - ಇವು ಪಿಶುನರೆಂಬ ಗೆದ್ದಲುಹುಳುಗಳಿಗೆ ಆಹಾರ.

ಇಬ್ಬರು ನವದಂಪತಿಗಳು ಅನ್ಯೋನ್ಯಪ್ರೇಮದಿಂದ ಸಂತೋಷವಾಗಿದ್ದರು. ಒಬ್ಬ ಹೊಟ್ಟೆಕಿಚ್ಚಿನ ಮನುಷ್ಯನಿಗೆ ಅದು ಸಹಿಸಲಿಲ್ಲ. ದಾಂಪತ್ಯವನ್ನೊಡೆಯಲು ಹವಣಿಸಿದ. ಅವರಲ್ಲಿ ಹೆಣ್ಣಿನ ಬಳಿಗೆ ಹೋಗಿ ''ನೀನು ಉತ್ತಮಜಾತಿಯವಳು, ದೊಡ್ಡಕುಲದವಳು. ನಿನಗೆ ತಕ್ಕ ಗಂಡಸು ಸಿಗಲಿಲ್ಲ. ಅವನು ಉಪ್ಪಾರಜಾತಿಯವನು. ಅವನ ವಂಶದವರೆಲ್ಲ ಉಪ್ಪು ಮಾರಿ ಜೀವಿಸುತ್ತಿದ್ದರು. ಈಗಲೂ ಪರೀಕ್ಷಿಸಿ ನೋಡಬಹುದು. ರಾತ್ರಿ ನಿನ್ನ ಗಂಡನಿಗೆ ನಿದ್ರೆ ಬಂದಾಗ ಅವನ ಬೆನ್ನನ್ನು ನೆಕ್ಕಿ ನೋಡು, ಉಪ್ಪು ಉಪ್ಪಾಗಿರುತ್ತದೆ'' ಎಂದು ಹೇಳಿದ. ಆ ಮುಗ್ಧೆ ಹಾಗೆಯೇ ನಿಶ್ಚಯಿಸಿದಳು. ಈ ಪಿಸುಣನು ಗಂಡನ ಬಳಿಗೆ ಹೋಗಿ ''ನಿನ್ನ ಯೋಗ್ಯತೆಗೆ ತಕ್ಕ ಹೆಂಡತಿ ಸಿಗಲಿಲ್ಲ. ನೀನು ದೊಡ್ಡ ವಂಶದವನು. ನಿನ್ನ ಹೆಂಡತಿ ಹಿಂದಿನ ಜನ್ಮದಲ್ಲಿ ನಾಯಿಯಾಗಿದ್ದಳು. ಈಗಲೂ ಆ ನಾಯಿಯ ಗುಣವೇ ಬಂದಿದೆ. ಬೇಕಾದರೆ ಪರೀಕ್ಷಿಸಿ ನೋಡು. ರಾತ್ರಿಯಲ್ಲಿ ನಿನಗೆ ನಿದ್ರೆ ಬಂದಿದೆಯೆಂದು ತಿಳಿದಾಗ ನಿನ್ನ ಬೆನ್ನನ್ನು

ನೆಕ್ಕುತ್ತಾಳೆ'' ಎಂದು ಹೇಳಿದ. ಆ ಮುಠ್ಠಾಳನೂ ಅದನ್ನು ನಂಬಿದ. ಚಾಡಿಖೋರನು ಹೇಳಿದಂತೆಯೇ ಆಯಿತು. ದಂಪತಿಗಳಲ್ಲಿ ಜಗಳ ಹುಟ್ಟಿ ವಿವಾಹವಿಚ್ಛೇದನದಲ್ಲಿ ಮುಗಿಯಿತು.

ಹಾಲಿನಂತಹ ಸಂಸಾರಕ್ಕೆ ಹುಳಿಹಿಂಡತಕ್ಕದ್ದು ಈ ಪಿಶುನತೆ. ಪುರಾಣೇತಿಹಾಸ ಗಳಲ್ಲಿಯೂ ಇದರ ಹಾವಳಿ ನಡೆದಿದೆ. ರಾಮಾಯಣದಲ್ಲಿ ಮಂಥರೆಯ ಚಾಡಿ, ಭಾರತದಲ್ಲಿ ಶಕುನಿಯ ಚಾಡಿ - ಇವುಗಳಿಂದ ಆದ ಅನರ್ಥ ಸರ್ವವಿದಿತ.

ಮೊನ್ನೆಮೊನ್ನೆ (೧೯೯೯) ವಾಜಪೇಯಿಯವರ ಸರ್ಕಾರವನ್ನು ಉರುಳಿಸಿದ್ದು ಇದೇ ಪಿಶುನತೆಯ ವಿಜೃಂಭಣೆ. ಎದುರುಪಕ್ಷಗಳು ಕೇವಲ ಹೊಟ್ಟೆಕಿಚ್ಚಿನಿಂದ ಒಂದಾದವು. ಪ್ರತಿಸರ್ಕಾರವನ್ನು ಸ್ಥಾಪಿಸುವ ಶಕ್ತಿ ಇಲ್ಲದಿದ್ದರೂ ಚಾಡಿಯ ಮಾತುಗಳನ್ನು ಕೇಳಿದವು. ನಮ್ಮ ಎರಡು ಕಣ್ಣುಗಳು ಹೋದರೂ ಚಿಂತೆ ಇಲ್ಲ, ವೈರಿಯ ಒಂದು ಕಣ್ಣಾದರೂ ಕುರುಡಾಗಲಿ !

**ಸ್ವಭಾವೋ ನೋಪದೇಶೇನ ಶಕ್ಯತೇ ಕರ್ತುಮನ್ಯಥಾ ।**
**ಸುತಪ್ತಮಪಿ ಪಾನೀಯಂ ಪುನರ್ಗಚ್ಛತಿ ಶೀತತಾಮ್ ॥ ೬ ॥**

— *ಪಂಚತಂತ್ರ, ಮಿತ್ರಭೇದ - ೨೮೦*

''ಉಪದೇಶವನ್ನು ಮಾಡುವುದರಿಂದ ಇನ್ನೊಬ್ಬರ ಸ್ವಭಾವವನ್ನು ಮಾರ್ಪಡಿಸಲು ಸಾಧ್ಯವಾಗದು. ನೀರನ್ನು ಎಷ್ಟು ಬಿಸಿ ಮಾಡಿದರೂ, ಸ್ವಲ್ಪ ಹೊತ್ತಿನ ಮೇಲೆ ಅದು ಮತ್ತೆ ತಣ್ಣಗಾಗಿಬಿಡುತ್ತದೆ.''

ತಣ್ಣಗಿರುವುದು ನೀರಿನ ಹುಟ್ಟುಗುಣ. ತಾತ್ಕಾಲಿಕವಾಗಿ ಬೆಂಕಿಯಿಂದ ಬಿಸಿಯಾದರೂ ಮತ್ತೆ ಅದು ತಣ್ಣಗಾಗುವುದು ನಮ್ಮ ಅನುಭವದಲ್ಲಿದೆ. ಸ್ವೋ ಭಾವಃ ಸ್ವಭಾವಃ : ತನ್ನದೇ ಆದ ಹುಟ್ಟುಗುಣ. ಸಿಹಿಯಾಗಿರುವುದು ಸಕ್ಕರೆಯ ಗುಣ. ಉಪ್ಪಾಗಿರುವುದು ಉಪ್ಪಿನದು. ಖಾರವಾಗಿರುವುದು ಮೆಣಸಿನದು.

ಸತ್ತ್ವರಜಸ್ತಮೋಗುಣಗಳ ಮಿಶ್ರಣ ಮನುಷ್ಯನಲ್ಲಿದೆ. ಒಬ್ಬರಲ್ಲಿ ಒಂದು ಹೆಚ್ಚು, ಇನ್ನೊಂದು ಕಡಮೆ. ಅಂತೂ ಇವು ಮೂರೂ ಇದ್ದೇ ಇರುತ್ತವೆ. ಇನ್ನೊಬ್ಬರ ಸಹವಾಸದಿಂದ, ಬೋಧನೆಯಿಂದ ಬರತಕ್ಕದ್ದು ತಾತ್ಕಾಲಿಕ. ಅದನ್ನು ಪರಿವರ್ತಿಸಲು ಸಾಧ್ಯ.

ಶಮದಮಾದಿಗಳು ಸಾತ್ತ್ವಿಕ ಗುಣಗಳು. ಕಾಮಕ್ರೋಧಾದಿಗಳು ರಾಜಸ. ಆಲಸ್ಯ, ಜಡತೆ ಮೊದಲಾದವು ತಾಮಸ. ಇವು ಜನ್ಮಾಂತರದ ಸಂಸ್ಕಾರದಿಂದ ಬಂದವೆಂದು ದಾರ್ಶನಿಕರ ಮತವಿದೆ. ಸತತವಾದ ಸ್ವಪ್ರಯತ್ನದಿಂದ ಇವುಗಳಲ್ಲಿ ಪರಿವರ್ತನೆಯಾಗ ಬಹುದೆಂದೂ ಬರಿಯ ಉಪದೇಶದಿಂದ ಹೆಚ್ಚಿನ ಪರಿಣಾಮವಾಗದೆಂದೂ ಶಾಸ್ತ್ರಕಾರರ ಅಭಿಮತವಿದೆ. ಬೇವಿನಮರಕ್ಕೆ ಜೇನುತುಪ್ಪದಿಂದ ಅಭಿಷೇಕ ಮಾಡಿದರೂ ಕಹಿಯೇ. ಕೊಡಲಿಯಿಂದ ಕಡಿದರೂ ಕಹಿ. ಕಹಿ ಅದರ ಹುಟ್ಟುಗುಣ. ಶ್ರೀಗಂಧವನ್ನು ಕಡಿದರೂ ತೇಯ್ದರೂ ಸುಟ್ಟರೂ ಸಹ ಅದು ಸುಗಂಧವನ್ನು ಕಳೆದುಕೊಳ್ಳದು. ಮನುಷ್ಯನ ಸ್ವಭಾವವೂ ಅಷ್ಟೆ.

ಸೀತಾದೇವಿಯನ್ನು ಶ್ರೀರಾಮನಿಗೆ ಒಪ್ಪಿಸಬೇಕೆಂದು ನಾಲ್ಕಾರು ಜನರು ರಾವಣನಿಗೆ ಆಪ್ತರಾಗಿ ಉಪದೇಶಿಸಿದರು. ಅವನು ಯಾರ ಮಾತನ್ನೂ ಕೇಳಲಿಲ್ಲ.

**ದ್ವಿಧಾ ಭಜ್ಯೇಯಮಪ್ಯೇವಂ ನ ನಮೇಯಂತು ಕಸ್ಯಚಿತ್ ।**
**ಏಷ ಮೇ ಸಹಜೋ ದೋಷಃ ಸ್ವಭಾವೋ ದುರತಿಕ್ರಮಃ ॥**

- ಎಂದುಬಿಡುತ್ತಾನೆ. ''ಹೀಗೆಯೇ ಎರಡು ಸೀಳಾಗಿಹೋದೇನು. ಆದರೆ ಇನ್ನೊಬ್ಬನಿಗೆ ನಾನು ತಲೆಬಾಗುವುದಿಲ್ಲ. ಇದು ನನ್ನ ಸ್ವಾಭಾವಿಕವಾದ ದೋಷ! ಸ್ವಭಾವವನ್ನು ಮೀರಲಾಗುವುದಿಲ್ಲ.'' ತನ್ನದು ತಪ್ಪೆಂದು ಅವನಿಗೆ ಗೊತ್ತಿದೆ. 'ಸಹಜೋ ದೋಷಃ' ಎಂದು ಹೇಳಿದ್ದಾನೆ. ದುರ್ಯೋಧನನೂ ಅಷ್ಟೆ. ಭೀಷ್ಮಾದಿಗಳ ಉಪದೇಶಕ್ಕೂ ಅವನು ಮಣಿಯುವುದಿಲ್ಲ.

**ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ**
**ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ ॥**

- ಎನ್ನುತ್ತಾನೆ. ''ಧರ್ಮವೇನೆಂಬುದು ನನಗೆ ಗೊತ್ತಿದೆ; ಆದರೆ ಅದರಲ್ಲಿ ನನಗೆ ಪ್ರವೃತ್ತಿ ಇಲ್ಲ. ಅಧರ್ಮವಾವುದೆಂದೂ ಗೊತ್ತಿದೆ; ಅದರಿಂದ ನಿವೃತ್ತನಾಗಲು ನನಗೆ ಇಚ್ಛೆ ಇಲ್ಲ!'' ಇಂಥ ಜನರನ್ನು ತಿದ್ದುವುದು ಹೇಗೆ?

ಇದೇ ಸ್ವಭಾವ ನಮ್ಮ ರಾಜಕೀಯ ಮಹಾನುಭಾವರಿಗೂ ಅಂಟಿದ್ದು. ಎಷ್ಟೋ ಸಂದರ್ಭಗಳಲ್ಲಿ ಪ್ರತಿಪಕ್ಷದವರ ನಿಲವು, ಪ್ರವೃತ್ತಿ, ಹೇಳಿಕೆಗಳು ಸರಿ ಎಂದು ತಿಳಿದಿದ್ದರೂ ಅವರನ್ನು ದೂಷಿಸುತ್ತಾರೆ. ತಮ್ಮದು ಸರಿಯಾದ ನೀತಿಯಲ್ಲವೆಂದು ಅವರ ಹೃದಯವು ಹೇಳಿದರೂ ಅದನ್ನು ತೊರೆಯಲು ಒಪ್ಪುವುದಿಲ್ಲ. 'ಸ್ವಭಾವೋ ದುರತಿಕ್ರಮಃ'.

**ವಿತ್ತಂ ಬಂಧುರ್ವಯಃ ಕರ್ಮ ವಿದ್ಯಾ ಭವತಿ ಪಂಚಮೀ ।**
**ಏತಾನಿ ಮಾನ್ಯಸ್ಥಾನಾನಿ ಗರೀಯೋ ಯದ್ಯದುತ್ತರಮ್ ॥ ೭ ॥**

— ಮನುಸ್ಮೃತಿ, ೨-೧೩೬

''ಹಣ, ಬಾಂಧವ್ಯ, ವಯಸ್ಸು, ಶಾಸ್ತ್ರೀಯ ಕಾರ್ಯ, ಐದನೆಯದಾಗಿ ವಿದ್ಯೆ - ಇವೈದು ಮಾನ್ಯತೆಯ ಸ್ಥಾನಗಳು. ಇವುಗಳಲ್ಲಿ ಮುಂದೆಮುಂದಿನದು ಹಿಂದಿನದಕ್ಕಿಂತ ಪ್ರಬಲವಾದದ್ದು.''

ಸಮಾಜದಲ್ಲಿ ಎಲ್ಲರೂ ಒಂದೇ ಯೋಗ್ಯತೆಯವರಾಗಿರುವುದಿಲ್ಲ. ಕೆಲವರು ಸಾಮಾನ್ಯರೂ ಕೆಲವರು ಹೆಚ್ಚು ಗೌರವಾರ್ಹರೂ ಆಗಿರುವುದು ಸಹಜ. ಅವರವರ ಅರ್ಹತೆಯನ್ನನುಸರಿಸಿ ಮಾನ್ಯರಾದವರಿಗೆ ಅಧಿಕ ಗೌರವವನ್ನು ಸಲ್ಲಿಸುವುದು ಸಭ್ಯ ಸಮಾಜದ ಸಂಸ್ಕೃತಿಯ ಲಕ್ಷಣ. ಮಾನ್ಯತೆಗೆ ನಿಮಿತ್ತ ಯಾವುವು, ಅವುಗಳಲ್ಲಿ ಯಾವುದು ಅಧಿಕ ಎಂದು ತಿಳಿಸುವುದಕ್ಕಾಗಿ ಈ ಶ್ಲೋಕವು ಹೊರಟಿದೆ. ಈ ನಾಲ್ಕು ವಿಷಯಗಳು ಮಾನ್ಯತಾಸ್ಥಾನಗಳೆಂದು ಮನುವು ಎಣಿಸಿ ಹೇಳಿದ್ದಾನೆ. ಸಮಾಜದಲ್ಲಿ ಶ್ರೀಮಂತನಿಗೆ

ಮಾನ್ಯತೆ ಸಲ್ಲಬೇಕು. ಅವನಿಗಿಂತ ಸೋದರಮಾವ ಮೊದಲಾದ ಹತ್ತಿರದ ಬಂಧುವಿಗೆ ಹೆಚ್ಚಿನ ಮಾನ್ಯತೆ. ಬಂಧುವಿಗಿಂತ ವಯಸ್ಸಾದ ಹಿರಿಯನು ಹೆಚ್ಚು ಗೌರವಾರ್ಹ. ಹಿರಿಯನಿಗಿಂತ ಸ್ವಧರ್ಮವಾದ ಕರ್ತವ್ಯಕರ್ಮದಲ್ಲಿ ನಿಷ್ಠನಾದವನು ಅಧಿಕಮಾನ್ಯ. ಆತನಿಗಿಂತ ವಿದ್ಯಾವಂತನಿಗೆ ಅಧಿಕವಾದ ಗೌರವ ಸಲ್ಲಬೇಕು. ಹಣಕ್ಕೆ ಕನಿಷ್ಠ ಮಾನ್ಯತೆ, ವಿದ್ಯೆಗೆ ಅಧಿಕ ಮಾನ್ಯತೆ.

ಒಬ್ಬನಿಗೆ ಅನೇಕ ಅರ್ಹತಾಗುಣಗಳಿದ್ದರೆ ಅವನು ಮುಂದಿನವನಿಗಿಂತ ಅಧಿಕ. ಹೇಗೆಂದರೆ ಒಬ್ಬನು ಶ್ರೀಮಂತನೂ ಬಂಧುವೂ ಆಗಿದ್ದರೆ ಅವನು ವಯಸ್ಸಿನಲ್ಲಿ ಹಿರಿಯನಿಗಿಂತ ಅಧಿಕ. ಶ್ರೀಮಂತನೂ ಬಂಧುವೂ ವೃದ್ಧನೂ ಆದವನು ಕರ್ಮನಿಷ್ಠನಿಗಿಂತ ಹೆಚ್ಚು ಮಾನ್ಯ. ಶ್ರೀಮಂತನೂ ಬಂಧುವೂ ಹಿರಿಯನೂ ಕರ್ಮನಿಷ್ಠನೂ ಆದವನು ವಿದ್ಯಾವಂತನಿಗೆ ಅಧಿಕ.

ಇವು ಮೂರು ವರ್ಣಗಳಲ್ಲಿರುವ ವ್ಯವಸ್ಥೆಗಳು. ಶೂದ್ರನು ವೃದ್ಧನಾಗಿದ್ದರೆ ಆತನಿಗೂ ಗೌರವ ಸಲ್ಲಬೇಕೆಂದು ಇದೇ ಸ್ಮೃತಿಯೇ ಮುಂದೆ ವ್ಯವಸ್ಥೆ ಮಾಡಿದೆ. ಆತನು ವೃದ್ಧನೂ ವಿದ್ಯಾವಂತನೂ ಆಗಿದ್ದರೆ ವಿದ್ಯಾಹೀನರಾದ ಇತರ ಎಲ್ಲ ವರ್ಣದವರಿಗಿಂತ ಹೆಚ್ಚು ಗೌರವಾರ್ಹನಾಗುತ್ತಾನೆಂದು ಸಮಸ್ತ ಧರ್ಮಶಾಸ್ತ್ರಗಳು ಹೇಳುತ್ತವೆ. ಆ ಕಾಲದಲ್ಲಿ ಶೂದ್ರನಿಗೆ ವಿದ್ಯೆಯನ್ನು ಕಲಿಯುವುದು ನಿಷಿದ್ಧವಾಗಿದ್ದಿದ್ದರೆ ಧರ್ಮಶಾಸ್ತ್ರಗಳು ಹೀಗೆ ಹೇಳಲು ಸಾಧ್ಯವಿತ್ತೆ? ಶ್ರೀ ಶಂಕರಾಚಾರ್ಯರು "ಸರ್ವೇಷಾಮಪ್ಯಧಿಕಾರೋ ವಿದ್ಯಾಯಾಂ" (ಶೀಕ್ಷಾ ಭಾಷ್ಯ-೧೧) ವಿದ್ಯೆಯಲ್ಲಿ ಸರ್ವಜಾತಿಯವರಿಗೂ ಅಧಿಕಾರ ಉಂಟು ಎಂದು ಸ್ಪಷ್ಟವಾಗಿ ನುಡಿದಿದ್ದಾರೆ. ಈ ವಿಷಯವಾಗಿ ಶ್ರೀ ಶಂಕರಾಚಾರ್ಯರನ್ನೂ ಧರ್ಮಶಾಸ್ತ್ರಗಳನ್ನೂ ಕಣ್ಮುಚ್ಚಿ ನಿಂದಿಸತಕ್ಕವರು ಕಣ್ತೆರೆದು ನೋಡಬೇಕು.

ರಾಜ, ಮಂತ್ರಿ, ಸರ್ಕಾರದ ಹುದ್ದೆದಾರರು - ಇವರ ಸ್ಥಾನ ಯಾವುದು? ಮೇಲ್ಕಂಡ ವ್ಯವಸ್ಥಾಸೂತ್ರದಲ್ಲಿ ಅಧಿಕಾರಕ್ಕೆ ಯಾವ ಸ್ಥಾನವೂ ಸಂದಿಲ್ಲ. ಬಹುಶಃ

ಹಣ, ಕರ್ಮ, ವಿದ್ಯೆ ಇವುಗಳಲ್ಲಿ ಅದು ಅಂತರ್ಭೂತವಾಗುತ್ತದೆಯೆಂದು ಮನುವಿನ ಆಶಯವಿದ್ದೀತು.

ಭರತಖಂಡದ ಹೊರಗೆ ಇತರ ದೇಶಗಳಲ್ಲಿ ಮಾನ್ಯತೆಯ ವ್ಯವಸ್ಥೆ ಹೇಗಿತ್ತೆಂಬುದು ಚಿಂತನೀಯ. ಸಂಸ್ಕೃತಿಯಲ್ಲಿ ಮುಂದುವರಿದ ದೇಶಗಳೆಂದು ಇತಿಹಾಸಕಾರರು ವರ್ಣಿಸುವ ಗ್ರೀಕ್, ರೋಮನ್, ಈಜಿಪ್ಟ್ ದೇಶಗಳಲ್ಲಿ ಅರ್ಹತೆಯನ್ನು ಯಾವ ಮಾನದಂಡದಿಂದ ಅಳೆಯುತ್ತಿದ್ದರೆಂಬುದು ಕುತೂಹಲಕರವಾದದ್ದು.

**ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಂ ।**
**ಸರ್ವದೇವನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ ॥ ೮ ॥**

— *ಸಂಧ್ಯಾವಂದನೆಯಲ್ಲಿ ಹೇಳುವ ನಿತ್ಯಮಂತ್ರ*

''ಆಕಾಶದಿಂದ ಬಿದ್ದ ಮಳೆಯ ನೀರು ಹೇಗೆ ಸಮುದ್ರಕ್ಕೆ ಹೋಗಿ ಸೇರುತ್ತದೆಯೋ ಹಾಗೆಯೇ ಎಲ್ಲ ದೇವರಿಗೆ ಮಾಡುವ ನಮಸ್ಕಾರವೂ ಕೇಶವನಿಗೇ ತಲಪುತ್ತದೆ.''

ಸಂಧ್ಯಾವಂದನೆ ಮಾಡುವಾಗ ಪ್ರತಿಯೊಬ್ಬನೂ ಹೇಳುತ್ತಿರುವ ನಿತ್ಯಮಂತ್ರವಿದು. ಅಲ್ಲಿ ಹೇಳುವುದಕ್ಕೆ ಕಾರಣವೇನೆಂದರೆ: ಸಂಧ್ಯಾವಂದನೆಯಲ್ಲಿ ಸೂರ್ಯ, ಗಾಯತ್ರೀ, ಜಲ, ಸರ್ವದಿಕ್ಕುಗಳ ಅಧಿಪತಿಗಳು, ಯಮ, ಚಿತ್ರಗುಪ್ತ, ತ್ರಿಮೂರ್ತಿಗಳು - ಇವರೆಲ್ಲರ ಸ್ತುತಿ ನಮಸ್ಕಾರಗಳು ಒಂದಲ್ಲ ಒಂದು ಪ್ರಕಾರದಲ್ಲಿ ಬರುತ್ತವೆ. ಅವೆಲ್ಲವೂ ಸರ್ವೇಶ್ವರನಾದ ಕೇಶವನೆಂಬ ಪರಮೇಶ್ವರನಿಗೆ ಸಲ್ಲುತ್ತವೆ. ಸೂರ್ಯಾದಿದೇವತೆಗಳು ಆ ಭಗವಂತನ ಪ್ರತಿನಿಧಿಗಳು. ಆ ಭಗವಂತನೇ ನಾನಾ ದೇವತೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆಂದು ಮನವರಿಕೆ ಮಾಡಿಕೊಳ್ಳುವುದಕ್ಕಾಗಿ ಈ ಶ್ಲೋಕವನ್ನು ಸೇರಿಸಿದ್ದಾರೆ. ಎಲ್ಲ ಟ್ರೆಜರಿಗಳಲ್ಲಿ ನಾವು ಕಟ್ಟುವ ಹಣವೂ ರಾಜನಿಗೆ ಸಲ್ಲಬೇಕಾದದ್ದು, ಟ್ರೆಜರಿ ಅಧಿಕಾರಿಗಳಿಗಲ್ಲ.

ಏಕೇಶ್ವರವಾದವನ್ನು ಈ ಮಂತ್ರವು ದೃಢಪಡಿಸುತ್ತದೆ. ''ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ'' ಎಂಬ ವೈದಿಕಮಂತ್ರವು ಘೋಷಿಸತಕ್ಕದ್ದೂ ಇದನ್ನೇ. ಹಿಂದೂಗಳಲ್ಲಿಯೇ ಶಿವ, ವಿಷ್ಣು, ಸೂರ್ಯ, ಶಕ್ತಿ ಮೊದಲಾದ ವೈದಿಕದೇವತೆಗಳನ್ನಲ್ಲದೆ ಮಾರಮ್ಮ, ಚೌಡಮ್ಮ, ಅಯ್ಯಪ್ಪ ಇತ್ಯಾದಿ ನೂರೆಂಟು ದೇವತೆಗಳನ್ನು ಪೂಜಿಸತಕ್ಕವರಿದ್ದಾರೆ. ಅವರೆಲ್ಲರೂ ಬೇರೆ ಬೇರೆ ಫಲಾಪೇಕ್ಷೆಗಳಿಂದ ವಿಭಿನ್ನ ದೇವತೆಗಳನ್ನು ಪೂಜಿಸುತ್ತಾರೆಯೇ ಹೊರತು ಏಕೇಶ್ವರವಾದವನ್ನು ಅಲ್ಲಗಳೆಯುವುದಿಲ್ಲ.

ಭಗವದ್ಗೀತೆಯ ೧೦-೧೧ನೆಯ ಅಧ್ಯಾಯಗಳಲ್ಲಿ ವಿಶ್ವವೆಲ್ಲವೂ ಈಶ್ವರಸ್ವರೂಪವೇ ಎಂದೂ ಎಲ್ಲ ಮೂರ್ತಿಗಳಲ್ಲಿಯೂ ತಾನು ನೆಲೆಸಿದ್ದೇನೆಂದೂ ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ. ಇದೇ ವಿಶ್ವರೂಪದರ್ಶನ. ಸರ್ವಧರ್ಮಸಮನ್ವಯದ ಬೀಗದಕ್ಕೆ ಇಲ್ಲಿದೆ. ಹಿಂದೂಗಳ ನಿತ್ಯಘೋಷಣೆಯೇ ಸರ್ವಧರ್ಮಸಮನ್ವಯ.

ವಿಗ್ರಹಗಳು ಈಶ್ವರನ ಭಾವಚಿತ್ರಗಳು (photos). ವಿಗ್ರಹವೇ ಈಶ್ವರನೆಂದು ಯಾರೂ ಭಾವಿಸಿಲ್ಲ. ಸ್ವಾತಂತ್ರ್ಯದಿನದಂದು ಗಾಂಧಿಜೀಯವರ ಭಾವಚಿತ್ರಕ್ಕೆ, ಅವರ ಶಿಲಾಮೂರ್ತಿಗೆ ಹೂಮಾಲೆಯೇರಿಸಿ ಕೈಮುಗಿಯುವುದು ಯಾವ ಉದ್ದೇಶದಿಂದ? ಭಾವಚಿತ್ರ, ಶಿಲಾವಿಗ್ರಹ ಮೊದಲಾದದ್ದು ನಮ್ಮ ಭಾವನೆಯ ಮೂರ್ತಸ್ವರೂಪ.

ದೇವರು ನಿರಾಕಾರನೆಂಬುದನ್ನು ಒಪ್ಪೋಣ. ನಿರಾಕಾರವಾದ ವಸ್ತುವನ್ನು ಧ್ಯಾನಿಸುವುದು ಹೇಗೆ? ಮನಸ್ಸನ್ನೆಲ್ಲಿ ಕೇಂದ್ರೀಕರಿಸಬೇಕು? ಒಂದು ಅವಲಂಬನೆಯಿಲ್ಲದೆ ಮನಸ್ಸು ನಿಲ್ಲದು. ಈ ಜಗತ್ತನ್ನೇ ಸೃಷ್ಟಿಸಿದ ಸರ್ವಶಕ್ತನಾದ ದೇವರಿಗೆ ತನಗೊಂದು ದೇಹವನ್ನು ನಿರ್ಮಿಸಿಕೊಳ್ಳುವ ಶಕ್ತಿ ಇಲ್ಲವೆ? ದೇವರಿಗೆ ಕೇಶವನೆಂದೋ ಶಿವನೆಂದೋ ಒಂದೇ ಹೆಸರಲ್ಲ. ಎಲ್ಲ ದೇವರಿಗೂ ದ್ವಾದಶನಾಮ, ಅಷ್ಟೋತ್ತರ, ಸಹಸ್ರನಾಮಗಳಿವೆ. ಸರ್ವದೇವನಮಸ್ಕಾರಗಳೂ ಹೇಗೆ ಕೇಶವನಿಗೆ

ಅರ್ಪಿತವಾಗುತ್ತವೆಯೋ ಹಾಗೆ ಸರ್ವಶಬ್ದಗಳ ಉಚ್ಚಾರಣೆಗಳೂ ಕೇಶವನಿಗೇ ಅರ್ಪಿತವಾಗುತ್ತವೆ - ಎಂದು ತಿಳಿಯಬೇಕು.

**ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಶವಕರ್ಪಟಮ್ ।**
**ಕಾಕವಿಷ್ಠಾಸಮುತ್ಪನ್ನಃ ಪಂಚೈತೇಽತಿಪವಿತ್ರಕಾಃ ॥ ೯ ॥**

— *ಸುಭಾಷಿತರತ್ನ-ಭಾಂಡಾಗಾರ*

"ಎಂಜಲು, ಶಿವನಿರ್ಮಾಲ್ಯ, ವಾಂತಿ, ಹೆಣದ ಬಟ್ಟೆ, ಕಾಗೆಯ ಪಿಷ್ಟಿ (ಮಲದಿಂದ ಹುಟ್ಟಿದ್ದು) - ಈ ಐದು ಬಹಳ ಪವಿತ್ರ ವಸ್ತುಗಳು!"

ಇದನ್ನೋದಿದಾಗ ಇದು ಸೂಕ್ತಿಯೊ, ದುರುಕ್ತಿಯೊ? - ಎಂಬ ಸಂದೇಹ ಹುಟ್ಟುತ್ತದೆ. ಇದು ಸುಭಾಷಿತಗಳಲ್ಲಿ ಹೇಗೆ ಸೇರುತ್ತದೆ? - ಎಂಬ ಪ್ರಶ್ನೆ ಏಳುತ್ತದೆ.

'ಪವಿತ್ರ' ಶಬ್ದಕ್ಕೆ ಎರಡು ಅರ್ಥಗಳಿವೆ - ಸ್ವತಃ ಶುದ್ಧವಾದದ್ದು, ಇನ್ನೊಂದನ್ನು ಸ್ವಚ್ಛಗೊಳಿಸತಕ್ಕದ್ದು - ಎಂದು. ನೀರು ಸ್ವಚ್ಛವಾಗಿದ್ದರೆ ಅದರಲ್ಲಿ ಒಗೆದ ಬಟ್ಟೆಯೂ ಸ್ವಚ್ಛವಾಗುತ್ತದೆ. ನೀತಿಯನ್ನು ಹೇಳತಕ್ಕವನು ಸ್ವತಃ ನೀತಿವಂತನಾಗಿದ್ದರೆ ಅದು ಇನ್ನೊಬ್ಬರ ಮೇಲೆ ಪರಿಣಾಮವನ್ನು ಬೀರಿ ನೀತಿವಂತರನ್ನಾಗಿ ಮಾಡೀತು.

ಶ್ಲೋಕದಲ್ಲಿ ವಿವಕ್ಷಿತವಾದ ಅರ್ಥ ಹೀಗೆ : ಉಚ್ಛಿಷ್ಟ = ಹಸುವಿನ ಹಾಲು. ಇದು ಕರುವಿನ ಎಂಜಲು. ಶಿವನಿರ್ಮಾಲ್ಯ = ಗಂಗಾಜಲ. ಶಿವನ ಜಟೆಯಿಂದ ಗಂಗಾನದಿ ಹುಟ್ಟಿ ಭಾಗೀರಥಿಯಾಯಿತು. ಕೆಲವು ದೇವಸ್ಥಾನಗಳಲ್ಲಿ ಶಿವನೆದುರಿಗೆ ಚಂಡ ಎಂಬ ಪ್ರಮಥಗಣದೇವತೆಯನ್ನು ಪ್ರತಿಷ್ಠಿಸಿರುತ್ತಾರೆ. ಶಿವನಿಗೆ ಅರ್ಪಿಸಿದ ಹೂ ಹಣ್ಣು ಮೊದಲಾದದ್ದೆಲ್ಲದರ ಮೇಲೆ ಚಂಡನಿಗೆ ಅಧಿಕಾರ. ಅದೆಲ್ಲವೂ ಚಂಡನಿಗೆ ಸೇರಬೇಕಲ್ಲದೆ ಬೇರೆ ಯಾರೂ ಉಪಯೋಗಿಸಕೂಡದೆಂದು ಆಗಮಶಾಸ್ತ್ರದ ನಿಯಮ. ಆದ್ದರಿಂದ ಅದು ಅಪವಿತ್ರವೆಂಬ ಮಾತು ರೂಢಿಗೆ ಬಂದಿತು. ಚಂಡಾಧಿಕಾರವಿಲ್ಲದ ದೇವಾಲಯಗಳೇ ಅಧಿಕ. ಅಲ್ಲಿಯ ನಿರ್ಮಾಲ್ಯವು ಪವಿತ್ರವಾದದ್ದು. ವಮನ = ಜೇನುತುಪ್ಪ. ಇದು ಜೇನುಹುಳುಗಳ ವಾಂತಿ.

ಶವಕರ್ಪಟ= ರೇಷ್ಮೆ ಬಟ್ಟೆ. ರೇಶ್ಮೆ ಹುಳುಗಳನ್ನು ಕೊಂದು ಅದರ ಗೂಡಿನ ಎಳೆಗಳಿಂದ ರೇಶ್ಮೆಯನ್ನು ತಯಾರಿಸುತ್ತಾರೆ. ಕಾಕವಿಷ್ಠಾಸಮುತ್ಪನ್ನವಾದದ್ದು ಅರಳಿಮರ. ಅವರ ಕೆಳಗೆ ಹಣ್ಣಿನ ರಾಶಿಯೇ ಉದುರಿದರೂ ಒಂದು ಅರಳಿಗಿಡವೂ ಹುಟ್ಟುವುದಿಲ್ಲ. ಮನೆಯ ಮೇಲಿನ ಹೆಂಚುಗಳ ನಡುವೆಯೋ ಕಲ್ಲು ಬಂಡೆಗಳ ಸಂದಿನಲ್ಲೋ ಅರಳಿಗಿಡ ಹುಟ್ಟಿರುತ್ತದೆ. ಕಾಗೆ ಅರಳಿಹಣ್ಣನ್ನು ತಿಂದು ಆ ಜಾಗಗಳಲ್ಲಿ ಹಾಕಿದ ಪಿಷ್ಠ (ಮಲ) ದಿಂದ ಅರಳಿಗಿಡ ಹುಟ್ಟುತ್ತದೆಯೆಂದು ಹೇಳುತ್ತಾರೆ.

ಹೆಸರಿನಿಂದ, ಬಾಹ್ಯವೇಷದಿಂದ, ಶ್ರೀಮಂತಿಕೆಯಿಂದ ಅಥವಾ ಅಧಿಕಾರದಿಂದ ಒಬ್ಬ ಮನುಷ್ಯನ ದೊಡ್ಡತನವನ್ನು ಗೊತ್ತು ಮಾಡಲಾಗದು. ತ್ರಿಪುರಸುಂದರಿಯೆಂದು ಹೆಸರಿಟ್ಟುಕೊಂಡರೆ ಆವಳು ಸುಂದರಿಯಾಗಿಬಿಡುವುದಿಲ್ಲ. ಓಬವ್ವ ಎಂಬ ಹೆಸರಿನಿಂದ ಇನ್ನೊಬ್ಬಳು ಕುರೂಪಿಯಾಗಿಬಿಡುವುದಿಲ್ಲ. ಈ ಕಾಲದಲ್ಲಿ ಜನರು ಮಕ್ಕಳಿಗೆ ಹೆಸರಿಡುವಾಗ ಸುಂದರವಾದ ಹೆಸರಿಗಾಗಿ ಬಹಳ ತಡಕಾಡುತ್ತಾರೆ. ಹೆಸರು ಕೇವಲ ಒಂದು ಸಂಕೇತ. ಕಹೋಡ ಎಂಬವನು ಒಬ್ಬ ಋಷಿ. ತಮ್ಮಲ್ಲಿ ಅಹಂಕಾರ, ದರ್ಪಗಳು ತಲೆಯೆತ್ತಬಾರದೆಂದು ನಿಂದ್ಯವಾದ ಹೆಸರನ್ನಿಟ್ಟುಕೊಳ್ಳುತ್ತಿದ್ದರು. ಶುನಃಶೇಫನು ದೊಡ್ಡ ಬ್ರಹ್ಮರ್ಷಿ. ನಾಯಿಯ ಗುಪ್ತಾಂಗವೆಂದು ಆ ಹೆಸರಿನ ಅರ್ಥ. ಇನ್ನೊಬ್ಬ ಋಷಿ ಶುನೋಲಾಂಗೂಲ. ಆ ಶಬ್ದಕ್ಕೆ ನಾಯಿಯ ಬಾಲವೆಂದರ್ಥ. ಋಷಿಗಳ ಈ ಹೆಸರುಗಳನ್ನೂ ಕೇಳಿ: ಕಾಕ, ಛಾಗ, ವ್ಯಾಡಿ, ಭೈರಿಕಿ, ಇತ್ಯಾದಿ.

**ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ?**
**ಕಸದೊಳಗೆ ಕಸವಾಗಿ ಹೋಹನಲೆ ನೀನು।**
**ಮುಸುಕಲೀ ಧರೆಯ ಮರೆವೆನ್ನನ್, ಎನ್ನುತ ಬೇಡು**
**ಮಿಸುಕದಿರು ಮಣ್ಣಿನಲಿ - ಮಂಕುತಿಮ್ಮ ॥**

**ಪ್ರಾಪ್ತಾರ್ಥಗ್ರಹಣಂ ದ್ರವ್ಯ-ಪರಿವರ್ತೋಽನುರೋಧನಂ ।**
**ಉಪೇಕ್ಷಾ ಬುದ್ಧಿಹೀನತ್ವಂ ಭೋಗೋಽಮಾತ್ಯಸ್ಯ ದೂಷಣಮ್ ॥ ೧೦ ॥**

— ಸುಭಾಷಿರತ್ನ-ಭಾಂಡಾಗಾರ

''ಕೈಗೆ ಬಂದ ಹಣವನ್ನು ತೆಗೆದುಕೊಳ್ಳುವುದು, ರಾಜ್ಯದ ಆಸ್ತಿಯನ್ನು ಪರಿವರ್ತಿಸುವುದು, ಇನ್ನೊಬ್ಬರ ಒತ್ತಾಯಕ್ಕೆ ಮಣಿಯುವುದು, ಉಪೇಕ್ಷೆ, ಬುದ್ಧಿಹೀನತೆ, ಭೋಗಲಾಲಸೆ - ಇವು ಅಮಾತ್ಯನಲ್ಲಿ ಇರಬಾರದ ದೋಷಗಳು.''

ಅಮಾತ್ಯನೆಂದರೆ ರಾಜನ ಸಮೀಪದಲ್ಲಿರುವ ಸಚಿವನೆಂದು ಅರ್ಥ. ಅವನೇ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ. ಪ್ರಧಾನಿಯಲ್ಲಿರಬಾರದ ದೋಷಗಳನ್ನು ಪಟ್ಟಿಮಾಡುತ್ತ ರಾಜನೀತಿಯು ಮೇಲ್ಕಂಡಂತೆ ಹೇಳಿದೆ. ಪ್ರಾಪ್ತಾರ್ಥಗ್ರಹಣವೆಂದರೆ ಲಂಚವನ್ನು ಸ್ವೀಕರಿಸುವುದು. ಲಂಚಕ್ಕೆ 'ಉತ್ಕೋಚ'ವೆಂದು ಹೆಸರಿದೆ. ರಾಜಕಾರ್ಯದ ಬಹುಭಾಗ, ಹೊಣೆ-ಎಲ್ಲವೂ ಅಮಾತ್ಯನಿಗೆ ಸೇರಿದ್ದು. ಅವನು ರಾಜನ ಪ್ರತಿನಿಧಿ. ಲಂಚಕ್ಕೆ ಕೈಯೊಡ್ಡಿದರೆ ಅನ್ಯಾಯ-ಅಧರ್ಮಗಳು ಹೆಗಲೇರುತ್ತವೆ. ದ್ರವ್ಯ ಎಂದರೆ ಬಹಳ ಬೆಲೆಬಾಳುವ ಆಸ್ತಿ. 'ದ್ರವ್ಯಂ ಚ ಭವ್ಯೇ' ಎಂದು ಪಾಣಿನಿಸೂತ್ರವಿದೆ. ದ್ರವ್ಯವು ಭವ್ಯವಾದ ವಸ್ತು. ಅಮಾತ್ಯನಿಗೆ ಅಧಿಕಾರವಿದ್ದರೂ ರಾಜನ ಒಪ್ಪಿಗೆಯಿಲ್ಲದೆ ರಾಜ್ಯದ ಬೆಲೆಬಾಳುವ ಆಸ್ತಿಯನ್ನು ಪರಭಾರೆ ಮಾಡಕೂಡದು. ರಾಜನು ಇಚ್ಛಿಸಿದರೂ ಅವನಿಗೆ ಬುದ್ಧಿಹೇಳುವ ದಕ್ಷತೆ ಅಮಾತ್ಯನಲ್ಲಿರಬೇಕು. ಉಪೇಕ್ಷೆ ಎಂದರೆ ರಾಜಕಾರ್ಯದಲ್ಲಿ ಆಲಸ್ಯ, ಹೊಣೆಗೇಡಿತನ. ಬುದ್ಧಿಹೀನತೆ ಎಂದರೆ ದಡ್ಡತನವಲ್ಲ. ದಡ್ಡನು ಮಂತ್ರಿಯಾಗಲಾರ. ಆಡಳಿತದಲ್ಲಿ ದಕ್ಷತೆ, ಒದಗುವ ಸಮಸ್ಯೆಗಳನ್ನು ಬಗೆಹರಿಸುವ ಕೌಶಲ, ಧೈರ್ಯ - ಮೊದಲಾದ ವಿಶೇಷ ಗುಣಗಳಿಲ್ಲದಿರುವುದು ಬುದ್ಧಿಹೀನತೆ. ಅಮಾತ್ಯನಿಗೆ ಸುಖಭೋಗಲಾಲಸೆ ಇರಕೂಡದು. ಅವನೊಬ್ಬ ಕರ್ಮಯೋಗಿಯಾಗಿರಬೇಕು. ಅವನಲ್ಲಿ ಭೋಗಲಾಲಸೆ ಹುಟ್ಟಿತೆಂದರೆ, ಲಂಚಸ್ವೀಕಾರ ಮೊದಲಾದ ಎಲ್ಲ ದೋಷಗಳನ್ನೂ ಆಹ್ವಾನಿಸಿದಂತೆಯೇ. ಭೋಗಾಪೇಕ್ಷಿಗೆ ತ್ಯಾಗಬುದ್ಧಿ ಇರದು. ಆಗ ಲೋಭಬುದ್ಧಿಯು ಎದ್ದು ತಾಂಡವವನ್ನು ಆರಂಭಿಸೀತು. ಚಂದ್ರಗುಪ್ತನನ್ನು ಪಟ್ಟಕ್ಕೇರಿಸಿದ ಚಾಣಕ್ಯನು ಅತ್ಯಂತ ಸಮರ್ಥನಾದ ಮಂತ್ರಿ. ಚಂದ್ರಗುಪ್ತನು ಅವನ ಕೈಯಲ್ಲಾಡುವ ಬೊಂಬೆ. ಅಂತಹ ಚಾಣಕ್ಯನು

ರಾಜಧಾನಿಯ ಹೊರಗಡೆ ಒಂದು ಮುರುಕು ಗುಡಿಸಿಲಿನಲ್ಲಿ ವಾಸಮಾಡುತ್ತಿದ್ದನೆಂದು 'ಮುದ್ರರಾಕ್ಷಸ' ನಾಟಕದಲ್ಲಿ ವರ್ಣನೆ ಇದೆ.

ಇನ್ನೊಂದು ಶ್ಲೋಕವು ಯಾರನ್ನು ಅಮಾತ್ಯನನ್ನಾಗಿ ನೇಮಿಸಬೇಕೆಂಬುದನ್ನು ವಿವರಿಸುತ್ತ ''ಸ್ವದೇಶಜಾತಂ ಮಂತ್ರಜ್ಞಂ'' ಎನ್ನುತ್ತದೆ. ಮಂತ್ರಿಯು ಸ್ವದೇಶದಲ್ಲಿ ಹುಟ್ಟಿದವನಾಗಿರಬೇಕು. ಪರದೇಶದವರನ್ನು ನೇಮಿಸಬಾರದೆಂದು ತಿಳಿಸುತ್ತದೆ. ಇದು ಗಮನಾರ್ಹವಾದ ವಿಷಯ. ಸ್ವದೇಶದವನಿಗಿರುವ ದೇಶಾಭಿಮಾನವು ವಿದೇಶದವನಿಗಿರುವುದು ಅಸಂಭವ. ದತ್ತುಪುತ್ರನಿಗೆ ಹಡೆದ ತಾಯಿಯಲ್ಲಿರುವ ಪ್ರೀತ್ಯಾದರಗಳು ದತ್ತುಮಾಡಿಕೊಂಡ ತಾಯಿಯಲ್ಲಿರುವುದಿಲ್ಲ. ಅಂತೆಯೇ ಮಲತಾಯಿಯ ಧೋರಣೆ ಮಲಮಗನಿಗೂ ಅವಳ ವಿಷಯದಲ್ಲಿ ಬಂದೀತು. ಅಮಾತ್ಯನು ಮಂತ್ರಜ್ಞನಾಗಿರಬೇಕು. ಮಂತ್ರಾಲೋಚನೆಯಲ್ಲಿ ಪಳಗಿರಬೇಕು. ಆಡಳಿತದ ಅನುಭವಿಯಾಗಿರಬೇಕೆಂದು ಅಭಿಪ್ರಾಯ. ಇಂತಹ ವ್ಯಕ್ತಿಗೆ ಪ್ರಧಾನಿಯಾಗುವ ಅರ್ಹತೆ ಬರುತ್ತದೆ. ಇದು ಭಾರತೀಯರು ನಂಬಿದ ರಾಜನೀತಿ.

**ಅಶನಾದಿಂದ್ರಿಯಾಣೀವ ಸ್ಯುಃ ಕಾರ್ಯಾಣ್ಯಖಿಲಾನ್ಯಪಿ ।**
**ಏತಸ್ಮಾತ್ ಕಾರಣಾದ್ವಿತ್ತಂ ಸರ್ವಕಾರಣಮುಚ್ಯತೇ ॥ ೧೧ ॥**

*— ಪಂಚತಂತ್ರ, ಮಿತ್ರಭೇದ - ೮*

''ಅನ್ನದಿಂದ ಎಲ್ಲ ಇಂದ್ರಿಯಗಳೂ ತಮ್ಮ ಕಾರ್ಯಗಳಲ್ಲಿ ತೊಡಗುತ್ತವೆ. ಹಾಗೆಯೇ ಹಣದಿಂದ ಎಲ್ಲ ಕಾರ್ಯಗಳೂ ಸಿದ್ಧಿಸುವುದರಿಂದ ಹಣವು ಎಲ್ಲ ಕಾರ್ಯಗಳಿಗೂ ಸಾಧನವೆನಿಸಿದೆ.''

ಮನುಷ್ಯನಿಗೆ ಕಣ್ಣು, ಕಿವಿ, ಮೂಗು, ನಾಲಗೆ, ತ್ವಕ್ (ಚರ್ಮ) - ಎಂಬ ಐದು ಜ್ಞಾನೇಂದ್ರಿಯಗಳಿವೆ. ಹಾಗೆಯೇ ಕೈ, ಕಾಲು, ವಾಕ್ (ಬಾಯಿ), ಗುಹ್ಯ, ಗುದಗಳೆಂಬ ಐದು ಕರ್ಮೇಂದ್ರಿಯಗಳುಂಟು. ಈ ಹತ್ತು ಇಂದ್ರಿಯಗಳು ಸರಿಯಾಗಿ ತಮ್ಮ ತಮ್ಮ ಕೆಲಸಗಳನ್ನು ನಡೆಸುತ್ತಿದ್ದರೆ ಮನುಷ್ಯನು ನೆಮ್ಮದಿಯಾಗಿರುತ್ತಾನೆ. ಈ ಇಂದ್ರಿಯಗಳು

ತಮ್ಮ ಕಾರ್ಯಗಳನ್ನು ನಡೆಸಲು ಶಕ್ತಿ ಯಾವುದರಿಂದ ಬರುತ್ತದೆ? ಅನ್ನದಿಂದ. ಅನ್ನವಿಲ್ಲದೆ ಹಸಿವಿನಿಂದ ತತ್ತರಿಸತಕ್ಕವನು ಏನನ್ನೂ ಮಾಡಲಾರ. ಕಣ್ಣು ಓದನ್ನು ನಿಲ್ಲಿಸುತ್ತದೆ. ಕಿವಿ ಏನನ್ನೂ ಕೇಳಿಸಿಕೊಳ್ಳುವುದಿಲ್ಲ. ನಾಲಗೆಗೆ ರುಚಿ ತಿಳಿಯದು. ಹೂವಿನ ಮಾಲೆಯನ್ನು ಮೂಸಲು ಮೂಗು ಇಚ್ಛಿಸದು. ಅಂತೆಯೇ ಕರ್ಮೇಂದ್ರಿಯಗಳು ತಮ್ಮ ಕೆಲಸವನ್ನು ಮಾಡುವುದಿಲ್ಲ. ಕೈ ಎತ್ತದು. ಕಾಲು ನಡೆಯದು. ಯಂತ್ರಗಳಿಗೆ ಪೆಟ್ರೋಲ್ ಇದ್ದಂತೆ ಇಂದ್ರಿಯಗಳಿಗೆ ಅನ್ನ ಬೇಕು. ಅನ್ನವಿಲ್ಲದೆ ದೇಹಯಂತ್ರವೇ ಚಲಿಸದು.

ನಮ್ಮ ಸಕಲ ಬಾಹ್ಯ ವ್ಯವಹಾರಗಳಿಗೂ ಮುಖ್ಯವಾಗಿ ಹಣವು ಬೇಕು. ಹಣವೆಂಬ ಇಂಧನವಿಲ್ಲದಿದ್ದರೆ ಯಾವ ವ್ಯವಹಾರವೂ ನಡೆಯದು. ಮನೆಯಲ್ಲಿ ದೀಪವು ಬೆಳಗುವುದಿಲ್ಲ. ನಲ್ಲಿಯಲ್ಲಿ ನೀರು ಹರಿಯುವುದಿಲ್ಲ. ಮಕ್ಕಳನ್ನು ಶಾಲೆಗೆ ಸೇರಿಸುವುದಿಲ್ಲ. ಸರ್ಕಾರಿ ಕಚೇರಿಯಲ್ಲಿ ಯಾವ ಕಾರ್ಯವೂ ನಿಮ್ಮದು ಚಲಿಸುವುದೇ ಇಲ್ಲ. ಖಾಸಗಿ ಕಾರ್ಯವೂ ಹಣವಿಲ್ಲದೆ ನಡೆಯುವುದಿಲ್ಲ. ಆದ್ದರಿಂದ ಧನವೇ ಸರ್ವಕಾರಣ. ಅದಿಲ್ಲದಿದ್ದರೆ, ರೋಗ ಬಂದಾಗ ಔಷಧವೂ ದೊರಕದು, ಸತ್ತಾಗ ಸುಡಲು ಸೌದೆಯೂ ದೊರೆಯದು!

ಆದರೆ ಅನ್ನಕ್ಕೂ ಹಣಕ್ಕೂ ಒಂದು ವ್ಯತ್ಯಾಸವಿದೆ. ದೇಹವು ಅನ್ನವನ್ನು ಒಂದು ಮಿತ ಪ್ರಮಾಣದಲ್ಲಿ ತೆಗೆದುಕೊಳ್ಳುತ್ತದೆ. ಹೆಚ್ಚಾದರೆ ಬೇಡವೆಂದು ತಳ್ಳಿಬಿಡುತ್ತದೆ. ಹಣವು ಮಾತ್ರ ಹೆಚ್ಚಾಯಿತೆಂದು ತಳ್ಳತಕ್ಕವರು ಯಾರೂ ಇಲ್ಲ. ಊಟವನ್ನು ಹಾಕಿ ಜನರನ್ನು ತೃಪ್ತಿಗೊಳಿಸಬಹುದು. ಹಣವನ್ನು ಕೊಟ್ಟು ತೃಪ್ತಿಗೊಳಿಸಲು ಶಕ್ಯವಿಲ್ಲ. ಹಣವೆಂದರೆ ಹೆಣವೂ ಬಾಯಿ ಬಿಡುತ್ತದೆ!

ಧನವು ಸರ್ವಕಾರ್ಯಗಳನ್ನೂ ಸಾಧಿಸಿಕೊಡುವುದರಿಂದಲೇ ಅದು ಪ್ರಬಲ ಶಕ್ತಿ ಎನಿಸಿದೆ. ವಿದ್ಯೆ, ಅರ್ಹತೆ, ಜಾತಿ, ಬಾಂಧವ್ಯ, ಸ್ನೇಹ, ಅಧಿಕಾರ - ಇವು ಶಕ್ತಿಕೇಂದ್ರಗಳು, ಬಲವನ್ನು ಕೊಡತಕ್ಕವು. ಇವುಗಳಲ್ಲಿಯೂ ಹಿಂದಿನದಕ್ಕಿಂತ ಮುಂದಿನದು ಕ್ರಮವಾಗಿ ಅಧಿಕ ಬಲಶಾಲಿ. ಧನಬಲವು ಸರ್ವಾಧಿಕ. ಅದು ಮೇಲ್ಕಂಡ

ಆರು ಶಕ್ತಿಕೇಂದ್ರಗಳನ್ನೂ ತುಳಿದುಹಾಕಬಲ್ಲದು. ಧನವು ಸರ್ವೇಷ್ಟದೇವತೆ. ದೇವತಾರಾಧನೆಯೂ ಈ ಇಷ್ಟದೇವತೆಯನ್ನು ಒಲಿಸಿಕೊಳ್ಳುವುದಕ್ಕಾಗಿಯೇ.

**ಕೇಚಿದ್ದೈವಾತ್ ಸ್ವಭಾವಾದ್ವಾ ಕಾಲಾತ್ ಪುರುಷಕಾರತಃ ।**
**ಸಂಯೋಗೇ ಕೇಚಿದಿಚ್ಛಂತಿ ಫಲಂ ಕುಶಲಬುದ್ಧಯಃ ॥ ೧೨ ॥**

— *ಯಾಜ್ಞವಲ್ಕ್ಯಸ್ಮೃತಿ, ೧-೩೫೦*

"ಒಳ್ಳೆಯದಾಗಲಿ ಕೆಟ್ಟದಾಗಲಿ, ಫಲವು ಅದೃಷ್ಟದಿಂದಾಗುತ್ತದೆಯೆಂದು ಕೆಲವರು ಹೇಳುತ್ತಾರೆ. ಸ್ವಾಭಾವಿಕವಾಗಿ ಎಂದರೆ ಆಕಸ್ಮಿಕವಾಗಿ ಫಲವು ಪ್ರಾಪ್ತವಾಗುತ್ತದೆಯೆಂದು ಕೆಲವರ ಹೇಳಿಕೆ. ಕಾಲವೇ ಎಲ್ಲದಕ್ಕೂ ಕಾರಣವೆಂದು ಇನ್ನು ಕೆಲವರ ಅಭಿಪ್ರಾಯ. ಪುರುಷಪ್ರಯತ್ನದಿಂದಲೇ ಫಲವು ದೊರೆಯುತ್ತದೆಯೆಂದು ಹಲವರು ಹೇಳುತ್ತಾರೆ. ಬುದ್ಧಿಶಾಲಿಗಳಾದರೋ ಇವೆಲ್ಲವೂ ಸೇರಿ ಫಲವು ದೊರೆಯುತ್ತದೆ ಎನ್ನುತ್ತಾರೆ."

ಅಧಿಕವಾದ ಸುಖವೋ ದುಃಖವೋ ಪ್ರಾಪ್ತವಾದಾಗ, ಅದೃಷ್ಟದಿಂದ ಹಾಗಾಯಿತೆಂದು ಹೇಳುವುದು ಸಹಜವಾಗಿದೆ. ಅದೃಷ್ಟವನ್ನೊಪ್ಪದವರು ಸ್ವಾಭಾವಿಕವಾಗಿ ಹಾಗಾಯಿತು, ಅದೆಲ್ಲವೂ ಆಕಸ್ಮಿಕ ಎಂದುಬಿಡುತ್ತಾರೆ. 'ಅಕಸ್ಮಾತ್' ಆಯಿತೆಂದರೆ ಸರಿಯಾದ ಕಾರಣವಿಲ್ಲವೆಂದೇ ಅರ್ಥ. ವಿಚಾರವಾದಿಗಳೆಂದು ಕೊಳ್ಳತಕ್ಕವರ ಈ ನುಡಿ ವಿಚಾರಕ್ಕೆ ನಿಲ್ಲತಕ್ಕದ್ದಲ್ಲ. ಕಾರಣವಿಲ್ಲದೆ ಒಂದು ಕಾರ್ಯ ಹುಟ್ಟುತ್ತದೆ ಎನ್ನುವುದು ವಿಶ್ವಾಸಾರ್ಹವಲ್ಲ. 'ಕಾಲವೇ ಎಲ್ಲದಕ್ಕೂ ಕಾರಣ. ಕಾಲಾಯ ತಸ್ಮೈ ನಮಃ' ಎನ್ನತಕ್ಕವರೂ ಇದ್ದಾರೆ. ಆದರೆ ಈ ಕಾಲವೆನ್ನುವುದು ಯಾವಾಗಲೂ ಎಲ್ಲೆಡೆಯೂ ಇದ್ದೇ ಇರುತ್ತದೆ. ಅದು ಸರ್ವಸಾಧಾರಣವಾದದ್ದು, ವಿಶಿಷ್ಟ ಕಾರಣವಲ್ಲ. ಪುರುಷಕಾರವೆಂದರೆ ಮನುಷ್ಯನ ಪ್ರಯತ್ನ, ಮನುಷ್ಯನ ಒಂದು ಕ್ರಿಯೆ. ಕ್ರಿಯೆಗೊಂದು ಫಲವಿರಲೇಬೇಕೆಂದು ನಿಯಮ. ಮಲಗಿದರೆ ವಿಶ್ರಾಂತಿಯೇ ಫಲ.

ಹೋಗುವುದಕ್ಕೆ ಮುಂದಿನ ಸ್ಥಳವನ್ನು ಸೇರುವುದು ಫಲ. ಮಾನಸಿಕ ಕ್ರಿಯೆಗೂ ಫಲವುಂಟು. ಆಲೋಚನೆ ಮಾಡಿದಾಗ ಮುಂದಿನ ನಿಶ್ಚಯವೇ ಫಲ. ಕ್ರಿಯೆಯಿಲ್ಲದೆ ಫಲವಿಲ್ಲ. ಹೀಗೆ ಅನ್ವಯ-ವ್ಯತಿರೇಕಗಳಿಂದ ಕ್ರಿಯೆಗೆ ಫಲವುಂಟೆಂದೂ ಫಲವಿದ್ದಾಗ ಅದಕ್ಕೆ ಕಾರಣವಾದ ಕ್ರಿಯೆ ಇದ್ದೇ ತೀರಬೇಕೆಂಬುದೂ ನಿಯಮ. ಇದಕ್ಕೆ ಕಾಲವು ಸಹಕಾರಿಕಾರಣ. ಮರದಲ್ಲಿ ಕಾಯಿ ಬಿಡಲು ತಕ್ಕ ಕಾಲ ಬೇಕು. ಕಾಯಿ ಹಣ್ಣಾಗಲು ಸಮಯ ಬೇಕು.

ಏವಂ ಚ, ಮನುಷ್ಯನ ಕರ್ಮ(ಕ್ರಿಯೆ)ವೇ ಫಲದಾಯಕವೆನ್ನುವುದು ನಿಶ್ಚಿತ. ಇನ್ನು 'ಸ್ವಭಾವ' ಶಬ್ದಕ್ಕೆ ಪ್ರಕೃತಿನಿಯಮವೆಂದು ಅರ್ಥ ಹೇಳುವುದಾದರೆ, ಅದು ಸಹಕಾರಿಕಾರಣವೆನ್ನಬೇಕು. ಕಾರಿನಲ್ಲಿ ಹೋಗುವಾಗ ಯಂತ್ರವು ಕೆಟ್ಟು ಅಪಘಾತವಾಗಬಹುದು. ಯಂತ್ರದ ಒಂದು ಕೀಲು ಸವೆದು ಮುರಿದುಹೋಗಿರಬಹುದು. ಅದು ಪ್ರಕೃತಿನಿಯಮಕ್ಕೆ ಒಳಪಟ್ಟದ್ದು.

ಇನ್ನು ದೈವವೆಂದರೇನು? ಯಾಜ್ಞವಲ್ಕ್ಯಸ್ಮೃತಿಯೇ ಹೇಳುತ್ತದೆ - ''ತತ್ರ ದೈವಮಭಿವ್ಯಕ್ತಂ ಪೌರುಷಂ ಪೌರ್ವದೇಹಿಕಂ'' ಎಂದು (೧-೩೪೯). ಪೂರ್ವ ದೇಹದಲ್ಲಿ - ಪೂರ್ವಜನ್ಮದಲ್ಲಿ ಮಾಡಿದ ಮನುಷ್ಯನ ಕರ್ಮವೇ ಈಗ ಅಭಿವ್ಯಕ್ತವಾಗಿ ದೈವವೆನಿಸಿಕೊಳ್ಳುತ್ತದೆ. ನಾವು ಮಾಡಿದ ಜನ್ಮಾಂತರೀಯ ಕರ್ಮವೇ ಈಗ ದೈವ, ಅದೃಷ್ಟ ಎನ್ನಿಸಿಕೊಂಡಿದೆ. ಯೋಗವಾಸಿಷ್ಠವೂ ಸಹ ''ಪೂರ್ವಜನ್ಮಕೃತಂ ಕರ್ಮ ತದ್ದೈವಮಿತಿ ಕಥ್ಯತೇ'' ಎಂದು ಸ್ಪಷ್ಟವಾಗಿ ತಿಳಿಸಿದೆ.

ಒಟ್ಟಿನಲ್ಲಿ, ನಾವು ಮಾಡಿದ ಕ್ರಿಯೆಯೇ ಸರ್ವತ್ರ ಫಲದಾಯಕವೆಂದೂ ಕಾಲ-ಪ್ರಕೃತಿ (ಸ್ವಭಾವ)ಗಳೆರಡೂ ಸಹಕಾರಿಕಾರಣಗಳೆಂದೂ ಶಾಸ್ತ್ರಕಾರರ ಸಿದ್ಧಾಂತ.

**ನ ಕಶ್ಚಿತ್ ಕಸ್ಯಚಿನ್ಮಿತ್ರಂ ನ ಕಶ್ಚಿತ್ ಕಸ್ಯಚಿದ್ರಿಪುಃ ।**
**ಕಾರಣೇನ ಹಿ ಜಾಯಂತೇ ಮಿತ್ರಾಣಿ ರಿಪವಸ್ತಥಾ ॥ ೧೩ ॥**

— ಸುಭಾಷಿತರತ್ನ-ಭಾಂಡಾಗಾರ

‘‘ಯಾರಿಗೆ ಯಾರೂ ಸ್ವಾಭಾವಿಕವಾಗಿ ಮಿತ್ರನಾಗುವುದಿಲ್ಲ. ಯಾರಿಗೆ ಯಾರೂ ಶತ್ರುವಾಗುವುದೂ ಇಲ್ಲ. ಕಾರಣವಿರುವುದರಿಂದಲೇ ಮಿತ್ರರೂ ಆಗುತ್ತಾರೆ, ಶತ್ರುಗಳೂ ಆಗುತ್ತಾರೆ.’’

ಕಾರಣವಿಲ್ಲದೆ ಯಾವ ಕಾರ್ಯವೂ ಹುಟ್ಟುವುದಿಲ್ಲವೆಂಬುದೊಂದು ಸಾರ್ವತ್ರಿಕವಾದ ನಿಯಮ. ಲೋಕದಲ್ಲಿ ಹಾಗೆ ಕಂಡುಬಂದಿದೆ. ಶಾಸ್ತ್ರಕಾರರೂ ಅದನ್ನು ಒಪ್ಪಿದ್ದಾರೆ. ‘‘ಪ್ರಯೋಜನಂ ವಿನಾ ಸ್ವಪ್ನೇಽಪಿ ನ ಚೇಷ್ಟತೇ ಚಾಣಕ್ಯಃ’’ - ‘‘ಪ್ರಯೋಜನವಿಲ್ಲದೆ ಈ ಚಾಣಕ್ಯನು ಕನಸಿನಲ್ಲಿಯೂ ಸಹ ಅಲ್ಲಾಡುವುದಿಲ್ಲ!’’ ಎಂದು ಚಾಣಕ್ಯನೇ ‘ಮುದ್ರಾರಾಕ್ಷಸ’ ನಾಟಕದಲ್ಲಿ ಹೇಳುತ್ತಾನೆ. ಪ್ರಾಣಿಗಳಲ್ಲಿಯೂ ಸಹ ಈ ಸ್ನೇಹ ವೈರಗಳು ಕಾರಣವಶದಿಂದಲೇ ಹುಟ್ಟುವುದು ಕಂಡುಬರುತ್ತದೆ. ಹುಲಿಯು ತನ್ನ ಮರಿಯನ್ನು ತನ್ನದೆಂಬ ಮಮತೆಯಿಂದ ಪ್ರೀತಿಸುತ್ತದೆ. ತನ್ನ ಮರಿಯ ಬಳಿಗೆ ಇನ್ನೊಬ್ಬರು ಸುಳಿದರೆ ಅವರನ್ನು ಕೊಂದುಹಾಕೀತು.

ಹುಲಿಗೆ ಮೃಗಗಳ ಮೇಲೆ ದ್ವೇಷವಿರುವುದು ಅವು ತನ್ನ ಆಹಾರವಾದ್ದರಿಂದ. ಮೃಗಗಳಿಗೆ ಹುಲಿಯ ಮೇಲಿರುವ ದ್ವೇಷವು ಭಯನಿಮಿತ್ತದಿಂದ ಹುಟ್ಟಿದ್ದು. ಒಬ್ಬ ಸುಭಾಷಿತಕಾರನು -

> **ಮೃಗ-ಮೀನ-ಸಜ್ಜನಾನಾಂ**
> **ತೃಣ-ಜಲ-ಸಂತೋಷವಿಹಿತ-ವೃತ್ತೀನಾಂ ।**
> **ಲುಬ್ಧಕ-ಧೀವರ-ಪಿಶುನಾಃ**
> **ನಿಷ್ಕಾರಣಾ ವೈರಿಣೋ ಜಗತಿ ॥**

‘‘ಜಿಂಕೆ, ಮೀನು, ಸಜ್ಜನರು ಹುಲ್ಲು, ನೀರು, ಸಂತೃಪ್ತಿಗಳಿಂದ ಕ್ರಮವಾಗಿ ತಮ್ಮ ಪಾಡಿಗೆ ಇರುತ್ತಾರೆ. ಆದರೆ ಬೇಟೆಗಾರನು ಮೃಗಗಳಿಗೂ, ಮೀನು ಹಿಡಿಯುವವನು ಮೀನುಗಳಿಗೂ, ಚಾಡಿಕೋರರು ಸಜ್ಜನರಿಗೂ ಕಾರಣವಿಲ್ಲದೆ ವೈರಿಗಳಾಗಿದ್ದಾರೆ’’ - ಎಂದಿದ್ದಾನೆ. ಅಪಕಾರ ಮಾಡುವುದು ವೈರಿಯ ಲಕ್ಷಣ. ಜಿಂಕೆ

ಮೊದಲಾದವು ಲುಬ್ಧಕಾದಿಗಳಿಗೆ ಯಾವ ಅಪಕಾರವನ್ನೂ ಮಾಡದಿದ್ದರೂ ಅವರು ವೈರಿಗಳಾಗಿದ್ದಾರೆ - ಎಂದು ಸುಭಾಷಿತಕಾರನ ಆಶಯ. ಲುಬ್ಧಕ-ಧೀವರರು ತಮ್ಮ ಬದುಕಿಗಾಗಿ ಮೃಗಗಳನ್ನೂ ಮೀನುಗಳನ್ನೂ ಹಿಡಿದು ಕೊಲ್ಲುವುದರಿಂದ ನಿಮಿತ್ತವಿದ್ದೇ ಇದೆ. ಆದರೆ ಚಾಡಿಕೋರನು ಸಜ್ಜನರನ್ನು ಏಕೆ ಪೀಡಿಸುತ್ತಾನೆ? ಹೊಟ್ಟೆಕಿಚ್ಚಿನಿಂದ - ಎಂಬುದೊಂದೇ ಉತ್ತರ.

''ಆತ್ಮನಃ ಕಾಮಾಯ ಸರ್ವಂ ಪ್ರಿಯಂ ಭವತಿ'' - ''ತನ್ನ ಹಿತಕ್ಕಾಗಿಯೇ ಸರ್ವವೂ ಪ್ರಿಯವಾಗುತ್ತದೆ'' ಎಂದು ಉಪನಿಷತ್ತು ಹೇಳಿದೆ. ಸ್ವಾರ್ಥವು ಸ್ನೇಹಕ್ಕೂ ಸ್ವಾರ್ಥಹಾನಿಯು ವೈರಕ್ಕೂ ಕಾರಣವೆಂದು ಪರ್ಯವಸಾನ.

''ರಾಜಕೀಯದಲ್ಲಿ ಶಾಶ್ವತ ಮಿತ್ರನೂ ಇಲ್ಲ, ಶಾಶ್ವತ ವೈರಿಯೂ ಇಲ್ಲ'' ಎಂಬ ಹೇಳಿಕೆ ಈ ಕಾಲದಲ್ಲಿ ಪ್ರಮಾಣಸಿದ್ಧವಾಗಿದೆ. 'ಬಡಜನರ ಉದ್ಧಾರ', 'ಧರ್ಮನಿರಪೇಕ್ಷತೆ', 'ಸಮತಾವಾದ' - ಮುಂತಾದವೆಲ್ಲವೂ ಬರಿಯ ಘೋಷಣೆಗಳು. ಈ ಜನರು ಪಕ್ಷಾಂತರ ಮಾಡುವುದು ಸ್ವಾರ್ಥಕ್ಕೆ ಭಂಗ ಒದಗಿದಾಗ.

ಕಾರಣವಿಲ್ಲದೆ ವೈರವು ಹುಟ್ಟುವುದಿಲ್ಲ ಎಂಬ ನಿಯಮಕ್ಕೆ ಒಂದು ಅಪವಾದ ಕಂಡುಬರುತ್ತದೆ. ಅದೇ ''ಅಹಿನಕುಲಂ'' - ಹಾವಿಗೂ ಮುಂಗಸಿಗೂ ಇರುವ ವೈರ. ಹಾವನ್ನು ಕಂಡೊಡನೆ ಮುಂಗಸಿಯು ಹಾರಿ ಬಂದು ಹಾವಿನೊಡನೆ ಹೋರಾಟಕ್ಕೆ ನಿಲ್ಲುತ್ತದೆ. ಹಾವನ್ನು ಕೊಂದು ತುಂಡು ಮಾಡಿ ಹೊರಟುಹೋಗುತ್ತದೆ ! ಹಾವನ್ನು ಮುಂಗಸಿ ತಿನ್ನುವುದಿಲ್ಲ. ಈ ವೈರಕ್ಕೆ ಕಾರಣವೇನಿರಬಹುದು? ಜನ್ಮಾಂತರದ ದ್ವೇಷವಿರಬಹುದೆ?

> ದಾನಾಯ ಲಕ್ಷ್ಮೀಃ ಸುಕೃತಾಯ ವಿದ್ಯಾ ಚಿಂತಾ ಪರಬ್ರಹ್ಮವಿನಿಶ್ಚಯಾಯ ।
> ಪರೋಪಕಾರಾಯ ವಚಾಂಸಿ ಯಸ್ಯ ವಂದ್ಯಸ್ತ್ರಿಲೋಕೀತಿಲಕಃ ಸ ಏವ ॥೧೪॥
>
> — ಸುಭಾಷಿತರತ್ನ-ಭಾಂಡಾಗಾರ

''ಯಾವಾತನಿಗೆ ಹಣವು ದಾನಕ್ಕಾಗಿ, ವಿದ್ಯೆಯು ಪುಣ್ಯಕಾರ್ಯಗಳಿಗಾಗಿ, ಚಿಂತನೆಯು ಪರಬ್ರಹ್ಮವನ್ನು ನಿಶ್ಚಯಿಸಿ ತಿಳಿಯುವುದಕ್ಕಾಗಿ, ಮಾತು ಪರೋಪಕಾರಕ್ಕಾಗಿ ಇರುವುದೋ ಅವನು ಮೂರು ಲೋಕಗಳಲ್ಲಿಯೂ ಶ್ರೇಷ್ಠನಾದವನು. ಅವನು ವಂದನಾರ್ಹ.''

ಪ್ರತಿಯೊಂದು ವಸ್ತುವನ್ನೂ ಒಳಿತಿಗಾಗಿಯೂ ಬಳಸಬಹುದು, ಕೆಡುಕಿಗಾಗಿಯೂ ಬಳಸಬಹುದು. ಕೆಡುಕು ಪರರಿಗೂ ಆಗಬಹುದು, ತನಗೂ ಆಗಬಹುದು. ಕತ್ತಿಯಿಂದ ಮುಳ್ಳುಗಿಡವನ್ನು ಕಡಿಯಬಹುದು. ಪಕ್ಕದ ಮನೆಯವರ ಹೂವಿನ ಗಿಡವನ್ನು ಕತ್ತರಿಸಬಹುದು. ಹಣದಿಂದ ಆಗದ ಕಾರ್ಯ ಯಾವುದು? ಎಷ್ಟು ಒಳ್ಳೆಯದನ್ನು ಮಾಡಬಹುದೋ ಅಷ್ಟು ಅನರ್ಥಗಳನ್ನೂ ಸೃಷ್ಟಿಸುವ ಬೀಜಶಕ್ತಿ ಹಣದಲ್ಲಿದೆ. ಬಡವರ ಕಣ್ಣೀರನ್ನು ಒರಸಲು ಸತ್ಪಾತ್ರದಲ್ಲಿ ದಾನಮಾಡಿದ ಅರ್ಥವು ಸಾರ್ಥಕ.

ಉತ್ತಮಕಾರ್ಯವು ವಿದ್ಯೆ ಇಲ್ಲದೆಯೂ ನಡೆದೀತು. ಆದರೆ ಅದು ಬಲವತ್ತರವಾಗುವುದಿಲ್ಲ. ಸಮಸ್ತ ಕಾರ್ಯಗಳಿಗೂ ಬಲವನ್ನು ನೀಡತಕ್ಕದ್ದು ವಿದ್ಯೆ. ತರ್ಕಾದಿಶಾಸ್ತ್ರಗಳಲ್ಲಿ ವೈದುಷ್ಯವನ್ನು ಗಳಿಸಿದವರು ವಾದದಲ್ಲಿ ಅನ್ಯರನ್ನು ಸೋಲಿಸಿ ಕೀರ್ತಿಶಾಲಿಗಳಾಗಬೇಕೆಂಬ ಚಾಪಲ್ಯದಿಂದ ಅಲೆಯುತ್ತಿದ್ದುದುಂಟು. ಆದ್ದರಿಂದ 'ವಿದ್ಯಾ ವಿವಾದಾಯ, ಧನಂ ಮದಾಯ' ಎಂಬ ನುಡಿಗಳು ಹುಟ್ಟಿಕೊಂಡವು. 'ವಿದ್ಯಾ ದದಾತಿ ವಿನಯಂ' ಎಂಬುದು ದೊಡ್ಡ ಮಾತು. ವಿಶಿಷ್ಟವಾದ ನಯ-ನೀತಿಯು ವಿನಯವೆನಿಸುತ್ತದೆ. ಇಲ್ಲಿ ವಿಧೇಯತೆ ಎಂಬ ಅರ್ಥವಲ್ಲ. ಕೆಲಸ ಮಾಡುವುದರಲ್ಲಿರುವ ಒಂದು ಕೌಶಲ ಅದು. 'ಯೋಗಃ ಕರ್ಮಸು ಕೌಶಲಂ' ಎಂದು ಗೀತಾವಚನ. ಅದು ಸುಕೃತಕ್ಕೆ, ಉತ್ತಮವಾದ ಕೃತಿಗೆ ಕಾರಣವಾಗಬೇಕು.

ಚಿಂತೆಯಿಲ್ಲದ ಮಾನವನಿಲ್ಲ. ಅದರಲ್ಲಿಯೂ ರಾಜಕೀಯಸ್ಥರಿಗಿರುವಷ್ಟು ಚಿಂತೆ ಇನ್ನಾರಿಗೂ ಇಲ್ಲ! ಚುನಾವಣೆಯಲ್ಲಿ ಗೆದ್ದರೂ ಚಿಂತೆ, ಸೋತರೂ ಚಿಂತೆ. ಆಸ್ತಿಗಾಗಿ, ಅಧಿಕಾರಕ್ಕಾಗಿ, ಸೇಡುತೀರಿಸಿಕೊಳ್ಳುವುದಕ್ಕಾಗಿ ಹಗಲಿರುಳು ಚಿಂತಿಸತಕ್ಕವರಿದ್ದಾರೆ.

ಭಗವಚ್ಚಿಂತನೆಗೆ ಮಾತ್ರ ಅವರಿಗೆ ಒಂದು ನಿಮಿಷವೂ ಬಿಡುವಿಲ್ಲ! ಚಿಂತೆಯು ಸದ್ವಿಷಯಗಳ ಕಡೆಗೆ ತಿರುಗಿ ಚಿಂತನವಾಗಬೇಕು. ಇಲ್ಲದಿದ್ದರೆ ಚಿಂತೆಯು ಚಿತೆಯಾದೀತು. ಭಯೋತ್ಪಾದಕರೆಂಬ ಮನುಷ್ಯಾಕೃತಿಯುಳ್ಳ ಒಂದು ಜಾತಿಯ ತಳಿ ಈ ವಿಜ್ಞಾನಯುಗದಲ್ಲಿ ಜನ್ಮತಳೆದಿದೆ. ಜನರನ್ನು ಯಾವ ಬಗೆಯಿಂದ ಕೊಲ್ಲಬೇಕೆಂಬುದರ ಹೊರತು ಇನ್ನೊಂದು ಚಿಂತೆ ಇವರಿಗಿಲ್ಲ!

ಮಾತಾಡುವುದು ಸಹ ನಮ್ಮ ಶಕ್ತಿಯ ವ್ಯಯವೇ ಆಗಿದೆ. ದೈವದತ್ತವಾದ ಈ ಶಕ್ತಿಯನ್ನು ಯಥೇಚ್ಛವಾಗಿ ಜನರು ಬಳಸಿ ಬಳಸಿ ದುರ್ವ್ಯಯ ಮಾಡುತ್ತಿದ್ದಾರೆ. ಏಕೆಂದರೆ ಈ ಮಾತಾಡುವ ಶಕ್ತಿಯನ್ನು ಇವರು ದುಡಿದು ಸಂಪಾದಿಸಿಲ್ಲ! ವಾಕ್ ಶಕ್ತಿಗಿರುವ ಸಾಮರ್ಥ್ಯ ಅಸಾಧಾರಣವಾದದ್ದು. ಅದನ್ನು ಬಳಸುವ ವಿಧಾನವನ್ನು ಜನರು ಅರಿಯರು. ಮಿತಭಾಷಿತೆ ಒಂದು ದೊಡ್ಡ ಗುಣ. 'ಸತ್ಯಾಯ ಮಿತಭಾಷಿಣಾಂ' ಎಂದು ಮಹಾಕವಿ ಕಾಳಿದಾಸನು ಅದನ್ನು ಸೂತ್ರಿಸಿದ್ದಾನೆ.

ನ ಪಾಣಿಪಾದಚಪಲೋ ನ ನೇತ್ರಚಪಲೋಽನೃಜುಃ ।
ನ ಸ್ಯಾದ್ವಾಕ್‌ಚಪಲಶ್ಚೈವ ನ ಪರದ್ರೋಹಕರ್ಮಧೀಃ ॥ ೧೫ ॥

— ಮನುಸ್ಮೃತಿ, ೪-೧೭೭

''ಕೈಕಾಲುಗಳನ್ನು ಅನಾವಶ್ಯಕವಾಗಿ ಬಳಸಬಾರದು, ಕುಣಿಸಬಾರದು. ನೇರವಾದ ಸತ್ಯಮಾರ್ಗವನ್ನು ಬಿಟ್ಟು ವಕ್ರಮಾರ್ಗವನ್ನು ಹಿಡಿಯಬಾರದು. ಅತಿಯಾಗಿ ಮಾತಾಡುವ ಚಾಪಲ್ಯವನ್ನು ತೊರೆಯಬೇಕು. ಇನ್ನೊಬ್ಬರಿಗೆ ಕೆಡುಕನ್ನು ಮಾಡಲೂಬಾರದು, ಚಿಂತಿಸಲೂಬಾರದು.''

ಮನುಷ್ಯನು ತನ್ನ ಕರ್ಮೇಂದ್ರಿಯಗಳನ್ನೂ ಜ್ಞಾನೇಂದ್ರಿಯಗಳನ್ನೂ ದುರುಪಯೋಗಪಡಿಸಿಕೊಳ್ಳಬಾರದು - ಎಂಬುದು ಈ ಶ್ಲೋಕದ ಮುಖ್ಯ ತಾತ್ಪರ್ಯ.

ಎಲ್ಲ ಇಂದ್ರಿಯಗಳ ಸಮೃದ್ಧಿಯೂ ಇನ್ನಾವ ಪ್ರಾಣಿಗೂ ಇಲ್ಲದ ಬುದ್ಧಿಶಕ್ತಿಯೂ ಮನುಷ್ಯನಿಗೆ ಲಭಿಸಿವೆ. ಆದ್ದರಿಂದಲೇ ಪ್ರಾಣಿಗಳಲ್ಲಿ ಮನುಷ್ಯನಿಗೆ ಶ್ರೇಷ್ಠತೆ. ''ಜಂತೂನಾಂ ನರಜನ್ಮ ದುರ್ಲಭಂ'' ಇತ್ಯಾದಿ ಸುಭಾಷಿತಗಳು ಮನುಷ್ಯಜನ್ಮವನ್ನು ಹೊಗಳಿವೆ. ಮನಸ್ಸು ಎಳೆದಂತೆ, ಬುದ್ಧಿಗೆ ತೋಚಿದಂತೆ, ಯಾವ ಕಟ್ಟಳೆಗೂ ಒಳಪಡದೆ ಮನುಷ್ಯನೂ ನಡೆಯುವುದಾದರೆ ಅವನ ಹೆಚ್ಚುಗಾರಿಕೆ ಏನು?

ಸರ್ಕಾರದ ನಿಯಂತ್ರಣಕ್ಕೆ ಒಳಪಡಲಾರದ್ದನ್ನೂ ಧರ್ಮಶಾಸ್ತ್ರವು ನಿಯಂತ್ರಿಸುತ್ತದೆ. ಈ ನಿಯಂತ್ರಣವು ಸಭ್ಯಸಂಸ್ಕೃತಿಯ ಲಕ್ಷಣವೂ ಆಗುತ್ತದೆ. ಮನುಷ್ಯಸಾಮಾನ್ಯನಿಗೂ ಕೆಲವು ಚಾಪಲ್ಯಗಳು (ಅನಾವಶ್ಯಕವಾದ ಚೇಷ್ಟೆಗಳು, ಚಿಂತನೆಗಳು) ಇರುತ್ತವೆ. ಅದನ್ನು ಮನುವು ಇಲ್ಲಿ ಸಂಗ್ರಹದಿಂದ ಹೇಳಿ ನಿಷೇಧಿಸುತ್ತಾನೆ:

೧. ಹಸ್ತಚಾಪಲ್ಯ = ಕಂಡ ಕಂಡ ವಸ್ತುವನ್ನು ತಂದು ಮನೆಯಲ್ಲಿ ತುಂಬಿಕೊಳ್ಳುವುದು. ಪರಕೀಯರ ಒಡವೆಯನ್ನು ಕದಿಯುವುದು. ಮಾತಾಡುವಾಗ ಅತಿಯಾದ ಹಸ್ತಾಭಿನಯ.

೨. ಪಾದಚಾಪಲ್ಯ = ನಿಷ್ಪ್ರಯೋಜನವಾಗಿ ಅಲೆದಾಡುವುದು. ಕೆಲಸವಿಲ್ಲದೆ ಇನ್ನೊಬ್ಬರ ಮನೆಗೆ ಹೋಗುವುದು. ಸಿಟ್ಟಿನಿಂದ ಕಾಲೆತ್ತುವುದು. ಕುಳಿತಾಗ ಸುಮ್ಮನೆ ಕಾಲು ಕುಣಿಸುವುದು.

೩. ನೇತ್ರಚಾಪಲ್ಯ = ಪರಸ್ತ್ರೀಯರನ್ನೂ ಪರಪುರುಷರನ್ನೂ ದಿಟ್ಟಿಸಿ ನೋಡುತ್ತಿರುವುದು. ಮನೋರಂಜನೆಗಾಗಿ ನಾಟಕ ಮೊದಲಾದ್ದನ್ನು ಮತ್ತೆ ಮತ್ತೆ ನೋಡುವ ಹುಚ್ಚು, ಇತ್ಯಾದಿ.

೪. ವಾಕ್‌ಚಾಪಲ್ಯ = ಹರಟೆ ಹೊಡೆಯುವುದು. ಅನಾವಶ್ಯಕವಾಗಿ ಮಾತನ್ನು ಬೆಳೆಸುವುದು. ಸಭೆಯಲ್ಲಿ ಭಾಷಣ ಮಾಡಬೇಕೆಂಬ ಹಂಬಲ. ಹೇಳಿದ್ದನ್ನೇ ಮತ್ತೆ ಮತ್ತೆ ಹೇಳುತ್ತಿರುವುದು.

ಇವು ನಾಲ್ಕು ಇಂದ್ರಿಯಚಾಪಲ್ಯಗಳಾದವು. ಕುಟಿಲಮಾರ್ಗವಾದ ಸುಳ್ಳು, ಚಾಡಿ, ವಂಚನೆ ಮೊದಲಾದದ್ದು, ಮತ್ತು ಪರರಿಗೆ ಕೆಡುಕಾಗಲೆಂದು ಸಂಚು ಹೂಡುವುದು, ಅದನ್ನೇ ಚಿಂತಿಸುವುದು - ಇವೆಲ್ಲವೂ ಮನಶ್ಚಾಪಲ್ಯಗಳು.

ಆಧುನಿಕ ಮನುವಿಗೆ ನಿಷೇಧಿಸಲು ಸಾಧ್ಯವಿಲ್ಲದ್ದನ್ನು ಪ್ರಾಚೀನ ಮನು ನಿಷೇಧಿಸಿದ್ದಾನೆ. ಈ ನಿಷೇಧಗಳನ್ನು ಮನುವಾದಿಗಳು ಒಪ್ಪುತ್ತಾರೆ.

**ಸಾಮೃತೈಃ ಪಾಣಿಭಿರ್ಘ್ನಂತಿ ಗುರವೋ ನ ವಿಷೋಕ್ಷಿತೈಃ ।**
**ಲಾಲನಾಶ್ರಯಿಣೋ ದೋಷಾಸ್ತಾಡನಾಶ್ರಯಿಣೋ ಗುಣಾಃ ॥ ೧೬ ॥**

— ಅಜ್ಞಾತಮೂಲ

''ಗುರುಗಳು ಕೈಗೆ ಅಮೃತವನ್ನು ಹಚ್ಚಿಕೊಂಡು ಶಿಷ್ಯರನ್ನು ಹೊಡೆಯುತ್ತಾರೆ, ವಿಷವನ್ನು ಹಚ್ಚಿಕೊಂಡಲ್ಲ. ಮಕ್ಕಳನ್ನು ಮುದ್ದಿಸುವುದರಿಂದ ದೋಷಗಳು ಎದ್ದುಕೊಳ್ಳುತ್ತವೆ. ದಂಡಿಸುವುದರಿಂದ ಗುಣಗಳು ಕಾಣಿಸುತ್ತವೆ.''

ಹಿಂದಿನ ಕಾಲದಲ್ಲಿ ತಪ್ಪುಮಾಡಿದ ವಿದ್ಯಾರ್ಥಿಗಳನ್ನು ಉಪಾಧ್ಯಾಯರು ದಂಡಿಸುತ್ತಿದ್ದರು. ತಪ್ಪಿಗೆ ಅನುಗುಣವಾದ ಶಿಕ್ಷೆ. ಎದ್ದು ನಿಲ್ಲಿಸುವುದು, ಅಂಗೈಯ ಮೇಲೆ ಒಂದೆರಡು ಹೊಡೆತಗಳನ್ನು ಕೊಡುವುದು, ತಾನೇ ಕೆನ್ನೆಗೆ ಹೊಡೆದುಕೊಳ್ಳುವಂತೆ ಹೇಳುವುದು - ಇಂತಹದು ಯಥಾಯೋಗ್ಯವಾಗಿ ನಡೆಯುತ್ತಿತ್ತು. ಶಿಷ್ಯರಿಗೆ ಗುರುವಿನಲ್ಲಿ ಗೌರವಭಾವವಿತ್ತು. ಗುರುವಿಗೂ ಶಿಷ್ಯರಲ್ಲಿ ಪ್ರೀತಿ ವಾತ್ಸಲ್ಯಗಳಿದ್ದು ಮಕ್ಕಳ ಏಳಿಗೆಗಾಗಿ ಕಷ್ಟಪಡುತ್ತಿದ್ದನು. ವಿದ್ಯಾರ್ಥಿಗಳ ತಾಯಿತಂದೆಗಳಿಗೂ ಉಪಾಧ್ಯಾಯರಲ್ಲಿ ಗೌರವ. ಮಕ್ಕಳನ್ನು ದಂಡಿಸಿದರೆಂದು ಅವರನ್ನು ಆಕ್ಷೇಪಿಸುತ್ತಿರಲಿಲ್ಲ. ಅವರ ಸದ್ಭಾವನೆ ತಿಳಿದಿತ್ತು. ಮಕ್ಕಳನ್ನು ದಂಡಿಸದಿದ್ದರೆ ಅವರು ದುರ್ಮಾರ್ಗಿಗಳಾಗಿ ದಾರಿ ತಪ್ಪುತ್ತಾರೆಂದು ಹಿರಿಯರು ನಂಬಿದ್ದರು. ವ್ಯಾಕರಣ ಮಹಾಭಾಷ್ಯದಲ್ಲಿ ''ಖಂಡಿಕೋಪಾಧ್ಯಾಯಃ ಶಿಷ್ಯಾಯ ಚಪೇಟಾಂ ದದಾತಿ'' ಎಂದು

ಚತುರ್ಥೀವಿಭಕ್ತಿಗೆ ಒಂದು ಉದಾಹರಣೆಯನ್ನು ಕೊಟ್ಟಿದ್ದಾರೆ. ''ವೇದದ ಕಂಡಿಕೆಯನ್ನು ಕಲಿಸುತ್ತಿದ್ದ ಉಪಾಧ್ಯಾಯನು ಶಿಷ್ಯನ ಕೆನ್ನೆಗೆ ಹೊಡೆಯುತ್ತಾನೆ'' ಎಂದು ಈ ವಾಕ್ಯದ ಅರ್ಥ.

ಈಗ ಕಾಲ ಬದಲಾಯಿಸಿದೆ. ಮಕ್ಕಳನ್ನು ದಂಡಿಸಬಾರದೆಂದು ಶಿಕ್ಷಣ ತಜ್ಞರು ಹೇಳುತ್ತಿದ್ದಾರೆ. ದಂಡಿಸಿದರೆ ತಾಯಿತಂದೆಗಳು ದೂರು ಹೇಳುತ್ತಾರೆ. ವಿದ್ಯಾರ್ಥಿಗಳು ಉಪಾಧ್ಯಾಯರನ್ನು ಲೆಕ್ಕಿಸುವುದೇ ಇಲ್ಲ. ಅವರ ಮೇಲೆ ಕೈಮಾಡಬಹುದು, ಮುಷ್ಕರ ಹೂಡಬಹುದು. ಗುರು-ಶಿಷ್ಯರ ಮಧುರ ಬಾಂಧವ್ಯ ಕಡಿದುಹೋಗುತ್ತಿದೆ.

ಬನವಾಸಿ ಪ್ರಾಂತದಲ್ಲಿ ಅಲ್ಲಮಪ್ರಭುವೆಂಬ ಒಬ್ಬ ಶಿವಯೋಗಿ ಇದ್ದರು. ಮಹಾತ್ಮರು, ಜ್ಞಾನಿಗಳು. ಅವರ ಒಂದು ವಚನ ಇಲ್ಲಿ ಸ್ಮರಣೆಗೆ ಬರುತ್ತದೆ:

**ಕೃತಯುಗದಲ್ಲಿ ಶ್ರೀಗುರು ಶಿಷ್ಯಗೆ ಬಡಿದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ।**

**ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಗೆ ಬೈದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ।**

**ದ್ವಾಪರದಲ್ಲಿ ಶ್ರೀಗುರು ಶಿಷ್ಯಗೆ ಝಂಕಿಸಿ ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ।**

**ಕಲಿಯುಗದಲಿ ಶ್ರೀಗುರು ಶಿಷ್ಯಗೆ ಕೈಮುಗಿದು ಬುದ್ಧಿಯ ಕಲಿಸಿದಡೆ**
**ಆಗಲಿ ಮಹಾಪ್ರಸಾದವೆಂದನಯ್ಯಾ।**

**ನಿಮ್ಮ ಕಾಲದ ಕಟ್ಟಳೆಯ ಕಂಡು ಬೆರಗಾದೆನಯ್ಯಾ ಗುಹೇಶ್ವರಾ॥**

ಯುಗಧರ್ಮ ಇನ್ನೂ ಮುಂದೆ ಹೋಗಿದೆ. ಕೈಮುಗಿದು ಹೇಳಿದರೂ ಶಿಷ್ಯನು ''ಆಗದಾಗದು ಎಂದು ಝಂಕಿಸುವನಯ್ಯಾ ಗುಹೇಶ್ವರಾ''!

**ವಿಪರ್ಯಸ್ತಮನಶ್ಚೇಷ್ಟೈಃ ಶಿಲಾಶಕಲವರ್ಷ್ಮಭಿಃ।**
**ಮಾಂಸವೃಕ್ಷೈರಿಯಂ ಮೂರ್ಖೈರ್ಭಾರಾಕ್ರಾಂತಾ ವಸುಂಧರಾ ॥ ೧೭ ॥**

— ಮೃಚ್ಛಕಟಿಕ, ೮-೬

''ಮಾಂಸ ತುಂಬಿದ ಮರಗಳೇ ಆಗಿರುವ ಮೂರ್ಖರು ಭೂಮಿಗೆ ಭಾರವಾಗಿ ತುಂಬಿಕೊಂಡಿದ್ದಾರೆ. ಈ ಮೂರ್ಖರ ಮನಸ್ಸು, ಕೃತ್ಯಗಳೆಲ್ಲವೂ ಧರ್ಮವಿರುದ್ಧವಾಗಿ (ಮರದ ಕೊಂಬೆಗಳಂತೆ) ಸೊಟ್ಟಾಪಟ್ಟೆಯಾಗಿ ಹರಡಿಕೊಂಡಿವೆ. ಇವರ ದೇಹಗಳು ಕಲ್ಲಿನ ಹಲಗೆಗಳಂತೆ ಕಠಿಣಸ್ವಭಾವದವು.''

ಈ ಆಕ್ರೋಶಪೂರ್ಣವಾದ ನಿಂದೆಯನ್ನು ಶೂದ್ರಕನೆಂಬ ಕವಿಯು ದುರ್ಜನರ ವಿಷಯವಾಗಿ ಮಾಡಿದ್ದಾನೆ. ಈ ಕವಿಯ ಕಾಲ ಕ್ರಿ.ಶ. ಸುಮಾರು ೪೦೦ ಆಗಿರಬಹುದೆಂದು ವಿಮರ್ಶಕರು ಹೇಳಿದ್ದಾರೆ. ಪಾಲಕನೆಂಬ ರಾಜನ ಮಡದಿಯ ತಮ್ಮ ಶಕಾರ ಎಂಬವನು ರಾಜಾಶ್ರಯದ ಬಲದಿಂದ ಪುಢಾರಿಯಾಗಿ ರೌಡಿಗಳ ಪಟ್ಟಿಯಲ್ಲಿ ಸೇರಿದ್ದ. ಅವನು ವಸಂತಸೇನೆಯೆಂಬವಳ ಕತ್ತನ್ನು ಹಿಸುಕಿ ಅವಳ ದೇಹವನ್ನು ತರಗೆಲೆಗಳಿಂದ ಮುಚ್ಚಿ ಓಡಿಹೋಗುತ್ತಾನೆ. ಕತ್ತು ಹಿಸುಕುವ ಮೊದಲು ಶಕಾರನು ವಸಂತಸೇನೆಗೆ ಹೇಳಿದ ಮಾತು, ಈ ಕಾಲದ ರೌಡಿಗಳ ವಿದ್ಯೆಯನ್ನು ಅಣಕಿಸುತ್ತದೆ. ಅವನು ಹೇಳುವ ಮಾತಿದು:

**ಚಾಣಕ್ಯೇನ ಯಥಾ ಸೀತಾ ಮಾರಿತಾ ಭಾರತೇ ಯುಗೇ ।**
**ಏವಂ ತ್ವಾಂ ಮೋಟಯಿಷ್ಯಾಮಿ ಜಟಾಯುರಿವ ದ್ರೌಪದೀಂ॥**

''ಹಿಂದೆ ಭಾರತಯುಗದಲ್ಲಿ ಚಾಣಕ್ಯನು ಸೀತೆಯನ್ನು ಹೇಗೆ ಕೊಂದನೋ, ಜಟಾಯುವು ದ್ರೌಪದಿಯನ್ನು ಹೇಗೆ ಕೊಂದನೋ, ಹಾಗೆ ನಿನ್ನನ್ನು ಕೊಂದುಹಾಕುವೆನು!''

ಶಕಾರನಂತಹ ಮೂರ್ಖರಾದ ಕೇಡಿಗರು ಯಾವ ಕಾಲದಲ್ಲಿಯಾದರೂ

ಇರುತ್ತಾರೆ. ಕವಿಯು 'ಮಾಂಸವೃಕ್ಷಗಳು' ಎಂಬ ಶಬ್ದವನ್ನು ಬಳಸಿದ್ದಾನೆ. ಹಾಗೆಂದರೇನು? ಮಾಂಸಾಹಾರಿಗಳಾದ ಮರಗಳು ಇವೆಯೆಂದು ಸಸ್ಯಶಾಸ್ತ್ರಜ್ಞರು ಹೇಳಿದ್ದುಂಟು. ಅಥವಾ ಅಂತಃಕರಣಶೂನ್ಯರಾದ ಮಾಂಸ ತುಂಬಿದ ಮರಗಳಂತೆ ಇರತಕ್ಕವರು - ಎಂದು ಅಭಿಪ್ರಾಯವಿರಬಹುದು. ಬೆಳಗಾದರೆ ಬರುವ ಪತ್ರಿಕೆಗಳಲ್ಲಿ ಇಂತಹ ರೌಡಿಜನರ ದುಷ್ಕೃತ್ಯಗಳ ಕಥೆ ಇದ್ದೇ ಇರುತ್ತದೆ. ಮಗನು ತಂದೆಯನ್ನು ಕೊಲ್ಲುತ್ತಾನೆ. ತಂದೆ ಮಗನನ್ನು ಕೊಲ್ಲುತ್ತಾನೆ. ಗಂಡನಾದವನು ಹೆಂಡತಿಯ ಮೈಗೆ ಸೀಮೆಯೆಣ್ಣೆಯನ್ನು ಸುರಿದು ಬೆಂಕಿ ಹಚ್ಚುತ್ತಾನೆ. ಹೆಂಡತಿ ಗಂಡನ ತಲೆಯನ್ನು ಕಡಿದು ಕೈಚೀಲದಲ್ಲಿ ತುಂಬಿಕೊಂಡು ಹೋಗಿ ಪೊಲೀಸರಿಗೆ ತೋರಿಸುತ್ತಾಳೆ. ಇನ್ನೊಬ್ಬ ನೀಚನು ಒಬ್ಬ ಮಹಿಳೆಯ ಶೀಲವನ್ನು ಕೆಡಿಸಿ ಅವಳ ಕತ್ತು ಹಿಸುಕಿ ಕೊಲೆ ಮಾಡಿ ಓಡಿಹೋಗುತ್ತಾನೆ. ಜನರು ಗುಂಪುಗೂಡಿ ಗುಡಿಸಲಿಗೆ ಬೆಂಕಿ ಹಚ್ಚಿ ಮನೆಯಲ್ಲಿದ್ದವರನ್ನೆಲ್ಲ ಸುಟ್ಟು ಬೂದಿ ಮಾಡುತ್ತಾರೆ. ಇಂತಹ ಊಹಿಸಲಾರದ ಕ್ರೂರ ಕೃತ್ಯಗಳು ಎಷ್ಟೋ. ಯಾವ ಸರ್ಕಾರ ತಾನೆ ಇಂತಹ ದುಷ್ಕೃತ್ಯವನ್ನು ತಡೆಯಬಲ್ಲದು? ಯಾವ ಕಾನೂನು ಹೀಗೆ ಬಲಿಯಾಗತಕ್ಕವರಿಗೆ ರಕ್ಷಣೆಯನ್ನು ನೀಡೀತು?

ನೀತಿ-ಧರ್ಮಗಳ ವಿವೇಚನೆ ರಸಾತಳಕ್ಕೆ ಇಳಿದುಹೋಗಿದೆ. ಬಡತನವು ಎಲ್ಲಾ ಪಾಪಗಳಿಗೆ ಮೂಲ ಎಂಬುದು ಹುಸಿ. ಹಣವಂತರ ದುರಾಸೆಯೇ ಅಧಿಕ ಪಾಪಕೃತ್ಯಗಳನ್ನು ಮಾಡಿಸುತ್ತಿದೆ. ಧರ್ಮದ ನೆಲಗಟ್ಟಿಲ್ಲದ ಆರ್ಥಿಕ ಅಭಿವೃದ್ಧಿಯು ಮರಳಿನ ರಾಶಿಯ ಮೇಲೆ ಮನೆ ಕಟ್ಟಿದಂತೆ ವ್ಯರ್ಥ.

**ಕ್ಷಮಾತುಲ್ಯಂ ತಪೋ ನಾಸ್ತಿ ನ ಸಂತೋಷಾತ್ ಪರಂ ಸುಖಂ ।**
**ನ ತೃಷ್ಣಾಯಾಃ ಪರೋ ವ್ಯಾಧಿರ್ನ ಚ ಧರ್ಮೋ ದಯಾಪರಃ ॥ ೧೮ ॥**

— ಸುಭಾಷಿತರತ್ನ-ಭಾಂಡಾಗಾರ

''ಕ್ಷಮೆಗೆ ಸಮವಾದ ತಪಸ್ಸು ಇಲ್ಲ. ತೃಪ್ತಿಗಿಂತ ಹೆಚ್ಚಿನ ಸುಖವಿಲ್ಲ. ಆಸೆಗಿಂತ ದೊಡ್ಡದಾದ ರೋಗವಿಲ್ಲ. ದಯೆಗಿಂತ ದೊಡ್ಡ ಧರ್ಮವಿಲ್ಲ.''

ಇನ್ನೊಬ್ಬರು ಅಪರಾಧ ಮಾಡಿದಾಗ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಅವರ ವಿಷಯದಲ್ಲಿ ಕೋಪ-ದ್ವೇಷಗಳನ್ನು ತಳೆಯದಿರುವ ಮನೋಧರ್ಮಕ್ಕೆ ಕ್ಷಮೆಯೆಂದು ಹೆಸರು. ಕಠಿಣವಾದ ನಿಯಮಗಳನ್ನು ಪಾಲಿಸುತ್ತಾ ಧ್ಯಾನ, ಪೂಜೆ ಮುಂತಾದ ಶಾಸ್ತ್ರೀಯ ಕರ್ಮವನ್ನಾಚರಿಸುವುದು ತಪಸ್ಸು. ಈ ತಪಸ್ಸಿಗಿಂತ ಕ್ಷಮಾಗುಣವು ಹೆಚ್ಚಿನದು. ಕ್ಷಮೆಯು ನಮ್ಮ ಮನಸ್ಸಿನ ಮೇಲಿರುವ ನಿಗ್ರಹಶಕ್ತಿಯಿಂದ ಆಗತಕ್ಕದ್ದು. ಇದೊಂದು ದೊಡ್ಡ ಗುಣ. ತೃಪ್ತಿಗಿಂತ ಹೆಚ್ಚಿನ ಸುಖವಿಲ್ಲ. ''ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ'' ಮನಸ್ಸು ತೃಪ್ತಿಯಿಂದಿರುವಾಗ ಹಣವಂತನು ಯಾರು, ಬಡವನು ಯಾರು? ತೃಪ್ತಿಯಿಲ್ಲದಿದ್ದರೆ ಹಣವಂತನಾದರೂ ಅವನು ದರಿದ್ರನೇ. ತೃಪ್ತಿಯಿಂದಿರುವ ಬಡವನು ನೆಲದ ಮೇಲೆ ಮಲಗಿದ್ದರೂ ಚೆನ್ನಾಗಿ ನಿದ್ರಿಸುತ್ತಾನೆ; ತೃಪ್ತಿಯಿಲ್ಲದ ಶ್ರೀಮಂತನಿಗೆ ಸುಪ್ಪತ್ತಿಗೆಯಲ್ಲಿ ಮಲಗಿದರೂ ನಿದ್ರೆ ಬರುವುದಿಲ್ಲ. ಆಸೆಗೆ ಸಮವಾದ ರೋಗವಿಲ್ಲ. ರೋಗಕ್ಕೆ ಔಷಧ ಉಂಟು; ಕೆಲವು ಕಾಲವಾದರೂ ಅದರ ಬಾಧೆ ತಪ್ಪಬಹುದು. ಆಸೆಗೆ ಔಷಧವೇ ಇಲ್ಲ. ಅದು ಸದಾ ಮನುಷ್ಯನನ್ನು ಬಾಧಿಸುತ್ತಿರುತ್ತದೆ. 'ಆಶಾಯಾ ಯೇ ದಾಸಾಃ ತೇ ದಾಸಾಃ ಸರ್ವಲೋಕಸ್ಯ'' ಎಂಬ ಒಂದು ನೀತಿವಚನ ಉಂಟು. ಆಸೆಗೆ ಯಾರು ದಾಸರೋ ಅವರು ಸಮಸ್ತ ಜನರಿಗೂ ದಾಸರೇ ಎಂದರ್ಥ. ಆಸೆಯು ಗುಣವಾಗದ ರೋಗವಾದ್ದರಿಂದ ಅದೊಂದು ಮಹಾರೋಗವೆನ್ನಲಡ್ಡಿಯಿಲ್ಲ.

ಬಡತನ, ರೋಗ - ಮುಂತಾದ ಕಷ್ಟಗಳಲ್ಲಿ ಸಿಕ್ಕಿದವರು ದೀನರು. ಇಂತಹ ದೀನರ ಬಗೆಗೇ ದಯೆ ಹುಟ್ಟುವುದು. ದಯೆಯಿಂದ ಉಪಕಾರಬುದ್ಧಿಯುಂಟಾಗುತ್ತದೆ. ಹಸಿವಿನಿಂದ ಬಳಲಿರತಕ್ಕವನಿಗೆ ಅನ್ನವನ್ನು ನೀಡುವುದು ದಯೆಯಿಂದಲೇ. ದಯೆಗೆ ಪಾತ್ರನಾಗತಕ್ಕವನು ದೀನನೇ. ಇದೇ ದಯೆಯಲ್ಲಿರುವ ವೈಶಿಷ್ಟ್ಯ. ಇತರ ಧರ್ಮಕಾರ್ಯಗಳು ಕಷ್ಟದಲ್ಲಿರುವವರಿಗೆ ತಲಪುತ್ತವೆಯೆಂಬ ನಿಯಮವಿಲ್ಲ. ಉದಾಹರಣೆಗೆ, ದತ್ತಿನಿಧಿಯನ್ನು ಸ್ಥಾಪಿಸಿ ಉಪನ್ಯಾಸಗಳನ್ನು ಮಾಡಿಸುವುದು, ಪುಸ್ತಕಗಳನ್ನು ಬರೆಸುವುದು. ಇವು ಪುಣ್ಯಕಾರ್ಯಗಳಲ್ಲವೆಂದಲ್ಲ. ಇವು

ಪ್ರಶಂಸನೀಯವಾದ ಉತ್ತಮ ಕಾರ್ಯಗಳೇ ಹೌದು. ಇಂಥವೆಲ್ಲ ಧರ್ಮಕಾರ್ಯಗಳೇ. ಆದರೆ ಪ್ರತಿಫಲವು ಕಷ್ಟದಲ್ಲಿರುವ ದೀನರಿಗೆ ಮುಟ್ಟುತ್ತದೆಯೆನ್ನಲಾಗದು.

**ಸೂಕ್ಷ್ಮಯೋನೀನಿ ಭೂತಾನಿ ತರ್ಕಗಮ್ಯಾನಿ ಕಾನಿಚಿತ್ ।**
**ಪಕ್ಷ್ಮಣೋಽಪಿ ನಿಪಾತೇನ ಯೇಷಾಂ ಸ್ಯಾತ್ ಸ್ಕಂಧಪರ್ಯಯಃ ॥ ೧೯ ॥**

— *ಮಹಾಭಾರತ, ಶಾಂತಿಪರ್ವ, ೧೫:೨೬*

"ಕಣ್ಣಿಗೆ ಕಾಣಿಸದಿದ್ದರೂ ಊಹೆಯಿಂದ ತಿಳಿಯಬಹುದಾದ ಸೂಕ್ಷ್ಮ ಜಂತುಗಳಿವೆ. ಕಣ್ಣುರೆಪ್ಪೆಯನ್ನು ಬಡಿದರೆ ಸಾಕು, ಆ ಜಂತುಗಳು ಹೆಗಲು ಮುರಿದುಕೊಂಡು ಬೀಳುತ್ತವೆ."

ಮಹಾಭಾರತಯುದ್ಧದಲ್ಲಿ ಜಯವಾದರೂ, ನಡೆದುಹೋದ ಪ್ರಾಣಿಹಿಂಸೆಯಿಂದ ರೋಸಿಹೋದ ಧರ್ಮರಾಜನು ರಾಜ್ಯವನ್ನೊಲ್ಲದೆ ಕಾಡಿಗೆ ಹೋಗುತ್ತೇನೆಂದು ಹೇಳಿದಾಗ ಅರ್ಜುನನು ಹೇಳಿದ ಮಾತಿದು.

ಒಂದು ಬಗೆಯ ಅತಿ ಸೂಕ್ಷ್ಮ ಜೀವಾಣುಗಳಿಂದ ನಾನಾ ರೋಗಗಳು ಬರುತ್ತವೆಯೆಂದು ವೈದ್ಯಶಾಸ್ತ್ರವು ಹೇಳುತ್ತದೆ. ಅದರಿಂದ ಅಂತಹ ಜೀವಾಣುಗಳಿವೆಯೆಂದು ಊಹಿಸಬಹುದು. ಅಷ್ಟು ಸೂಕ್ಷ್ಮ ಜಂತುಗಳು ಲೋಕದಲ್ಲಿರುವಾಗ, ಅವುಗಳಿಗೆ ಹಿಂಸೆಯಾಗದಂತೆ ವರ್ತಿಸಲು ಸಾಧ್ಯವೆ? ನಡೆದರೆ ನುಡಿದರೆ ಈ ಸೂಕ್ಷ್ಮ ಜಂತುಗಳಿಗೆ ಹಿಂಸೆಯಾಗುವುದೆಂದು ಜೈನಸಂನ್ಯಾಸಿಗಳು ನವಿಲುಗರಿಯ ಮಾರ್ಜನಿಯನ್ನಾಡಿಸುತ್ತಾ ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ತಿರುಗಾಡುವುದನ್ನು ನೋಡಬಹುದು. ಕಸ ಹೊಡೆಯುವುದು, ಒಲೆ ಉರಿಸುವುದು, ಕುಟ್ಟುವುದು - ಮುಂತಾದ್ದರಿಂದ ಪ್ರಾಣಿಹಿಂಸೆಯಾಗುವುದೆಂದೂ ಆ ದೋಷದ ನಿವೃತ್ತಿಗಾಗಿ ಗೃಹಸ್ಥನು ಪ್ರತಿದಿನವೂ ವೈಶ್ವದೇವವನ್ನು ಆಚರಿಸಬೇಕೆಂದೂ ಶಾಸ್ತ್ರವಿಧಿ ಇದೆ. ಹೀಗಿರುವಾಗ 'ಅಹಿಂಸಾ ಪರಮೋ ಧರ್ಮಃ' ಎಂಬ ಘೋಷಣೆಗೆ ಗತಿ ಏನು? ಬೌದ್ಧಮತವು ಅಹಿಂಸಾವಾದಿಯೆಂದು ಪ್ರಸಿದ್ಧವಾಗಿದೆ. ಆದರೆ ಬೌದ್ಧರು ಮಾಂಸಾಹಾರಿಗಳಾಗಿದ್ದರು.

ಬುದ್ಧನೇ ಸ್ವತಃ ಮಾಂಸವನ್ನು ತಿನ್ನುತ್ತಿದ್ದನೆಂದು ಇತಿಹಾಸದಲ್ಲಿ ವರ್ಣನೆಯಿದೆ.

ಸೊಳ್ಳೆ-ಜಿರಲೆಗಳನ್ನು ಕೊಲ್ಲುವುದು ಹಿಂಸೆಯಲ್ಲವೆ? ಹುಲಿ ಮೊದಲಾದ ಕ್ರೂರಜಂತುಗಳು ಪ್ರಾಣಿಗಳನ್ನು ಕೊಂದೇ ಬದುಕಬೇಕಾಗಿದೆ. ಪ್ರಾಣ ಹೋಗುವ ಸಮಯ ಬಂದರೂ ಹುಲಿಯು ಹುಲ್ಲನ್ನು ತಿಂದು ಬದುಕಿಕೊಳ್ಳುವುದಿಲ್ಲ. ಅಹಿಂಸೆಯೇ ಪರಮಧರ್ಮವಾದರೆ ಕ್ಷಾತ್ರಧರ್ಮ ಉಳಿಯುವುದು ಹೇಗೆ?

ಆದ್ದರಿಂದ ಸಾಮಾನ್ಯನೀತಿಯಾಗಲಿ ಧರ್ಮವಾಗಲಿ ಕಾನೂನಾಗಲಿ ಎಂದೂ ಸ್ವತಃಪೂರ್ಣವಲ್ಲ. ಅದಕ್ಕೆ ಅನೇಕ ಅಪವಾದಗಳೂ ತಿದ್ದುಪಡಿಗಳೂ ಇದ್ದೇ ಇರುತ್ತವೆ. ಧರ್ಮದ ವಿಷಯವಾಗಿ ಮಾತಾಡತಕ್ಕವರು ತಮ್ಮ ಮಿತಿಯನ್ನರಿತಿರಬೇಕು. ಆದ್ದರಿಂದಲೇ ಶ್ರೀರಾಮನು ತನ್ನನ್ನು ಮರೆಯಲ್ಲಿ ನಿಂತು ಬಾಣಪ್ರಯೋಗ ಮಾಡಿದ್ದಕ್ಕಾಗಿ ನಿಂದಿಸುತ್ತಿದ್ದ ವಾಲಿಯನ್ನು ಕುರಿತು -

**''ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ ಪ್ಲವಂಗಮ''**

- ಎಂದು ಹೇಳಿದ್ದಾನೆ. ''ವಾನರ, ಸಜ್ಜನರು ಪಾಲಿಸುವ ಧರ್ಮವು ಅತಿ ಸೂಕ್ಷ್ಮವಾದದ್ದು, ತಿಳಿಯಲು ತುಂಬ ಕಠಿಣವಾದದ್ದು.'' ಆಗ ವಾಲಿಯು ತನ್ನ ತಪ್ಪನ್ನು ಒಪ್ಪಿಕೊಂಡು ಶ್ರೀರಾಮನ ಕ್ಷಮೆಯನ್ನು ಯಾಚಿಸಿದ್ದಾನೆ.

ಕಾಲುತುಳಿತದಿಂದ ಇರುವೆ ಸತ್ತರೆ, ಔಷಧದಿಂದ ಜಿರಲೆ ಸತ್ತರೆ ಹಿಂಸೆ ಯಾಯಿತೆಂದು ಯಾರೂ ಬೊಬ್ಬೆ ಎಬ್ಬಿಸುವುದಿಲ್ಲ. ಜಿಂಕೆ, ನವಿಲು, ಹಂದಿಗಳ ಬೇಟೆಯಾಡಿದರೆ ಸ್ವಲ್ಪ ಕೂಗಾಟ ಇರುತ್ತದೆ. ಎತ್ತು, ಕುದುರೆ, ಆನೆಗಳನ್ನು ಗುಂಡಿನಿಂದ ಸಾಯಿಸಿದರೆ ಇನ್ನೂ ಹೆಚ್ಚಿನ ಅಬ್ಬರ. ಮನುಷ್ಯನನ್ನು ಕೊಂದರೆ ಗಲ್ಲಿನ ಶಿಕ್ಷೆಯನ್ನು ಸರ್ಕಾರವೇ ವಿಧಿಸುತ್ತದೆ. ಎಲ್ಲವೂ ಪ್ರಾಣಿಗಳೇ ಆದಾಗ ಈ ತಾರತಮ್ಯಕ್ಕೆ ನಿಮಿತ್ತವೇನೆಂದು ಚಿಂತಿಸಬಾರದೆ? ಪಂಡಿತ್ ನೆಹರು ಅವರು ಒಮ್ಮೆ ''ನನ್ನ ದೃಷ್ಟಿಯಲ್ಲಿ ಗೋಹತ್ಯೆಯೂ ಕುದುರೆಯ ಹತ್ಯೆಯೂ ಒಂದೇ'' ಎಂದು ಹೇಳಿದ್ದರು. ಗೋಹತ್ಯೆಯೂ ನರಹತ್ಯೆಯೂ ಒಂದೇ ಎಂದೇಕೆ ಆಗಬಾರದು?

**ಅಭಾವಾವಧಯೋ ಭಾವಾ ನಿಧನಾವಧಿ ಜೀವಿತಂ ।**
**ಅವಿವೇಕಸ್ತ್ವನವಧಿ-ರ್ಯೇನಾಯಂ ಜಾಯತೇ ಭ್ರಮಃ ॥ ೨೦ ॥**

— ರಾಮಾಯಣಮಂಜರೀ, ಅರಣ್ಯ - ೨೪೨

''ಸಕಲ ಭಾವಪದಾರ್ಥಗಳಿಗೂ ಅಭಾವವು (ವಿನಾಶವು) ಕಡೆಯ ಅವಧಿಯಾಗಿರುತ್ತದೆ. ಜೀವಿತಕ್ಕೆ ಮರಣವೇ ಅವಧಿ. ಆದರೆ ಅವಿವೇಕಕ್ಕೆ ಅವಧಿಯೇ ಇಲ್ಲ! ಅವಿವೇಕದಿಂದ ಈ ಭ್ರಮೆ ಹುಟ್ಟುತ್ತದೆ.''

ಜಗತ್ತಿನಲ್ಲಿರುವ ಮರ, ಮಣ್ಣು, ಮನುಷ್ಯ, ಮೃಗ, ಗ್ರಹ-ನಕ್ಷತ್ರಗಳೆಲ್ಲವೂ ಪ್ರತಿ ಕ್ಷಣದಲ್ಲಿಯೂ ತಮ್ಮ ಸ್ವರೂಪವನ್ನು ಬದಲಿಸುತ್ತಲೇ ಇರುತ್ತವೆ. ಒಂದು ಕ್ಷಣವೂ ಏಕರೂಪದಲ್ಲಿರುವುದಿಲ್ಲ; ಬೆಳೆಯುತ್ತವೆ ಅಥವಾ ಕ್ಷೀಣಿಸುತ್ತವೆ. ಹೀಗಾಗುವ ಬದಲಾವಣೆಗಳು ಆರು ಎಂದು ನಮ್ಮ ದಾರ್ಶನಿಕರು ಗೊತ್ತುಪಡಿಸಿದ್ದಾರೆ: ಜಾಯತೇ, ಅಸ್ತಿ, ವರ್ಧತೇ, ವಿಪರಿಣಮತೇ, ಕ್ಷೀಯತೇ, ನಶ್ಯತಿ - ಇವೇ ಬದಲಾವಣೆಗಳೆಂಬ ಆರು ವಿಕಾರಗಳು. ಉತ್ಪತ್ತಿ, ಅಸ್ತಿತ್ವ, ವೃದ್ಧಿ, ವಿಪರಿಣಾಮ, ಕ್ಷಯ, ವಿನಾಶ - ಎಂಬ ಷಡ್ವಿಕಾರಗಳಿವು. ಕಡೆಯದು ವಿನಾಶ. ಜೀವಿತವೆಂಬ ಕ್ರಿಯೆಯು ಮರಣದಲ್ಲಿ ಕೊನೆಗೊಳ್ಳುತ್ತದೆ.

ಬುದ್ಧಿಗೆ ಅವಿವೇಕವೆಂಬ ಒಂದು ಗುಣ ಇದೆ. ಅದಕ್ಕೆ ಮಾತ್ರ ಅವಧಿ ಇಲ್ಲ; ಅದು ನಿರವಧಿ! ಸತ್ಯ-ಅಸತ್ಯ, ನ್ಯಾಯ-ಅನ್ಯಾಯ, ಧರ್ಮ-ಅಧರ್ಮಗಳ ವಿವೇಚನೆ ಇಲ್ಲದಿರುವುದು ಅವಿವೇಕ. ಅದು ಒಂದಾದ ಮೇಲೊಂದರಂತೆ ಭ್ರಮೆಯ ಸರಪಳಿಯನ್ನು ನೇಯುತ್ತಲೇ ಹೋಗುತ್ತದೆ. ಆದಕ್ಕೆ ನಿಲುಗಡೆಯೇ ಇಲ್ಲ.

ಭರತನು ಶ್ರೀರಾಮನನ್ನು ಅಯೋಧ್ಯೆಗೆ ಕರೆದೊಯ್ಯುವುದಕ್ಕಾಗಿ ಚಿತ್ರಕೂಟಕ್ಕೆ ಬಂದು ಬೇಡಿಕೊಂಡಾಗ ಶ್ರೀರಾಮನು ಹೇಳುವ ಮಾತು ಇದು. ತಾನು ವನವಾಸವನ್ನು ಮುಗಿಸದೆ ಹಿಂದಿರುಗುವುದಿಲ್ಲವೆಂದು ಹೇಳುವಾಗ ಬಂದ ನುಡಿ ಇದು. ಶ್ಲೋಕದಲ್ಲಿ 'ಈ ಭ್ರಮೆ' ಎಂದರೆ ಯಾರ ಭ್ರಮೆ? ಕೈಕೇಯಿಯದೋ? ದಶರಥನದೋ? ಭರತನದೋ? ಅಥವಾ ತನ್ನದೋ? ನಮಗೆ ತೋರಿದಂತೆ ವ್ಯಾಖ್ಯಾನ ಮಾಡಬಹುದು.

ಅಂತೂ ಅವಿವೇಕವು ನಿರವಧಿಯಾಗಿದ್ದು ಭ್ರಮೆಯ ಮೇಲೆ ಭ್ರಮೆಯನ್ನು ಹುಟ್ಟಿಸುತ್ತಲೇ ಹೋಗುತ್ತದೆ. ಅದರಲ್ಲಿರುವ Energy - ಜನನಶಕ್ತಿ ಶಾಶ್ವತ. ಜಗತ್ತಿನ ಇತಿಹಾಸವೇ ಇದಕ್ಕೆ ಉದಾಹರಣೆ. ನಮ್ಮ ಭಾರತದೇಶದ ಚರಿತ್ರೆಯನ್ನೆ ತೆಗೆದುಕೊಳ್ಳಬಹುದು. ಪರಕೀಯ ರಾಜ್ಯಭಾರ ನಮ್ಮ ಅವಿವೇಕದಿಂದ ಬಂದದ್ದು. ಇಂಗ್ಲಿಷ್ ರಾಜ್ಯಭಾರ ಹೋದರೆ ನಮಗೆ ಸೌಖ್ಯ ಎಂಬುದೊಂದು ಭ್ರಮೆ. ಪಾಕಿಸ್ತಾನದ ನಿರ್ಮಾಣವಾದರೆ ಒಂದು ಪೀಡೆ ತಪ್ಪುತ್ತದೆಂಬುದಿನ್ನೊಂದು ಭ್ರಮೆ. ಆಳುವ ಪಕ್ಷದ ಬದಲಾವಣೆಯಾಗಬೇಕು, ಈ ವ್ಯಕ್ತಿಯ ಬದಲಾವಣೆಯಾಗಬೇಕು - ಹೀಗೆ ಪುಂಖಾನುಪುಂಖವಾಗಿ ಭ್ರಮೆಗಳು ಹುಟ್ಟುತ್ತಲೇ ಇವೆ. ವಾಸ್ತವವಾಗಿ ಜಗತ್ತಿನ ಇತಿಹಾಸವೆಂದರೆ ಅವಿವೇಕದಿಂದ ಹುಟ್ಟುವ ತುದಿಯಿಲ್ಲದ ಭ್ರಮೆಗಳ ಚರಿತ್ರೆ.

**ಆತ್ಮಾನಮನಭಿಜ್ಞಾಯ ವಿವೇಕಂ ಯೋಽನ್ಯದಿಚ್ಛತಿ।**
**ತೇನ ಭೌತೇನ ಕಿಂ ವಾಚ್ಯಂ ಪ್ರಶ್ನೇಽಸ್ಮಿನ್ ಕೋ ಭವಾನಿತಿ ॥ ೨೧ ॥**

— *ಅಭಿನವಗುಪ್ತ (ಪ್ರತ್ಯಭಿಜ್ಞಾವಿವೃತಿ-ವಿಮರ್ಶಿನೀ)*

''ತಾನು ಯಾರೆಂಬುದನ್ನೇ ತಿಳಿಯದೆ ಮನುಷ್ಯನು ಇನ್ನೊಂದು ಬಾಹ್ಯವಸ್ತುವನ್ನು ತಿಳಿಯಲಿಚ್ಛಿಸುತ್ತಾನೆ. ಆ ಭೌತ ಪ್ರಾಣಿಯನ್ನು ಕುರಿತು 'ಅಯ್ಯಾ, ನೀನು ಯಾರೆಂಬುದನ್ನು ತಿಳಿದಿದ್ದೀಯಾ?' ಎಂದು ಕೇಳಿದರೆ ಅವನು ಯಾವ ಉತ್ತರವನ್ನು ಹೇಳಿಯಾನು!''

ಹೀಗೆ ಸವಾಲನ್ನು ಹಾಕಿದ ಅಭಿನವಗುಪ್ತನು ಕಾಶ್ಮೀರದೇಶದಲ್ಲಿ ಆಗಿಹೋದ ಮಹಾ ವಿದ್ವಾಂಸ. ದೊಡ್ಡ ದಾರ್ಶನಿಕ, ಯೋಗಿ, ಸಿದ್ಧಪುರುಷ.

ಮನುಷ್ಯನು ಹೊರಗೆ ಕಾಣುವ ಮಣ್ಣು, ಮರ, ಹಕ್ಕಿ, ಹಾವು ಮೊದಲಾದ್ದನ್ನು ಕುರಿತು ಚಿಂತನೆ ನಡೆಸುತ್ತಾನೆ. ಸಂಶೋಧನಾಲಯದಲ್ಲಿ ಕಪ್ಪೆ ಮೊದಲಾದ್ದನ್ನು ಕತ್ತರಿಸಿ ವಿಶ್ಲೇಷಿಸಿ ದೊಡ್ಡ ದೊಡ್ಡ ಗ್ರಂಥಗಳನ್ನೇ ಬರೆದಿಡುತ್ತಾನೆ. ಸಮುದ್ರದಲ್ಲಿರುವ ಜಲಚರಗಳ ಜೀವನವಿಧಾನವನ್ನು ಕಂಡುಹಿಡಿಯುತ್ತಾನೆ. ಆಕಾಶದಲ್ಲಿರುವ ಗ್ರಹ

ನಕ್ಷತ್ರಗಳ ಗತಿ, ದೂರ, ತೂಕ, ಮೇಲ್ಮೈ ಲಕ್ಷಣಗಳನ್ನು ಕಂಡುಹಿಡಿಯುತ್ತಾನೆ. ಆದರೆ ಇಷ್ಟೆಲ್ಲ ಮಾಡತಕ್ಕ 'ನಾನು' ಯಾರು? ನಾನು, ನಾನು - ಎಂದುಕೊಳ್ಳತಕ್ಕ ಈ 'ನಾನು'ವಿನ ಸ್ವರೂಪವೇನೆಂಬುದನ್ನೇ ತಿಳಿದುಕೊಂಡಿಲ್ಲ! ತನ್ನ ಆತ್ಮಸ್ವರೂಪವನ್ನು ವಿಚಾರ ಮಾಡದೆ ಇತರ ಭೂತಗಳನ್ನು ವಿಮರ್ಶಿಸುವುದಕ್ಕೆ ತೊಡಗಿದ್ದಾನೆ ಈ ಭೌತ - ಎಂದು ಆಶಯ. ಇದು ಅಧ್ಯಾತ್ಮವಿಚಾರವಾಯಿತು; ಇರಲಿ.

ಲೋಕದಲ್ಲಿ ವ್ಯವಹಾರದ ಪರಿಸ್ಥಿತಿಯೂ ಹೀಗೆಯೇ ಆಗಿದೆ. ನಾವು ಇತರರ ಗುಣದೋಷಗಳ ವಿಮರ್ಶೆಗೆ ಹೊರಡುತ್ತೇವೆ. ನಮ್ಮ ಲೋಪದೋಷಗಳೇನೆಂಬುದನ್ನು ಒಂದು ಕ್ಷಣವೂ ವಿಚಾರಿಸುವುದಿಲ್ಲ. 'ಸರ್ವಃ ಕಾಂತಮಾತ್ಮೀಯಂ ಪಶ್ಯತಿ' ಎಂಬಂತೆ ತನ್ನದೆಲ್ಲವೂ ಶ್ರೇಷ್ಠವಾದದ್ದೆಂದು ಮನುಷ್ಯನು ಭಾವಿಸಿದ್ದಾನೆ. ಅನ್ಯರ ದೂಷಣೆ ವ್ಯಾಪಕವಾಗಿರುತ್ತದೆ. ರಾಜಕೀಯದಲ್ಲಂತೂ ಪರಪಕ್ಷದೂಷಣೆಯೇ ಧ್ವಜಪಟ. ಲಂಚ, ಪಕ್ಷಪಾತ, ದುಂದುವೆಚ್ಚ, ಸ್ವಾರ್ಥ, ವಂಚನೆ, ಜಾತಿದ್ವೇಷ- ಇತ್ಯಾದಿಗಳನ್ನು ಅನ್ಯರಲ್ಲಿ ಆರೋಪಿಸುವುದೇ ತಮ್ಮ ಕರ್ತವ್ಯವೆಂದು ಈ ಜನರು ಭಾವಿಸಿಕೊಂಡಿದ್ದಾರೆ. ನಾವು ಹೇಗೆ ನಡೆದುಕೊಂಡಿದ್ದೇವೆ, ಪ್ರಲೋಭನೆಗಳು ಒದಗಿದಾಗ ನಮ್ಮ ವ್ಯವಹಾರ ಹೇಗಿರುತ್ತದೆ - ಎಂದು ಯಾರೂ ವಿಚಾರ ಮಾಡುವುದಿಲ್ಲ. ಇನ್ನೊಬ್ಬನು ಮುಖಕ್ಕೆ ಕನ್ನಡಿ ಹಿಡಿದು ತೋರಿಸಿದರೂ ಅಲ್ಲಿರುವ ಕಳಂಕವು ತನ್ನ ಹಣೆಗೆ ಅಲಂಕಾರವಾದ ತಿಲಕವೆಂದೇ ಮನುಷ್ಯನು ಹೇಳುತ್ತಾನೆ.

ಒಂದು ಸುಭಾಷಿತ ಹೀಗಿದೆ :

**ಖಲಃ ಸರ್ಷಪಮಾತ್ರಾಣಿ ಪರಚ್ಛಿದ್ರಾಣಿ ಪಶ್ಯತಿ ।**
**ಆತ್ಮನೋ ಬಿಲ್ವಮಾತ್ರಾಣಿ ಪಶ್ಯನ್ನಪಿ ನ ಪಶ್ಯತಿ ॥**

ಅನ್ಯರಲ್ಲಿರುವ ಸಾಸಿವೆಕಾಳಿನ ಗಾತ್ರದ ದೋಷವೂ ದುರ್ಜನನಿಗೆ ಕಾಣಿಸುತ್ತದೆ. ಬಿಲ್ವಪತ್ರೆ ಕಾಯಿಯಷ್ಟಿರುವ ತನ್ನ ತಪ್ಪು ಆತನಿಗೆ ಕಂಡರೂ ಕಾಣಿಸುವುದೇ ಇಲ್ಲ!

ಯಃ ಪಠತಿ ಲಿಖತಿ ಪಶ್ಯತಿ ಪರಿಪೃಚ್ಛತಿ ಪಂಡಿತಾನುಪಾಶ್ರಯತಿ।
ತಸ್ಯ ದಿವಾಕರಕಿರಣೈರ್ನಲಿನೀದಲಮಿವ ವಿಕಾಸ್ಯತೇ ಬುದ್ಧಿಃ ॥ ೨೨ ॥

— ಸುಭಾಷಿತರತ್ನ-ಭಾಂಡಾಗಾರ

''ಯಾವಾತನು ಓದುವನೋ, ಬರೆಯುವನೋ, ಸುತ್ತಲಿರುವ ಲೋಕವನ್ನು ನೋಡುವನೋ, ಇದು ಹೇಗೆಂದು ಪ್ರಶ್ನೆ ಮಾಡುವನೋ, ಪಂಡಿತರನ್ನು ಆಶ್ರಯಿಸುವನೋ ಆತನ ಬುದ್ಧಿಯು ವಿಕಾಸಗೊಳ್ಳುತ್ತದೆ, ಸೂರ್ಯಕಿರಣಗಳಿಂದ ತಾವರೆಯ ದಳವು ಅರಳುವಂತೆ ಅರಳುತ್ತದೆ.''

ವಿದ್ಯಾವಂತನೆಂದರೆ ಯಾರು? ಓದಲು ಬರೆಯಲು ಬಂದವನನ್ನು ವಿದ್ಯಾವಂತನೆನ್ನಬಹುದೊ? ದೇಶದಲ್ಲಿ ಎಷ್ಟು ಜನ ಅಕ್ಷರಸ್ಥರಾಗಿದ್ದಾರೆ ಎಂಬುದನ್ನೆಣಿಸಿ ನಮ್ಮ ದೇಶದಲ್ಲಿ ಎಷ್ಟು ಜನ ವಿದ್ಯಾವಂತರಾಗಿದ್ದಾರೆ, ವಿದ್ಯೆ ಎಷ್ಟು ಹರಡಿದೆ ಎಂಬುದನ್ನು ಸರ್ಕಾರವು ಹೇಳಿಕೊಳ್ಳುತ್ತದೆ. ಅಕ್ಷರಜ್ಞಾನವನ್ನೇ ವಿದ್ಯೆ ಎನ್ನಬಹುದೊ? ಬೆಕ್ಕಿನ ಚಿತ್ರವನ್ನು ಬರೆದು 'ಇದು ಬೆಕ್ಕು', ಎತ್ತಿನ ಚಿತ್ರವನ್ನು ಬರೆದು 'ಇದು ಎತ್ತು' ಎಂದು ಹೇಳಬಲ್ಲ ಅರ್ಹತೆ ಇದು. ಅಕಾರವನ್ನು ಬರೆದು ಇದು 'ಅ', ಕಕಾರವನ್ನು ಬರೆದು ಇದು 'ಕ' ಎಂದು ಹೇಳಬಲ್ಲವನು ಈತ. ಅಕ್ಷರಜ್ಞಾನವು ವಿದ್ಯಾರ್ಜನೆಗೆ ಸಹಕಾರಿ - ಬಡಗಿಯ ಕೆಲಸಕ್ಕೆ ಉಳಿ, ಕೊಡತಿ ಇದ್ದಂತೆ. ಆದರೆ ಉಳಿ,. ಕೊಡತಿಗಳನ್ನು ಹಿಡಿದುಕೊಂಡವನೇ ಬಡಗಿಯಲ್ಲ.

ವಿದ್ವಾಂಸನನ್ನು ''ಪದವಾಕ್ಯಪ್ರಮಾಣ-ಪಾರಾವಾರೀಣ'' ಎಂದು ಹಿಂದೆ ಹೊಗಳುತ್ತಿದ್ದರು. ವ್ಯಾಕರಣ, ಮೀಮಾಂಸೆ, ತರ್ಕ - ಈ ಮೂರು ಶಾಸ್ತ್ರಗಳಲ್ಲಿ ಪಂಡಿತನೆಂದು ಅದರ ಅರ್ಥ. ಈ ಶಾಸ್ತ್ರಗಳು ಕಠಿಣವಾದವು. ಇವುಗಳಲ್ಲಿ ಬುದ್ಧಿಯ ಕಸರತ್ತು ಅಧಿಕ. ಇಂತಹ ಬರಿಯ ಶಾಸ್ತ್ರಾಭ್ಯಾಸದಿಂದ ವ್ಯವಹಾರವು ನಡೆಯದು. ವ್ಯವಹಾರಜ್ಞಾನವಿಲ್ಲದವರನ್ನು ವಿದ್ಯಾವಂತರೆನ್ನಲಾಗದು.

ಒಬ್ಬ ತರ್ಕ ಪಂಡಿತನು ಎಣ್ಣೆಯನ್ನು ತರಲು ಗಾಣಿಗನಿದ್ದಲ್ಲಿಗೆ ಹೋದನಂತೆ.

ಗಾಣಿಗನು ಎತ್ತನ್ನು ಹೂಡಿ ಗಾಣವನ್ನಾಡಿಸುತ್ತಿದ್ದ. ಎತ್ತಿನ ಕೊರಳಿಗೆ ಒಂದು ಗಂಟೆಯನ್ನು ಕಟ್ಟಿದ್ದ. ಗಂಟೆಯು ಗಣಗಣ ಎಂದು ಶಬ್ದ ಮಾಡುತ್ತಿತ್ತು. ''ಎತ್ತಿನ ಕೊರಳಿಗೆ ಗಂಟೆಯನ್ನೇಕೆ ಕಟ್ಟಿದ್ದೀಯೆ?'' - ಎಂದು ಈ ತಾರ್ಕಿಕನು ವಿಚಾರಿಸಿದ. ಗಾಣಿಗನು ಹೇಳಿದ: ''ಸ್ವಾಮಿ, ನಾನು ಆಗಾಗ ಮನೆಯೊಳಗೆ ಹೋಗಬೇಕಾಗುತ್ತದೆ. ಗಂಟೆಯ ಶಬ್ದವಾಗುತ್ತಿದ್ದರೆ ಎತ್ತು ಗಾಣವನ್ನಾಡಿಸುತ್ತಿದೆ - ಎಂದು ತಿಳಿದುಕೊಳ್ಳುತ್ತೇನೆ.'' ಈ ಪಂಡಿತನು ''ಎತ್ತು ಸುಮ್ಮನೆ ನಿಂತುಕೊಂಡು ಕೊರಳನ್ನು ಅಲ್ಲಾಡಿಸುತ್ತಿದ್ದರೆ ಹೇಗೆ ಗೊತ್ತಾಗುತ್ತದೆ?'' ಎಂದು ಕೇಳಿದ. ಗಾಣಿಗನು ''ಸ್ವಾಮಿ, ಈ ಎತ್ತು ನಿಮ್ಮ ಹಾಗೆ ತರ್ಕವನ್ನೋದಿಲ್ಲ!'' ಎಂದನಂತೆ.

''ನಿಪುಣತಾ-ಲೋಕಶಾಸ್ತ್ರ-ಕಾವ್ಯಾದ್ಯವೇಕ್ಷಣಾತ್'' ಎಂದು ಮಮ್ಮಟನು ಕಾವ್ಯಪ್ರಕಾಶದಲ್ಲಿ ಹೇಳಿದ್ದಾನೆ. ಲೋಕವ್ಯವಹಾರದ ತಿಳಿವಳಿಕೆ, ಶಾಸ್ತ್ರಾಧ್ಯಯನ, ಕಾವ್ಯ-ಇತಿಹಾಸಾದಿ ಗ್ರಂಥಗಳ ಅವಲೋಕನ - ಇವುಗಳಿಂದ ಬುದ್ಧಿಗೆ ಒಂದು ನೈಪುಣ್ಯ ಉಂಟಾಗುತ್ತದೆ. ಈ ನೈಪುಣ್ಯವಿರತಕ್ಕವನು ವಿದ್ಯಾವಂತ. ವಿದ್ಯಾವಂತನಾಗಲು ಬರಿಯ 'ಪಠತಿ ಲಿಖತಿ'ಗಳು ಸಾಲವು. ''ಪಶ್ಯತಿ, ಪರಿಪೃಚ್ಛತಿ, ಪಂಡಿತಾನುಪಾಶ್ರಯತಿ'' - ಇವುಗಳೂ ಬೇಕು.

ಕನ್ನಡದ ಸರ್ವಜ್ಞಕವಿ ಹೇಳುತ್ತಾನೆ:

**ಸರ್ವಜ್ಞನೆಂಬವನು ಗರ್ವದಿಂದಾದವನೆ**
**ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯಾ**
**ಪರ್ವತವೆ ಆದ ಸರ್ವಜ್ಞ ॥**

**ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕಃ ।**
**ಗಂಗಾಸೈಕತಲಿಂಗೇನ ನಷ್ಟಂ ಮೇ ತಾಮ್ರಭಾಜನಮ್ ॥ ೨೩॥**

— *ಸಮಯೋಚಿತಪದ್ಯಮಾಲಿಕಾ*

''ಲೋಕದಲ್ಲಿ ಜನರು ಇನ್ನೊಬ್ಬರನ್ನು ಅನುಕರಿಸಿ ನಡೆಯತಕ್ಕವರೇ ಆಗಿದ್ದಾರೆ. ಪರಮಾರ್ಥವೇನೆಂದು ಯಾರೂ ಚಿಂತಿಸುವುದಿಲ್ಲ. ಗಂಗಾತೀರದಲ್ಲಿ ಮರಳುಲಿಂಗ ನಿರ್ಮಾಣದಿಂದ ನನ್ನ ತಾಮ್ರದ ತಂಬಿಗೆ ಕಳೆದುಹೋಯಿತು!''

ಒಬ್ಬನು ಕಾಶೀಯಾತ್ರೆಗೆ ಹೋಗಿದ್ದನು. ಗಂಗಾಸ್ನಾನಕ್ಕಾಗಿ ಒಂದು ತಾಮ್ರದ ತಂಬಿಗೆಯನ್ನು ಹಿಡಿದುಕೊಂಡು ಹೋದ. ಸ್ನಾನಾದಿಗಳನ್ನು ಮುಗಿಸಿ ಅಲ್ಲಿಂದ ಹೊರಡುವಾಗ ಒಂದು ಆಲೋಚನೆ ಬಂದಿತು: ''ನಾನು ಕಾಶಿಯಲ್ಲಿ ನಾಲ್ಕಾರು ದಿನಗಳವರೆಗೆ ಇರತಕ್ಕವನು. ಪ್ರತಿದಿನ ಸ್ನಾನಕ್ಕಾಗಿ ಇಲ್ಲಿಗೆ ಬರುತ್ತೇನೆ. ಈ ತಂಬಿಗೆಯನ್ನು ಹಿಡಿದುಕೊಂಡು ಅಲೆದಾಡುವುದೇಕೆ? ಇದು ಇಲ್ಲಿಯೇ ಇರಲಿ'' ಎಂದು. ಅವನು ಆ ತಂಬಿಗೆಯನ್ನು ಮರಳಿನಲ್ಲಿ ಹೂತು, ಅದು ಇರುವ ಗುರುತಿಗಾಗಿ ಮೇಲ್ಗಡೆ ಒಂದು ಮರಳುಗುಪ್ಪೆಯನ್ನು ಮಾಡಿ ಹೊರಟುಹೋದನು.

ಆಮೇಲೆ ಬಂದ ಇನ್ನೊಬ್ಬನು ಆ ಮರಳುಗುಪ್ಪೆಯನ್ನು ನೋಡಿ ''ಇದು ಮರಳಿಂದ ಮಾಡಿ ಪೂಜಿಸಿದ ಸೈಕತಲಿಂಗ; ಯಾತ್ರಾರ್ಥಿಯು ಇಲ್ಲಿ ಹೀಗೆ ಮಾಡುವ ಪದ್ಧತಿ ಇರಬೇಕು'' - ಎಂದು ಭಾವಿಸಿ ಸ್ನಾನಮಾಡಿ ಇನ್ನೊಂದು ಸೈಕತಲಿಂಗವನ್ನು ಮಾಡಿ ಕೈ ಮುಗಿದು ಹೊರಟುಹೋದ. ಆಮೇಲೆ ಯಾತ್ರಿಕರ ತಂಡವೇ ಬರತೊಡಗಿತು. ಎಲ್ಲರೂ ಮರಳುಗುಪ್ಪೆಯನ್ನು ಮಾಡುತ್ತ ಹೋದರು. ಗಂಗಾತೀರವು ಹೀಗೆ ಸೈಕತಲಿಂಗಗಳಿಂದ ತುಂಬಿಹೋಯಿತು.

ಮಾರನೆಯ ದಿನ ಮೊದಲನೆಯ ಯಾತ್ರಿಕನು ಸ್ನಾನಕ್ಕಾಗಿ ಬಂದನು. ಎಲ್ಲೆಲ್ಲಿಯೂ ಮರಳುಗುಪ್ಪೆಗಳ ರಾಶಿ! ತಾನು ಮಾಡಿದ್ದ ಗುಪ್ಪೆ ಯಾವುದೆಂಬುದನ್ನು ಅವನು ಗುರುತಿಸಲಾಗಲಿಲ್ಲ. ಹತ್ತಿಪ್ಪತ್ತು ಗುಪ್ಪೆಗಳನ್ನು ಬಗೆದು ನೋಡಿದ. ತಂಬಿಗೆ ಸಿಗಲಿಲ್ಲ. ಆಗ ನಿರಾಶನಾಗಿ ''ಗತಾನುಗತಿಕೋ ಲೋಕಃ'' ಎಂದು ಉದ್ಗರಿಸಿದನಂತೆ.

ನಮಗೆ ರಾಜಕೀಯ ಸ್ವಾತಂತ್ರ್ಯವು ಬಂದಮೇಲೆ ಈ ಗತಾನುಗತಿಕತೆ ಅಧಿಕವಾಗಿ

ಕಂಡುಬರುತ್ತಿದೆ. ನಾವು ಸ್ವಾತಂತ್ರ್ಯವನ್ನು ಬಯಸಿದ್ದು ನಮ್ಮ ಸ್ವಕೀಯತೆಯನ್ನು ಉಳಿಸಿ ಬೆಳೆಸುವುದಕ್ಕಾಗಿ. ಆದರೆ ಈಗ ಪರಕೀಯತೆಯೇ ಬೆಳೆಯುತ್ತಿದೆ. ವಿದ್ಯಾವಂತರೆನಿಸಿಕೊಂಡವರು ಸಹ ಗತಾನುಗತಿಕರಾಗಿ ಪರಾನುಕರಣೆಯಲ್ಲಿ ತೊಡಗಿ ಸ್ವತಂತ್ರವಿಚಾರವನ್ನು ಕೈಬಿಟ್ಟಿದ್ದಾರೆ. ಬಾಹ್ಯವಾದ ವೇಷಭೂಷಾದಿಗಳ ಅನುಕರಣೆ ಉಪೇಕ್ಷಣೀಯವೆನ್ನಬಹುದು. ಆದರೆ ಈ ಬುದ್ಧಿಯ ದಾಸ್ಯ, ವಿಚಾರಶೂನ್ಯವಾದ ಅಂತಃಕರಣಪ್ರವೃತ್ತಿ - ಇದು ಅನರ್ಥಕಾರಿ, ವಿಪತ್ಕಾರಿ. ''ಆರ್ಯರೆಂಬ ಜನಾಂಗದವರು ಹೊರಗಿನಿಂದ ಈ ರಾಷ್ಟ್ರಕ್ಕೆ ಬಂದು ದ್ರಾವಿಡರನ್ನು ಮೂಲೆಗೊತ್ತಿದರು'' ಎಂದು ಭಜನೆ ಮಾಡುವುದು ಸತತವಾಗಿ ನಡೆಯುತ್ತಲೇ ಇದೆ. ಅಯೋಧ್ಯಾ, ಮಥುರಾ, ಕಾಶೀ ಎಂಬ ಪುಣ್ಯಕ್ಷೇತ್ರಗಳ ಹೆಸರು ಕೇಳಿದೊಡನೆ ಮೈ ಪರಚಿಕೊಂಡು ಹಾರಾಡುವವರ ಸಂಖ್ಯೆ ಕಡಮೆಯಾಗುವ ಸೂಚನೆಯಿಲ್ಲ. ಹಿಂದುತ್ವ ಎಂಬ ಶಬ್ದವು ಕಿವಿಗೆ ಬಿದ್ದೊಡನೆ ದೊಡ್ಡ ದೊಡ್ಡ ಪತ್ರಿಕೆಗಳು ಸಹ 'ಅಲರ್ಜಿ'ಯಿಂದ ನೆಗಡಿಯಾಗಿ ಶೀನಲು ಪ್ರಾರಂಭಿಸುತ್ತವೆ. ''ವೈದಿಕ ಸಂಸ್ಕೃತಿಯು, ಥೂ, ಡಸ್ಟ್‌ಬಿನ್ನಿಗೆ ಎಸೆಯಬೇಕಾದದ್ದು'' ಎಂದು ಒಬ್ಬ ಸಾಹಿತಿಯೆಂದುಕೊಳ್ಳತಕ್ಕ ಮಾನವಪ್ರಾಣಿಯೂ ಬರೆದದ್ದುಂಟು. ಸುತ್ತಿಸುತ್ತಿ ಹೇಳುವುದಕ್ಕಿಂತ ಒಂದು ಮಾತನ್ನು ಒತ್ತಿಹೇಳಿಬಿಡುವುದು ಉತ್ತಮ: ಇದೆಲ್ಲವೂ ಜಾತಿದ್ವೇಷದ ವಿಷಫಲ.

**ತೇನಾಧೀತಂ ಶ್ರುತಂ ತೇನ ತೇನ ಸರ್ವಮನುಷ್ಠಿತಮ್ ।**
**ಯೇನಾಶಾಃ ಪೃಷ್ಠತಃ ಕೃತ್ವಾ ನೈರಾಶ್ಯಮವಲಂಬಿತಮ್ ॥ ೨೪॥**

*— ಹಿತೋಪದೇಶ, ಮಿತ್ರಲಾಭ, ೧೧೧*

''ಯಾವಾತನು ಆಸೆಗಳನ್ನು ಹಿಂದಕ್ಕೆ ತಳ್ಳಿ ಆಶಾರಹಿತನಾಗಿ ಕೆಲಸ ಮಾಡುವನೋ ಅವನು ಎಲ್ಲವನ್ನೂ ಕಲಿತ ವಿದ್ವಾಂಸನೇ ಸರಿ. ಅವನು ಸಮಸ್ತವನ್ನು ಸಾಧಿಸಿದ ಕೃತಕೃತ್ಯನೇ ಹೌದು.''

ಮನುಷ್ಯನು ಉತ್ಸಾಹಶೀಲನಾಗಿರಬೇಕೆಂದೂ ಸೋಮಾರಿತನವು ಸಲ್ಲದೆಂದೂ

ಎಲ್ಲರೂ ಹೇಳುತ್ತಾರೆ. ಯಾವ ಗ್ರಂಥವೂ ಸೋಮಾರಿತನವನ್ನು ಹೊಗಳುವುದಿಲ್ಲ. ನಿರಾಶನಾದವನು ಆಲಸನಾಗುವುದು ಸಹಜ. ಇಲ್ಲಿ ನೈರಾಶ್ಯವನ್ನು ಹೊಗಳುವುದೆಂದರೆ ಆಲಸ್ಯವನ್ನೇ ಉತ್ತಮಗುಣವೆಂದು ಹೊಗಳಿದಂತಾಗುತ್ತದೆಯಲ್ಲವೆ?

ಹಾಗಲ್ಲ; ನಿರಾಸೆಯೆಂದರೆ ಆಸೆಯು ಪೂರೈಸದೆ ಹೋದದ್ದರಿಂದ ಉಂಟಾಗುವ ವಿಷಣ್ಣತೆಯೆಂದು ತಿಳಿಯಬಾರದು. ಫಲಾಶೆಯನ್ನು ಬಿಟ್ಟು ನಿಷ್ಕಾಮಕರ್ಮವನ್ನು ಅವಲಂಬಿಸುವುದನ್ನಿಲ್ಲಿ ನೈರಾಶ್ಯವೆಂದು ಹೊಗಳಲಾಗಿದೆ.

ಉತ್ಸಾಹರಹಿತನು ಎಂದಿಗೂ ಸುಖದಿಂದ ಬಾಳಲಾರ. ಈ ಉತ್ಸಾಹಕ್ಕೆ ಲೋಕದಲ್ಲಿ ನಾವು ಕಾಣುವಂತೆ ಫಲದ ಆಸೆಯೇ ನಿಮಿತ್ತವಾಗಿರುತ್ತದೆ. ಜನರಿಗೆ ಸಹಜವಾಗಿ ಬೇಕಾದ ಫಲವೆಂದರೆ ಅರ್ಥ-ಕಾಮಗಳೇ. ಹಗಲುರಾತ್ರಿ ಜನರು ದುಡಿಯುವುದು ಈ ಅರ್ಥ-ಕಾಮಗಳ ಬಯಕೆಯಿಂದಲೇ. ಅರ್ಥವೆಂದರೆ ಹಣ, ಕಾಮವೆಂದರೆ ಸುಖಭೋಗ. ಭೋಗದಿಂದ ಇಂದ್ರಿಯಗಳಿಗೆ ತಾತ್ಕಾಲಿಕವಾದ ಶಾಂತಿಯುಂಟು. ಈ ಶಾಂತಿಯು ಕ್ಷಣಿಕವಾದ್ದರಿಂದ ಅದು ಅಡಗಿದೊಡನೆ ಮತ್ತೆ ಇನ್ನೊಂದು ಆಸೆ ಎದ್ದುಕೊಳ್ಳುತ್ತದೆ. ಸಮುದ್ರದ ಅಲೆಯಂತೆ ಒಂದರ ಮೇಲೊಂದು ಹುಟ್ಟುತ್ತಿರುವ ಈ ಅಲೆಗಳ ಹೊಡೆತದಿಂದ ಮನುಷ್ಯನಿಗೆ ಶಾಂತಿಯು ಎಂದಿಗೂ ದೊರೆಯದು. ಅಧಿಕಾರದ ಆಸೆ, ಹಣದ ಆಸೆ, ಕೀರ್ತಿಯ ಆಸೆ - ಹೀಗೆ ಹತ್ತಾರು ಆಸೆಗಳಿಗೆ ಅಧೀನನಾದ ಮನುಷ್ಯನು, ಅವುಗಳ ಪ್ರಾಪ್ತಿಗಾಗಿ ಪರಾವಲಂಬಿಯಾಗುತ್ತಾನೆ. ಅನ್ಯರ ಸೇವೆ, ಅನ್ಯರ ಮುಖಸ್ತುತಿ ಅವನಿಗೆ ತಪ್ಪಿದ್ದಲ್ಲ.

''ಆಶಾಯಾ ಯೇ ದಾಸಾಸ್ತೇ ದಾಸಾಃ ಸರ್ವಲೋಕಸ್ಯ'' - ಆಸೆಗೆ ಯಾರು ದಾಸರೋ ಅವರು ಎಲ್ಲರಿಗೂ ದಾಸರೇ ಆಗಿಬಿಡುತ್ತಾರೆ. ಆದ್ದರಿಂದ ಅರ್ಥ-ಕಾಮಗಳಿಗೆ ಕಟ್ಟುಬೀಳದಿರುವವನೇ ವಿದ್ವಾಂಸ. ಅವನೇ ನಿಜದಲ್ಲಿ ವೇದಾಂತವನ್ನರಿತವನು. ಅರ್ಥ-ಕಾಮಗಳಿಂದ ವಿರಕ್ತನಾದವನು ಎಂದಿಗೂ ಆಲಸನಲ್ಲ. ಅವನು ನಿಷ್ಕಾಮಕರ್ಮದಲ್ಲಿ ತೊಡಗಿರುತ್ತಾನೆ. ಈಶ್ವರಪ್ರೀತ್ಯರ್ಥವಾದ ಕರ್ಮ ಅದು. ಅದಕ್ಕೆ ವಿರತಿಯೇ ಇಲ್ಲ. ಶಮದಮಾದಿ ಸಾಧನಸಂಪತ್ತುಗಳ ಗಳಿಕೆ

ಗುರಿಯಾದಾಗ ಅವನ ಚಿತ್ತವು ಸದಾ ಉತ್ಸಾಹದಿಂದ ತುಂಬಿರುತ್ತದೆ. ಅವನದು ದೈಹಿಕಶ್ರಮವಲ್ಲದಿದ್ದರೂ ಮಾನಸಿಕಶ್ರಮವು ಪ್ರಬಲವಾಗಿರುತ್ತದೆ. ಈ ಶ್ರಮವು ದೈಹಿಕಶ್ರಮಕ್ಕಿಂತ ಹೆಚ್ಚಿನ ಉತ್ಸಾಹವನ್ನು ಅಪೇಕ್ಷಿಸುತ್ತದೆ. ಆತನು ಆಸೆಯನ್ನು ದೂರಕ್ಕೆ ತಳ್ಳಿಬಿಟ್ಟಿರುವುದರಿಂದ ಅವನಿಗೆ ಜಗತ್ತು ದಾಸನಂತೆ ವರ್ತಿಸುತ್ತದೆ. ''ಆಶಾ ಯೇಷಾಂ ದಾಸೀ ತೇಷಾಂ ದಾಸಸ್ತ್ವಯಂ ಲೋಕಃ.''

**ಅದ್ಭಿರ್ಗಾತ್ರಾಣಿ ಶುದ್ಧ್ಯಂತಿ ಮನಃ ಸತ್ಯೇನ ಶುದ್ಧ್ಯತಿ ।**
**ವಿದ್ಯಾತಪೋಭ್ಯಾಂ ಭೂತಾತ್ಮಾ ಬುದ್ಧಿರ್ಜ್ಞಾನೇನ ಶುದ್ಧ್ಯತಿ॥ ೨೫॥**

— *ಮನುಸ್ಮೃತಿ, ೫-೧೦೯*

''ಕೈ ಕಾಲು ಮೊದಲಾದ ಅವಯವಗಳು ನೀರಿನಿಂದ ಸ್ವಚ್ಛವಾಗುತ್ತವೆ. ಮನಸ್ಸು ಸತ್ಯವಚನದಿಂದ ಶುದ್ಧವಾಗುತ್ತದೆ. ಜೀವಾತ್ಮನು ವಿದ್ಯೆ ಮತ್ತು ತಪಸ್ಸುಗಳಿಂದ ಶುದ್ಧನಾಗುತ್ತಾನೆ. ಬುದ್ಧಿಯು ಸರಿಯಾದ ಜ್ಞಾನದಿಂದ ಶುದ್ಧವಾಗುತ್ತದೆ.''

ನಮ್ಮ ದೇಹವನ್ನೂ ಕೈಕಾಲುಗಳನ್ನೂ ನೀರಿನಿಂದ ತೊಳೆದು ಸ್ವಚ್ಛಮಾಡಿ ಕೊಳ್ಳಬೇಕು. ಇದು ಸರ್ವರಿಗೂ ತಿಳಿದ ಸಂಗತಿ. ಇದನ್ನು ಮನುಸ್ಮೃತಿಕಾರನು ಹೇಳಬೇಕಾಗಿಲ್ಲ. ಆತನು ಹೇಳುವುದೇನೆಂದರೆ, ಗಂಗಾತುಂಗಾದಿ ನದಿಗಳ ನೀರಿನಲ್ಲಿ ಮುಳುಗಿ ಸ್ನಾನ ಮಾಡಿದರೂ ಶುದ್ಧವಾಗತಕ್ಕದ್ದು ಈ ಸ್ಥೂಲದೇಹವೇ ಹೊರತು ಸೂಕ್ಷ್ಮವಾದ ಅಂತಃಕರಣವಲ್ಲ. ಗಂಗಾದಿನದಿಗಳು ದೇವತಾಸಾಂನಿಧ್ಯದಿಂದ ಪವಿತ್ರವಾದವೆಂಬ ಭಾವನೆ ದೃಢವಾಗಿದ್ದಲ್ಲಿ ಈ ಭಾವನೆಯು ಮಾತ್ರ ಚಿತ್ತಶುದ್ಧಿಗೆ ಸಹಕಾರಿಯಾದೀತು. ಮನಸ್ಸು ಶುದ್ಧವಾಗಬೇಕಾದರೆ ಸತ್ಯವಚನವನ್ನೇ ಹೇಳುತ್ತೇನೆ, ಮನಸ್ಸಿನಲ್ಲಿ ಮೂಡಿದ ಹೊಟ್ಟೆಕಿಚ್ಚು ಮುಂತಾದ್ದನ್ನು ಸತ್ಯವಾಕ್ಕಿನಿಂದ ಹೇಳಿಬಿಡುತ್ತೇನೆ - ಎಂಬ ಸಂಕಲ್ಪ ಬೇಕು. ಮನಸ್ಸಿನಲ್ಲುಂಟಾದ ಕಾಮಕ್ರೋಧಾದಿಗಳನ್ನು ನಿಗ್ರಹಿಸಲು ಸಾಧ್ಯವಾಗದಿದ್ದಾಗ ಅದನ್ನು ಮರೆಮಾಚದೆ ಹೇಳಿಬಿಡಬೇಕು! ಒಳಗೊಳಗೇ ಈ

ಕೊಳೆಯನ್ನು ತುಂಬಿ ಇಟ್ಟುಕೊಳ್ಳಬಾರದು. ಈ ಅಭ್ಯಾಸವು ಬೆಳೆದರೆ ಮುಂದೆ ಆ ಕೆಟ್ಟ ಭಾವನೆಗಳು ಹುಟ್ಟುವುದೇ ಇಲ್ಲ.

ಭೂತಾತ್ಮನೆಂದರೆ ಜೀವಾತ್ಮ. ಜನ್ಮಾಂತರದಲ್ಲಿ ಮಾಡಿದ ಪಾಪಕಾರ್ಯಗಳಿಂದಾದ ಸಂಸ್ಕಾರವನ್ನು ಇವನು ಜೊತೆಗೆ ತಂದಿರುತ್ತಾನೆ. ಆ ಸಂಸ್ಕಾರವು ಅಂತಃಕರಣದಲ್ಲಿ ಮೂಡಿರುತ್ತದೆ. 'ಮನಃ ಸತ್ಯೇನ ಶುಧ್ಯತಿ' ಎಂಬಲ್ಲಿ ಹೇಳಿದ ಕೊಳೆ ಈ ಜನ್ಮದ್ದು, ಜೀವಾತ್ಮನಿಗೆ ಹೇಳುವ ಕೊಳೆ ಜನ್ಮಾಂತರದ್ದು - ಎಂಬುದಿಷ್ಟೇ ಭೇದ. ಜನ್ಮಾಂತರದ ಸಂಸ್ಕಾರವು ವಜ್ರಲೇಪದಂತೆ ಗಟ್ಟಿಯಾದದ್ದು. ಅದು ಬಡಪೆಟ್ಟಿಗೆ ಕದಲುವುದಿಲ್ಲ. ಅದನ್ನು ಅಲ್ಲಾಡಿಸಲು ಬೇಕಾದದ್ದು ಅಧ್ಯಾತ್ಮವಿದ್ಯೆ, ವೇದಾಂತದ ಶ್ರವಣ-ಮನನಗಳು. ಜೊತೆಗೆ ತಪಸ್ಸು: ದೇವತಾರ್ಚನೆ, ಧ್ಯಾನ-ಮುಂತಾದ ತಪಸ್ಸು. ಈ ವಿದ್ಯಾತಪಸ್ಸುಗಳಿಂದ ಹಿಂದಿನ ಸಂಸ್ಕಾರವನ್ನು ತೊಡೆದುಹಾಕಬಹುದು. ಬುದ್ಧಿಯೆಂದರೆ ಇಲ್ಲಿ ತಪ್ಪು ತಿಳಿವಳಿಕೆ. ಇದು ಮೂರು ಬಗೆ: ಅಜ್ಞಾನ, ವಿಪರೀತಜ್ಞಾನ, ಸಂಶಯ. ಪಾಪ, ಪುಣ್ಯ - ಇತ್ಯಾದಿ ಸದ್ವಿಚಾರದ ಸುಳಿವೇ ಇಲ್ಲದಿರುವುದು ಅಜ್ಞಾನ. ಧರ್ಮವನ್ನು ಅಧರ್ಮವೆಂದೂ, ಅಧರ್ಮವನ್ನು ಧರ್ಮವೆಂದೂ ತಿಳಿದಿರುವುದು ವಿಪರೀತಜ್ಞಾನ. ದೇವರು ಇದ್ದಾನೋ ಇಲ್ಲವೋ ಎಂಬ ನಿಶ್ಚಯವಿಲ್ಲದಿರುವುದು ಸಂಶಯ. ಇಂತಹ ಬುದ್ಧಿಯು ಸದ್ಗ್ರಂಥಗಳ ಅಭ್ಯಾಸದಿಂದಲೂ ಮಹಾತ್ಮರ ಉಪದೇಶಗಳಿಂದಲೂ ಆಗುವ ಜ್ಞಾನದಿಂದ ಕೊನೆಗೊಳ್ಳುತ್ತದೆ. ಅದೇ ಬುದ್ಧಿಯ ಶುದ್ಧಿ - ಶುಚಿತ್ವ.

ಈ ಎಲ್ಲ ಶುಚಿತ್ವಗಳಿಗಿಂತಲೂ ಪ್ರಬಲವಾದದ್ದು ಅರ್ಥಶೌಚ ಎನ್ನುತ್ತಾನೆ, ಮಹಾತ್ಮನಾದ ಮನು.

**ಸರ್ವೇಷಾಮೇವ ಶೌಚಾನಾಮರ್ಥಶೌಚಂ ಪರಂ ಸ್ಮೃತಮ್॥**

ಅನ್ಯಾಯದ ಹಣವನ್ನು ಮುಟ್ಟದಿರುವುದೇ ಅರ್ಥಶೌಚ. ಇದು ವಿಸ್ತೃತವಾದ ವ್ಯಾಖ್ಯೆಯನ್ನಪೇಕ್ಷಿಸುತ್ತದೆ. ಅರ್ಥಶೌಚವಿದ್ದರೆ ಶ್ರೀಮಂತನಾಗುವುದು ಶಕ್ಯವೇ ಇಲ್ಲ. ಹಿಂದೆ ಹೇಳಿದ ಎಲ್ಲ ಶುಚಿತ್ವಗಳಿಗೂ ಒರೆಗಲ್ಲು ಈ ಅರ್ಥಶೌಚ.

**ಧರ್ಮಾರ್ಥಾವುಚ್ಯತೇ ಶ್ರೇಯಃ ಕಾಮಾರ್ಥೌ ಧರ್ಮ ಏವ ಚ ।**
**ಅರ್ಥ ಏವೇಹ ವಾ ಶ್ರೇಯಸ್ತ್ರಿವರ್ಗ ಇತಿ ತು ಸ್ಥಿತಿಃ ॥ ೨೬॥**

— *ಮನುಸ್ಮೃತಿ, ೨-೨೨೪*

''ಧರ್ಮ ಮತ್ತು ಅರ್ಥ - ಇವೆರಡು ಶ್ರೇಯಸ್ಸೆಂದು ಕೆಲವರು ಹೇಳುತ್ತಾರೆ. ಕಾಮ ಮತ್ತು ಅರ್ಥ - ಇವೆರಡೇ ಶ್ರೇಯಸ್ಸೆಂದು ಇನ್ನು ಕೆಲವರ ಮತ. ಧರ್ಮವೊಂದೇ ಶ್ರೇಯಸ್ಸೆಂದೂ ಅರ್ಥವೊಂದೇ ಶ್ರೇಯಸ್ಸೆಂದೂ ಹೇಳತಕ್ಕವರಿದ್ದಾರೆ. ಧರ್ಮ, ಅರ್ಥ, ಕಾಮ - ಎಂಬ ತ್ರಿವರ್ಗವೇ ಶ್ರೇಯಸ್ಸೆಂಬುದು ನಮ್ಮ ಸಿದ್ಧಾಂತವಾಗಿದೆ.''

ಶ್ರೇಯಸ್ಸಿಗೆ ಅಭ್ಯುದಯವೆಂದೂ ಹೆಸರಿದೆ. ಅರ್ಥವೆಂದರೆ ಹಣ. ಹಣದಿಂದ ಸುಖಸಾಮಗ್ರಿಗಳನ್ನು ಪಡೆದು ಸುಖವನ್ನನುಭವಿಸುವುದು ಕಾಮ. ಕೀರ್ತಿ-ಅಧಿಕಾರಗಳೆರಡೂ ಸುಖಸಾಮಗ್ರಿಯಲ್ಲಿ ಸೇರುತ್ತವೆ. ಈ ಅರ್ಥ-ಕಾಮಗಳನ್ನು ಧರ್ಮದಿಂದಲೇ ಸಂಪಾದಿಸಬೇಕೆಂದು ಧರ್ಮಶಾಸ್ತ್ರಕಾರರ ಅಭಿಮತ. ಈ ಮೂರರಲ್ಲಿ ಮುಖ್ಯವಾದದ್ದು ಯಾವುದು?

ಕೆಲವರು ಅಭಿಪ್ರಾಯ ಹೀಗಿದೆ: 'ನಾವು ಧರ್ಮಮಾರ್ಗದಿಂದಲೇ ಹಣವನ್ನು ಸಂಪಾದಿಸಬೇಕು. ಅಂತಹ ಸಂಪಾದನೆ ಶಾಶ್ವತವಾದದ್ದು. ಅಧರ್ಮದಿಂದ ಗಳಿಸಿದ್ದು ಶಾಶ್ವತವಲ್ಲ. ಅಲ್ಲದೆ ಅಧರ್ಮದಿಂದ ಪಾಪವೂ ದುಃಖವೂ ಗಂಟುಬೀಳುತ್ತವೆ. ಆದಕಾರಣ ಧರ್ಮಾರ್ಥಗಳೆರಡರ ಗಳಿಕೆಯೇ ಅಭ್ಯುದಯ. ಇವುಗಳಿಂದ ಸುಖವೂ ತಾನಾಗಿಯೇ ದೊರಕುತ್ತದೆ' - ಎಂದು. ಇನ್ನು ಕೆಲವರ ಹೇಳಿಕೆ ಏನೆಂದರೆ - 'ಅರ್ಥ-ಕಾಮಗಳೆರಡೇ ಅಭ್ಯುದಯ. ಧರ್ಮದಿಂದ ಅರ್ಥವು ದೊರೆಯುತ್ತದೆ ಯೆಂಬುದು ವಿಶ್ವಾಸಾರ್ಹವಲ್ಲ. ಲೌಕಿಕ ಸುಖಕ್ಕೆ ಅರ್ಥ-ಕಾಮಗಳೆರಡೇ ಬೇಕಾದವು.' ಆದರೆ ಧರ್ಮವೇ ಮುಖ್ಯವಾದದ್ದೆಂದೂ ಅದೊಂದೇ ಶಾಶ್ವತವೂ ಸುಖಪ್ರದವೂ ಆದದ್ದೆಂದೂ ಇನ್ನು ಕೆಲವರ ಅಭಿಮತ. ಧರ್ಮನಿಷ್ಠೆಯಿಂದಾಗುವ ಮನಃಶಾಂತಿಗೆ

ಇನ್ನಾವುದೂ ಸಮವಲ್ಲವೆಂದು ಅವರು ತಿಳಿದಿದ್ದಾರೆ. ಕಾಮವೇ ಶ್ರೇಯಸ್ಸೆಂದು ಹೇಳತಕ್ಕವರೂ ಇದ್ದಾರೆ. ಧರ್ಮಾರ್ಥಗಳೆರಡೂ ಕಾಮಕ್ಕಾಗಿಯೇ ಅಲ್ಲವೆ? 'ನಮಗೆ ಧ್ಯೇಯವಾದದ್ದು ಸೌಖ್ಯವೇ ಹೊರತು ಧರ್ಮಾರ್ಥಗಳಲ್ಲ; ಅವೆರಡು ಸಾಧನಗಳಾಗಿರಬಹುದು, ಅವಕ್ಕೆ ಪ್ರಾಧಾನ್ಯ ಸಲ್ಲದು' - ಎಂದು ಆ ಜನರ ಆಶಯ. ಅರ್ಥವೇ ಮುಖ್ಯವೆಂದು ಹೇಳತಕ್ಕವರೂ ಇದ್ದಾರೆ. ಅರ್ಥೋಽಸ್ತು ನಃ ಕೇವಲಂ! ಇನ್ನಾವ ಸಾಮಗ್ರಿ ಇಲ್ಲದಿದ್ದರೂ ಕೈಯಲ್ಲಿ ಯಥೇಚ್ಛವಾಗಿ ಹಣವಿದ್ದರೆ ಅದೇ ಒಂದು ಸಂತೋಷವನ್ನುಂಟುಮಾಡುತ್ತದೆ! ಹಣಕ್ಕಾಗಿ ಸದಾ ಕಷ್ಟಪಡತಕ್ಕವರೇ ಇದ್ದಾರೆ. ಆದ್ದರಿಂದ ಅರ್ಥವನ್ನೇ ಅಭ್ಯುದಯವೆನ್ನಬೇಕು - ಎಂದು ಹೇಳತಕ್ಕವರಿದ್ದಾರೆ. ಬಹುಶಃ ಈ ಪಕ್ಷದವರೇ ಈಗ ಅಧಿಕವಾಗಿದ್ದಾರೆಂದು ತೋರುತ್ತದೆ!

ಮಹಾತ್ಮನಾದ ಮನು ಹೇಳುತ್ತಾನೆ: ಇವೆಲ್ಲವೂ ಪಾಕ್ಷಿಕವಾದ ಅಭಿಪ್ರಾಯಗಳು. ಧರ್ಮ, ಅರ್ಥ, ಕಾಮ - ಇವು ಮೂರೂ ಪುರುಷಾರ್ಥಗಳೇ. ಇವಕ್ಕೆ 'ತ್ರಿವರ್ಗ'ವೆಂದು ಹೆಸರು. ಧರ್ಮಮಾರ್ಗದಿಂದಲೇ ಅರ್ಥವನ್ನೂ ಕಾಮವನ್ನೂ ಸಂಪಾದಿಸಿಕೊಳ್ಳಬೇಕು. ಮನುಷ್ಯನು ಬಯಸತಕ್ಕದ್ದು ಅರ್ಥ-ಕಾಮಗಳಾದರೂ, ಅವುಗಳ ಸಂಪಾದನೆಗೆ ರಾಜಮಾರ್ಗವಾದದ್ದು ಧರ್ಮ. ಇವು ಮೂರೂ ಶ್ರೇಯಸ್ಕಾಮರಿಗೆ ಆವಶ್ಯಕ. ಈ ತ್ರಿವರ್ಗದ ಸಿದ್ಧಿಯೇ ಅಭ್ಯುದಯ.

**ಗೃಹಾಸಕ್ತಸ್ಯ ನೋ ವಿದ್ಯಾ ನೋ ದಯಾ ಮಾಂಸಭೋಜಿನಃ ।**
**ದ್ರವ್ಯಲುಬ್ಧಸ್ಯ ನೋ ಸತ್ಯಂ ಸ್ತ್ರೈಣಸ್ಯ ನ ಪವಿತ್ರತಾ ॥ ೨೭ ॥**

— *ಸಮಯೋಚಿತಪದ್ಯಮಾಲಿಕಾ*

''ಮನೆಯ ವ್ಯಾಮೋಹವಿರತಕ್ಕವನಿಗೆ ವಿದ್ಯೆ ದೊರೆಯದು. ಮಾಂಸವನ್ನು ತಿನ್ನತಕ್ಕವನಿಗೆ ದಯೆ ಇರದು. ಹಣದಲ್ಲಿ ದುರಾಸೆಯಿದ್ದವನಲ್ಲಿ ಸತ್ಯವಿರದು. ಕಾಮುಕನಿಗೆ ಶುಚಿತ್ವವಿರುವುದಿಲ್ಲ.''

ಹಿಂದೆ ಸರ್ಕಾರವು ನಡೆಸುವ ವಿದ್ಯಾಶಾಲೆಗಳಿರಲಿಲ್ಲ. ವಿದ್ಯೆಗಾಗಿ ದೂರದ ಗುರುಕುಲವನ್ನು ಅರಸಿಕೊಂಡು ಹೋಗಬೇಕಾಗುತ್ತಿತ್ತು. ಅಲ್ಲಿ ಭಿಕ್ಷಾನ್ನದಿಂದ ಜೀವಿಸುತ್ತ, ಗುರುಶುಶ್ರೂಷೆಯಿಂದ ಗುರುವನ್ನು ಮೆಚ್ಚಿಸಿ ವಿದ್ಯೆಯನ್ನು ಕಲಿಯಬೇಕಾಗಿತ್ತು. ಮನೆಯಿಂದ ಹಣವನ್ನು ತರಿಸಿಕೊಂಡು ಸುಖಜೀವನವನ್ನು ಮಾಡಲು ವಿದ್ಯಾರ್ಥಿನಿಲಯಗಳೂ ಇರಲಿಲ್ಲ. ಗುರುವಿಗೆ ಸರ್ಕಾರವು ವೇತನವನ್ನು ನೀಡುತ್ತಿರಲಿಲ್ಲವಾದ್ದರಿಂದ, ಗುರುವಿನ ಸೇವೆ, ವಿನಯಾದಿ ಸದ್ಗುಣಗಳು ಮಾತ್ರ ವಿದ್ಯಾರ್ಜನೆಗೆ ನೆರವಾಗುತ್ತಿದ್ದವು. ಆದ್ದರಿಂದ ವಿದ್ಯೆಯಲ್ಲಿ ತೀವ್ರಾಸಕ್ತಿಯಿಲ್ಲದವನು ಮನೆಯಿಂದ ಹೊರಡುತ್ತಿರಲಿಲ್ಲ. ಈ ಕಾರಣದಿಂದ ವಿದ್ಯಾಲಾಭವು ಎಲ್ಲರಿಗೂ ದೊರೆಯುವುದು ಶಕ್ಯವಿರಲಿಲ್ಲ. ಶ್ರಮಪಡದೆ ಮನೆಯಲ್ಲಿ ಸುಖವಾಗಿರಬೇಕೆನ್ನ ತಕ್ಕವರಿಗೆ ಈಗಲೂ ವಿದ್ಯೆ ದುರ್ಲಭವೇ.

'ಗೃಹಾಸಕ್ತಸ್ಯ ನೋ ವಿದ್ಯಾ' ಎಂಬ ನುಡಿಗೆ ಇನ್ನೊಂದು ಅರ್ಥವೂ ಸಮಯೋಚಿತ. 'ಅಧ್ಯಾತ್ಮವಿದ್ಯಾ ವಿದ್ಯಾನಾಂ' ಎಂಬ ಗೀತಾವಚನದಂತೆ ಅಧ್ಯಾತ್ಮವಿದ್ಯೆಯೇ ವಿದ್ಯೆ. ಮನೆ, ಹೆಂಡತಿ, ಮಕ್ಕಳು-ಎಂಬ ತೀವ್ರವಾದ ವ್ಯಾಮೋಹವಿರತಕ್ಕವನಿಗೆ ಅಧ್ಯಾತ್ಮವಿದ್ಯೆಯಲ್ಲಿ ಆಸಕ್ತಿಯೂ ಇರುವುದಿಲ್ಲ, ಅದು ಸಿದ್ಧಿಸುವುದೂ ಇಲ್ಲ.

ಹಿಂಸೆ ಮಾಡದೆ ಮಾಂಸ ಲಭಿಸದು. ಮಾಂಸಭೋಜಿಯು ಪ್ರಾಣಿಹತ್ಯೆಯನ್ನು ಪ್ರೋತ್ಸಾಹಿಸತಕ್ಕವನೇ. ಪ್ರಾಣಿದಯೆಯುಳ್ಳವನು ಮಾಂಸಭೋಜಿಯಾಗಲಾರ. ಮಾಂಸಭೋಜಿಗಳು ''ಅಹಿಂಸಾ ಪರಮೋ ಧರ್ಮಃ'' ಎಂದು ಬೋಧಿಸುವುದು ಒಂದು ಅಚ್ಚರಿ ! ಅಥವಾ ''ಆಹಾರಕ್ಕಾಗಿ ಪ್ರತಿದಿನ ಪ್ರಾಣಿಗಳನ್ನು ಕಡಿಯುವುದು ಹಿಂಸೆಯಲ್ಲ; ಎಷ್ಟೋ ವರ್ಷಗಳಲ್ಲಿ ಎಲ್ಲಿಯೋ ಒಂದು ಸಲ ಯಾಗದಲ್ಲಿ ಹೋಮಕ್ಕಾಗಿ ಪ್ರಾಣಿಯನ್ನು ಕೊಲ್ಲುವುದು ಹಿಂಸೆ'' ಎಂದು ಈ ಜನರ ಅಭಿಪ್ರಾಯವಿರಬಹುದು.

ಹಣದ ಆಸೆ ಪ್ರಬಲವಾದಾಗ ಸತ್ಯವು ನುಣುಚಿಕೊಳ್ಳುತ್ತದೆ. ಸತ್ಯ-ಧರ್ಮಗಳಿಗೆ

ಬದ್ಧರಾಗಿ ನ್ಯಾಯಮಾರ್ಗದಲ್ಲಿ ನಡೆಯತಕ್ಕವರು ಕೋಟೀಶ್ವರರಾಗುವುದು ಸಾಧ್ಯವೇ ಇಲ್ಲ. ಅವರು ಸತ್ಯಕ್ಕೆ ಅನೃತ-ಅತಿಶಯೋಕ್ತಿ-ವಂಚನೆಗಳ ಕವಚವನ್ನು ತೊಡಿಸಿದವರು.

ಕಾಮವೇ ಮನಸ್ಸಿನ ಒಂದು ವಿಕೃತಿ. ಈ ವಿಕೃತಿಯೇ ಯಾವನ ಸ್ವಭಾವವೋ ಅವನು ಕಾಮುಕ. ವಿಕೃತಿಯೇ ಮನಸ್ಸಿನ ಕೊಳೆ. ಇಂತಹ ವಿಕೃತಚಿತ್ತನಲ್ಲಿ ಪವಿತ್ರತೆ ಉಳಿಯುವುದು ಹೇಗೆ? ಅತಿಯಾದ ಕಾಮಿ ಸದಾ ಅಪವಿತ್ರ.

**ತಸ್ಯಾರ್ಥೇ ಸರ್ವಭೂತಾನಾಂ ಗೋಪ್ತಾರಂ ಧರ್ಮಮಾತ್ಮಜಂ ।**
**ಬ್ರಹ್ಮತೇಜೋಮಯಂ ದಂಡಮಸೃಜತ್ ಪೂರ್ವಮೀಶ್ವರಃ ॥ ೨೮॥**

— ಮನುಸ್ಮೃತಿ, ೭-೧೪

''ರಾಜನಿಗೆ ಉಪಯೋಗವಾಗಲೆಂದು ಈಶ್ವರನು ಬ್ರಹ್ಮತೇಜೋಮಯನಾದ ದಂಡನೆಂಬ ಪುತ್ರನನ್ನು ಮೊದಲು ಉತ್ಪಾದಿಸಿ ರಾಜನಿಗೆ ಕೊಟ್ಟನು. ಆ ಪುತ್ರನಿಗೆ ಧರ್ಮ ಎಂದು ಇನ್ನೊಂದು ಹೆಸರು. ಆ ಧರ್ಮಪುರುಷನು ಸರ್ವಭೂತಗಳನ್ನು ರಕ್ಷಿಸತಕ್ಕವನು.''

ಒಂದು ಕಾಲದಲ್ಲಿ ರಾಜನಿರಲಿಲ್ಲ. ಅರಾಜಕವಾದ ದೇಶದಲ್ಲಿ ಯಾವಾಗ ಯಾವ ಅನರ್ಥವಾಗುವುದೋ ಎಂಬ ಭಯದಿಂದ ಪ್ರಜೆಗಳು ಭೀತರಾಗಿದ್ದರು. ಆಗ ಬ್ರಹ್ಮನು ರಾಜನನ್ನು ಸೃಷ್ಟಿಸಿ ಅವನಿಗೆ ಸಹಾಯ ಮಾಡುವುದಕ್ಕಾಗಿ ಧರ್ಮನೆಂಬ ಪುತ್ರನನ್ನು ರಾಜನಿಗೆ ಕೊಟ್ಟನು. ರಾಜನು ಅಪರಾಧಿಗಳನ್ನು ಧರ್ಮದಿಂದ ದಂಡಿಸತಕ್ಕದ್ದು. ಧರ್ಮವು ಒಂದು ಕಟ್ಟಳೆ; ನಿಯಮ; ಅದೇ ಸಂವಿಧಾನ (constitution). ಇದು ಬ್ರಹ್ಮತೇಜೋಮಯವಾದದ್ದು. ಬ್ರಹ್ಮವೆಂದರೆ ವೇದ. ಅದು ಮನುಷ್ಯನಿರ್ಮಿತವಲ್ಲ, ಈಶ್ವರನ ಆಜ್ಞಾರೂಪವಾದದ್ದು. ಆದ್ದರಿಂದಲೇ 'ವೇದೋऽಖಿಲೋ ಧರ್ಮಮೂಲಂ' ಎಂದು ಮನುವೇ ಹೇಳಿದ್ದಾನೆ. ಇದಿಷ್ಟು ಈ ಶ್ಲೋಕದ ತಾತ್ಪರ್ಯ.

ಯಾರಲ್ಲಿ ದೇಶದ ಮೇಲಿನ ಪ್ರಭುತ್ವವು ಕೇಂದ್ರೀಕೃತವಾಗಿದೆಯೋ ಆತನು

ರಾಜ. ಈ ಪ್ರಭುತ್ವವು ವಂಶಪರಂಪರೆಯಿಂದ ಬಂದಿರಬಹುದು, ಅಥವಾ ಪ್ರಜೆಗಳು ಮಾಡಿದ ಚುನಾವಣೆಯಿಂದ ಬಂದಿರಬಹುದು. ಆತನಿಗೂ ಪ್ರಜೆಗಳನ್ನು ಪಾಲಿಸಲು, ದುಷ್ಟರನ್ನು ದಂಡಿಸಲು ಕಾನೂನುಗಳು ಬೇಕು. ಕಾನೂನುಗಳು ಒಂದು ಸಂವಿಧಾನದ ಚೌಕಟ್ಟಿನಲ್ಲಿರಬೇಕು. ಈ ಸಂವಿಧಾನವನ್ನು ನಮ್ಮ ಪ್ರಾಚೀನ ಭಾರತೀಯರು ಧರ್ಮ ಅಥವಾ ರಾಜಧರ್ಮ ಎಂದು ಕರೆಯುತ್ತಿದ್ದರು. ಈ ಕಾಲದ ಸಂವಿಧಾನವು ಮನುಜರ ಇಚ್ಛೆಗೆ ಒಳಪಟ್ಟಿದ್ದರೆ, ಮನುರಚಿತ ಸಂವಿಧಾನವು ವೇದದ ಅಂಕೆಗೆ ಒಳಪಟ್ಟಿತ್ತು.

ಮನುರಚಿತ ಸಂವಿಧಾನವು ಒಂದು ರಾಷ್ಟ್ರಕ್ಕೆ ಸೀಮಿತವಲ್ಲ; ಮನುಜರು ವಾಸಿಸುವ ಎಲ್ಲ ರಾಷ್ಟ್ರಗಳಿಗೂ ಅನ್ವಿತವಾದದ್ದು. ಆ ಸಂವಿಧಾನವು ಮನುಜರಿಗೆ ಮಾತ್ರವಲ್ಲ, ಮನುಷ್ಯಭೋಗ್ಯವಾದ ಸ್ಥಾವರಗಳಿಗೂ ಅನ್ವಿತವಾದದ್ದು.

**ತಸ್ಯ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ ।**
**ಭಯಾದ್ ಭೋಗಾಯ ಕಲ್ಪಂತೇ ಸ್ವಧರ್ಮಾನ್ನ ಚ್ಯವಂತಿ ಚ ॥**

— *ಮನುಸ್ಮೃತಿ, ೭-೧೫*

ಆ ದಂಡಸಂಹಿತೆಯ ಭಯದಿಂದ ಚರಾಚರಗಳೆಲ್ಲವೂ ಸುಖಭೋಗವನ್ನು ಅನುಭವಿಸಲು ಸಮರ್ಥವಾಗಿವೆ. ಅವು ತಮ್ಮ ಕರ್ತವ್ಯಗಳಿಂದ ವಿಮುಖವಾಗುವುದಿಲ್ಲ.

ಈ ದಂಡಸಂಹಿತೆಯ ಅಡಿಯಲ್ಲಿ ಹಲವಾರು ಕಾನೂನುಗಳಿರುತ್ತವೆ. ಆ ಕಾನೂನುಗಳನ್ನು ಯಾರೂ ಮೀರಲಾಗದು. ಸ್ಥಾವರಗಳು ಮೀರುವುದಿಲ್ಲ. ಕಾನೂನಿನ ಪ್ರಕಾರ ಸೂರ್ಯನು ಹುಟ್ಟುತ್ತಾನೆ. ಗಾಳಿ ಬೀಸುತ್ತಲೇ ಇರುತ್ತದೆ. ಮೋಡವು ಮಳೆ ಸುರಿಸುತ್ತದೆ. ನದಿಗಳು ಹರಿಯುತ್ತವೆ. ಮರಗಳು ಹಣ್ಣು ಬಿಡುತ್ತವೆ. ವನಸ್ಪತಿಗಳು ತಮ್ಮ ಔಷಧೀಯ ಗುಣಗಳನ್ನು ತ್ಯಜಿಸುವುದಿಲ್ಲ. ಈ ಸ್ಥಾವರಗಳಿಗೆ ಸದೃಶವಾದ ಬುದ್ಧಿಹೀನ ಪ್ರಾಣಿಗಳೂ ಸಹ ತಮ್ಮ ಸ್ವಧರ್ಮವನ್ನು ಮೀರಿ ನಡೆಯುವುದಿಲ್ಲ. ಹಸುಗಳು ಹಾಲು ಕೊಡುತ್ತವೆ. ಕತ್ತೆ, ಒಂಟೆಗಳು ಭಾರ ಹೊರುತ್ತವೆ. ಎತ್ತು ಗದ್ದೆಯನ್ನು ಉಳುತ್ತದೆ. ಆದರೆ ಬುದ್ಧಿಶಾಲಿಯೆನಿಸಿಕೊಂಡ ಮನುಷ್ಯನು ಮಾತ್ರ ಸ್ವಧರ್ಮವನ್ನು ಮೀರಿ ನಡೆಯತಕ್ಕವನು! ಈತನನ್ನು ಹತೋಟಿಯಲ್ಲಿ ಇಡುವುದಕ್ಕಾಗಿ ರಾಜನು

ಬೇಕು, ದಂಡಸಂಹಿತೆ ಬೇಕು, ಕಾನೂನುಗಳು ಬೇಕು. ಸ್ವಧರ್ಮದ ಉಲ್ಲಂಘನೆಯಾಗುತ್ತಿರುವುದು ಬುದ್ಧಿಶಾಲಿಯೆನಿಸಿಕೊಂಡ ಮನುಷ್ಯನಿಂದ.

**ತ್ರೈವಿದ್ಯೇಭ್ಯಸ್ತ್ರಯೀ ವಿದ್ಯಾಂ ದಂಡನೀತಿಂ ಚ ಶಾಶ್ವತೀಮ್ ।**
**ಆನ್ವೀಕ್ಷಿಕೀಂ ಚಾತ್ಮವಿದ್ಯಾಂ ವಾರ್ತಾರಂಭಾಂಶ್ಚ ಲೋಕತಃ ॥ ೨೯॥**

— ಮನುಸ್ಮೃತಿ, ೭-೪೩

''ಅರಸನು ವೇದವಿದರಿಂದ ವೇದೋಕ್ತವಿದ್ಯೆಯನ್ನು ತಿಳಿದಿರಬೇಕು. ಪರಂಪರೆಯಿಂದ ಶಾಶ್ವತವೆಂದು ಸಿದ್ಧವಾದ ಅರ್ಥಶಾಸ್ತ್ರವನ್ನು ಅಭ್ಯಾಸ ಮಾಡಿ ಆತ್ಮವಿದ್ಯೆಯ ತತ್ತ್ವವನ್ನು ಬಲ್ಲವನಾಗಿರಬೇಕು. ಕೃಷಿ, ವಾಣಿಜ್ಯ, ಪಶುಪಾಲನೆ ಮುಂತಾದ ಜನೋಪಯುಕ್ತವಾದ ವಿಷಯಗಳನ್ನು ಪಳಗಿದ ರೈತರು, ವ್ಯಾಪಾರಿಗಳು ಮೊದಲಾದವರಿಂದ ಕಲಿತುಕೊಳ್ಳತಕ್ಕದ್ದು.''

ಮನುವಿನ ಕಾಲದಲ್ಲಿ ಜೀವಿತದ ಮೌಲ್ಯವನ್ನು ನಿರ್ಧರಿಸಿ ಜೀವನೋದ್ದೇಶದ ಸಾಧನೆಗೆ ಮಾರ್ಗೋಪಾಯಗಳನ್ನು ತಿಳಿಸಿಕೊಡತಕ್ಕದ್ದು ವೇದವೇ ಎಂದು ಭಾರತೀಯರ ನಿರ್ಧಾರವಾಗಿತ್ತು. ಅದೊಂದು ಸಂವಿಧಾನ (constitution)ವೆಂದು ಅದಕ್ಕೆ ಮಾನ್ಯತೆ ಇದ್ದುದರಿಂದ ''ವೇದೋಽಖಿಲೋ ಧರ್ಮಮೂಲಂ'' ಎಂದು ಮನುವೂ ಇತರ ಸ್ಮೃತಿಕಾರರೂ ಹೇಳಿದ್ದಾರೆ. ಸಂವಿಧಾನವನ್ನರಿಯದವನು ರಾಜ್ಯಪಾಲನೆ ಮಾಡಲಾರ. ಸಮಸ್ತ ಪ್ರಜೆಗಳಿಗೂ ಹಿತಕರವಾದ ಧರ್ಮವು ಬಹುಮುಖವಾದದ್ದು. ಅದರ ರಕ್ಷಣೆ ಅರಸನಿಗೆ ಅಧೀನ. ಅದರ ರಕ್ಷಣೆಯೇ ಅರಸನ ಕರ್ತವ್ಯ. ಜನರೆಲ್ಲರೂ ಧರ್ಮಮಾರ್ಗದಂತೆ ನಡೆಯುವುದಾದರೆ ರಾಜನೂ ಬೇಡ, ಸರ್ಕಾರವೂ ಬೇಡ. ಒಂದು ಕಾಲದಲ್ಲಿ ರಾಜನೇ ಇರಲಿಲ್ಲವಂತೆ. ''ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮ ಪರಸ್ಪರಂ'' - ಧರ್ಮದ ಬಲದಿಂದಲೇ ಪ್ರಜೆಗಳು ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದರೆಂದೂ ರಾಜನೇ ಇರಲಿಲ್ಲವೆಂದೂ ಮಹಾಭಾರತವು ಹೇಳುತ್ತದೆ.

ಎರಡನೆಯ ಧರ್ಮಮೂಲವಾದ ದಂಡನೀತಿ. ದಂಡನೀತಿಗೆ ಅರ್ಥಶಾಸ್ತ್ರವೆಂದೂ ಹೆಸರಿದೆ. ಅರ್ಥಶಾಸ್ತ್ರವೆಂದರೆ ಬರಿಯ ಹಣಕಾಸುಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ರಾಜ್ಯದ ಆಡಳಿತ (administration), ನ್ಯಾಯ, ರಾಜಕೀಯ (polity), ಸೈನ್ಯ, ರಾಷ್ಟ್ರರಕ್ಷಣೆ - ಇವನ್ನು ಒಳಗೊಂಡದ್ದು ಅರ್ಥಶಾಸ್ತ್ರ. ಅರಸನು ಕಲಿತಿರಬೇಕಾದ ತರ್ಕವು ಪಂಡಿತರೊಡನೆ ವಾದಮಾಡತಕ್ಕ ತರ್ಕವಲ್ಲ. ಊಹಾಪೋಹಗಳಿಂದ ಸತ್ಯವನ್ನು ನಿರ್ಧರಿಸುವ ತರ್ಕಕೌಶಲ; ಪ್ರತ್ಯಕ್ಷವಾಗಿ ಕಾಣದೇ ಇದ್ದುದನ್ನು ಯುಕ್ತಿಯಿಂದ ಊಹಿಸಬಲ್ಲ ಸಾಮರ್ಥ್ಯ. ಇನ್ನು ಕೃಷಿ, ವಾಣಿಜ್ಯ, ರಸ್ತೆ ಬಾವಿ ಕೆರೆಗಳ ನಿರ್ಮಾಣ-ಮುಂತಾದ್ದನ್ನು ಅನುಭವಿಗಳಾದ ಜನರಿಂದ ತಿಳಿದುಕೊಳ್ಳತಕ್ಕದ್ದು.

ಆತ್ಮವಿದ್ಯೆಯೆಂದರೆ ವೇದಾಂತದರ್ಶನ. ಸುಖದುಃಖಗಳಲ್ಲಿ, ಜಯಾಪಜಯಗಳಲ್ಲಿ ಹಿಗ್ಗದೆ ಕುಗ್ಗದೆ, ಚಿತ್ತಕ್ಷೋಭೆಗೆ ಒಳಗಾಗದೆ ಮನಸ್ಸನ್ನು ಸಮತೋಲನದಲ್ಲಿ ಇರಿಸಿಕೊಳ್ಳುವುದಕ್ಕಾಗಿ ಆತ್ಮವಿದ್ಯೆಯ ಮೂಲತತ್ತ್ವವನ್ನು ಅರಸನು ಅರಿತಿರಬೇಕೆಂದು ಮನು ಹೇಳುತ್ತಾನೆ.

ಪ್ರಜೆಗಳ ಸರ್ವತೋಮುಖವಾದ ಹಿತವನ್ನು ರಕ್ಷಿಸತಕ್ಕವನು ರಾಜ. ರಾಜ್ಯಭಾರವು ಸುಲಭವಾದ್ದಲ್ಲ. ದಶರಥಮಹಾರಾಜನ ನುಡಿ ಇದು:

**ರಾಜಪ್ರಭಾವಜುಷ್ಟಾಂ ಹಿ ದುರ್ವಹಾಮಜಿತೇಂದ್ರಿಯೈಃ।**
**ಪರಿಶ್ರಾಂತೋಽಸ್ಮಿ ಲೋಕಸ್ಯ ಗುರ್ವೀಂ ಧರ್ಮಧುರಂ ವಹನ್॥**

— *ಅಯೋಧ್ಯಾಕಾಂಡ, ೨-೯*

"ನನಗಿಂತ ಹಿಂದಿನ ರಾಜರು ತಮ್ಮ ಪ್ರಭಾವದಿಂದ ಮಾಡುತ್ತಿದ್ದ ರಾಜ್ಯಪಾಲನೆ ಇದು. ಇಂದ್ರಿಯಜಯವಿಲ್ಲದವರಿಗೆ ಇದನ್ನು ಹೊರಲು ಸಾಧ್ಯವಾಗದು. ಇಂತಹ ಅತ್ಯಂತ ಭಾರವಾದ ಧರ್ಮರಕ್ಷಣೆಯನ್ನು ಮಾಡಿ ಬಳಲಿಹೋಗಿದ್ದೇನೆ !"

ಇಂದು ಮಂತ್ರಿಗಳೇ ರಾಜ್ಯಭಾರವನ್ನು ನಡೆಸತಕ್ಕವರು. ಎಷ್ಟು ಜನರಿಗೆ ಮನುಸಂಮತವಾದ ಅರ್ಹತೆ ಇದೆ? ಬಳಲಿಹೋಗಿದ್ದೇನೆ, ಈ ಹೊರೆ ಬೇಡ - ಎನ್ನತಕ್ಕವರು ಯಾರು? ಮನುವು ಇಂತಹ ತೊಡಕುಗಳನ್ನು ಕಲ್ಪಿಸಿದ್ದರಿಂದಲೇ 'ಮನುಸ್ಮೃತಿಯನ್ನು ಸುಡಬೇಕು' ಎಂದು ಘೋಷಣೆ ಹೊರಟಿರಬಹುದು!

**ಪಂಕಂ ವಿನಾ ಸರೋ ಭಾತಿ ಸದಃ ಖಲಜನೈರ್ವಿನಾ ।**
**ಕಟುವರ್ಣೈರ್ವಿನಾ ಕಾವ್ಯಂ ಮಾನಸಂ ವಿಷಯೈರ್ವಿನಾ ॥ ೩೦ ॥**

— *ರಸಗಂಗಾಧರ*

''ಕೆಸರಿಲ್ಲದಿದ್ದರೆ ಸರೋವರವು ಶೋಭಿಸುತ್ತದೆ. ಖಳಜನರಿಲ್ಲದ ಸಭೆಯೂ ಕರ್ಕಶ ವರ್ಣಗಳಿಲ್ಲದ ಕಾವ್ಯವೂ ಶೋಭಿಸುತ್ತವೆ. ಅಂತೆಯೇ ವಿಷಯವಾಸನೆಗಳಿಲ್ಲದಿದ್ದರೆ ಮನಸ್ಸಿಗೆ ಒಂದು ಕಾಂತಿಯುಂಟು.''

ಹೊಳೆ-ಕೆರೆಗಳಲ್ಲಿ ತುಂಬಿದ ನೀರು ಸ್ವಚ್ಛವಾಗಿದ್ದರೆ ನೋಡಲು ಸೊಗಸು. ತಿಳಿನೀರಿಗಿರುವ ಸೌಂದರ್ಯವು ಸಹಜವಾದದ್ದು. ಸ್ನಾನಪಾನಗಳಿಗೆ ಯೋಗ್ಯವಾದ ನೀರು ಎಲ್ಲರಿಗೂ ಪ್ರಿಯವೇ. ವಾಲ್ಮೀಕಿಮುನಿಗಳು ಶಿಷ್ಯನೊಡನೆ ತಮಸಾನದಿಗೆ ಹೋದಾಗ ನದಿಯ ತಿಳಿನೀರನ್ನು ನೋಡಿ ಹರ್ಷದಿಂದ ಹೇಳುತ್ತಾರೆ:

**ಅಕರ್ದಮಮಿದಂ ತೀರ್ಥಂ ಭರದ್ವಾಜ ನಿಶಾಮಯ।**
**ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋ ಯಥಾ॥**

— ವಾಲ್ಮೀಕಿರಾಮಾಯಣ

''ಭರದ್ವಾಜ, ಕೆಸರಿಲ್ಲದ ಈ ನೀರನ್ನು ನೋಡು. ಈ ತಿಳಿನೀರು ಸತ್ಪುರುಷರ ಮನಸ್ಸಿನಂತೆ ರಮಣೀಯವಾಗಿದೆ!''

ಮೇಲ್ಕಂಡ ಸೂಕ್ತಿಯಲ್ಲಿರುವ ''ಮಾನಸಂ ವಿಷಯೈರ್ವಿನಾ'' ಎಂಬ ವಚನದ ವ್ಯಾಖ್ಯಾನವೂ ಇದರಲ್ಲಿ ಸೇರಿಹೋಗಿದೆ. ಕ್ರೋಧ, ದ್ವೇಷ-ಮುಂತಾದವು ಅಂತರಂಗದ ಕೊಳೆ. ಕೊಳೆಯಿಲ್ಲದಿದ್ದರೆ ಮನಸ್ಸಿಗೊಂದು ಕಾಂತಿ. ನೈರ್ಮಲ್ಯವೇ ಸೌಂದರ್ಯ

ವೆಂದು ಇದರಿಂದ ಸಿದ್ಧವಾಗುತ್ತದೆ. ಸ್ವಚ್ಛವಾಗಿಟ್ಟಿರುವ ಮನೆಗೆ ಬಣ್ಣಬಣ್ಣದ ಪಟಗಳ ಅಲಂಕಾರ ಬೇಕಿಲ್ಲ.

ಖ, ಛ - ಮುಂತಾದ ಮಹಾಪ್ರಾಣಗಳೂ ಪ್ರ, ಕ್ಷ - ಮುಂತಾದ ಕೆಲವು ಒತ್ತಕ್ಷರಗಳೂ ಕರ್ಕಶವರ್ಣಗಳೆಂದೂ ಅವುಗಳಿಲ್ಲದಿರುವುದೇ ಕಾವ್ಯಕ್ಕೊಂದು ಸೌಂದರ್ಯವನ್ನು ತರುವುದೆಂದೂ ಆಲಂಕಾರಿಕರ ಹೇಳಿಕೆ. ಸಹೃದಯರ ಅನುಭವವೂ ಹಾಗೆಯೇ ಇದೆ. ಕಾವ್ಯದಲ್ಲಿ ಪದಲಾಲಿತ್ಯವು ಮುಖ್ಯವಾದದ್ದು. ಆದರೆ ವೀರ, ರೌದ್ರ, ಬೀಭತ್ಸಗಳನ್ನು ಪ್ರತಿಪಾದಿಸುವಾಗ ಕರ್ಕಶವರ್ಣಗಳಿರಬೇಕೆಂದೂ ಹೇಳಿದ್ದಾರೆ. ಇದು ಶಬ್ದದ ಕಾರ್ಕಶ್ಯವಾಯಿತು. ಅರ್ಥದ ಕಾರ್ಕಶ್ಯವೆಂಬುದಿನ್ನೊಂದುಂಟು ! ಕವಿತೆಯು ಅರ್ಥವಾಗದಿರುವುದೇ ಈ ಕಾರ್ಕಶ್ಯ. ಎಷ್ಟೋ ನವ್ಯ ಕವಿತೆಗಳಲ್ಲಿ ಪ್ರತಿಯೊಂದು ಪದದ ಅರ್ಥವೂ ತಿಳಿಯುತ್ತದೆ; ವಾಕ್ಯದ ಅಭಿಪ್ರಾಯವು ಮಾತ್ರ ತಿಳಿಯುವುದಿಲ್ಲ!

'ಸದಃ ಖಲಜನೈರ್ವಿನಾ' ಎಂಬುದು ಪ್ರಕೃತವಾದದ್ದು ಈಗ. ಉಳಿದ ಮೂರನ್ನು ದೃಷ್ಟಾಂತವನ್ನಾಗಿ ತೆಗೆದುಕೊಳ್ಳಬಹುದು. ಖಳಜನರಿಲ್ಲದಿದ್ದರೆ ಸಭೆ ಶೋಭಿಸುತ್ತದೆಯಂತೆ. ನಮ್ಮ ವಿಧಾನಸಭೆಗಳೂ ಸಂಸತ್ತೂ ಹೇಗೆ ಶೋಭಿಸುತ್ತಿವೆಯೆಂಬುದನ್ನು ಊಹಿಸಿಕೊಳ್ಳಬಹುದು. ದೂರದರ್ಶನದಲ್ಲಿ ನೋಡಲೂಬಹುದು! ''ನ ಸಾ ಸಭಾ ಯತ್ರ ನ ಸಂತಿ ವೃದ್ಧಾಃ'' - ಎಲ್ಲಿ ಜ್ಞಾನವೃದ್ಧರೂ ಸತ್ಯ-ಧರ್ಮಗಳನ್ನು ಪಾಲಿಸುವ ಸದಸ್ಯರೂ ವಿವೇಚನಾಶೀಲರೂ ಇಲ್ಲವೋ ಅದು ಸಭೆಯೇ ಅಲ್ಲವೆಂದು ವೇದವ್ಯಾಸವಚನ. ಆ ಜನರಿಗೆ ಸಭ್ಯವಾಗಿ ವರ್ತಿಸಿ ಗಂಭೀರವಾಗಿ ಚರ್ಚೆ ಮಾಡಲು ಇಚ್ಛೆಯೇ ಇಲ್ಲವಲ್ಲ. ಕೆರೆಯ ಕೊಳೆ, ಕರ್ಣಕಠೋರವಾದ ಮಾತು, ಕ್ರೋಧ-ದ್ವೇಷಗಳ ಮೆರೆತ - ಈ ಮೂರನ್ನೂ ಒಂದೆಡೆಯಲ್ಲಿ ಕಾಣಬಹುದು.

**ಆದಿತ್ಯಸ್ಯೋದಯಸ್ತಾತ ತಾಂಬೂಲಂ ಭಾರತೀ ಕಥಾ ।**
**ಇಷ್ಟಾ ಭಾರ್ಯಾ ಸುಮಿತ್ರಂ ಚ ಅಪೂರ್ವಾಣಿ ದಿನೇ ದಿನೇ ॥ ೩೧ ॥**

— *ಪಂಚತಂತ್ರ, ಮಿತ್ರಪ್ರಾಪ್ತಿ - ೧೮*

''ಸೂರ್ಯೋದಯ, ತಾಂಬೂಲ, ಭಾರತದ ಕಥೆ, ಪ್ರಿಯಳಾದ ಮಡದಿ, ಒಳ್ಳೆಯ ಸ್ನೇಹಿತ - ಇವೆಲ್ಲವೂ ದಿನದಿನವೂ ಹೊಸದಾಗಿಯೇ ತೋರುತ್ತವೆ.''

ಆಕರ್ಷಕವಾದದ್ದು ಹೊಸದು. ಈ ಸೃಷ್ಟಿಯಲ್ಲಿ ಕೆಲವು ವಸ್ತುಗಳು ಜನರನ್ನು ವಿಶೇಷವಾಗಿ ಆಕರ್ಷಿಸುತ್ತವೆ - ಮನಸ್ಸನ್ನು ತಮ್ಮೆಡೆಗೆ ಸೆಳೆಯುತ್ತವೆ. ಅವನ್ನು ಎಷ್ಟು ನೋಡಿದರೂ ಎಷ್ಟು ಕೇಳಿದರೂ ತೃಪ್ತಿಯೇ ಆಗುವುದಿಲ್ಲ; ಮತ್ತೆ ಮತ್ತೆ ಬೇಕೆನಿಸುತ್ತದೆ. ಅವುಗಳ ಈ ಆಕರ್ಷಕ ಗುಣವೇ ಸೌಂದರ್ಯ. ಸೌಂದರ್ಯವುಳ್ಳದ್ದು ಸುಂದರ. 'ಸು ಉನತ್ತೀತಿ ಸುಂದರಂ' ಎಂದು ಈ ಶಬ್ದದ ವ್ಯುತ್ಪತ್ತಿ. ಚೆನ್ನಾಗಿ ಒದ್ದೆ ಮಾಡುತ್ತದೆ - ಕರಗಿಸಿ ಮೆದು ಮಾಡುತ್ತದೆ - ಎಂದರ್ಥ. ಮನಸ್ಸಿಗೆ ಆನಂದಾತಿಶಯವನ್ನು ಉಂಟುಮಾಡತಕ್ಕದ್ದು ಸುಂದರವೆಂದೂ ಅದು ಚಿತ್ತವನ್ನು ದ್ರವೀಕರಿಸುತ್ತದೆಯೆಂದೂ ಅದೇ ಚಿತ್ತದ್ರುತಿಯೆಂದೂ ಆಲಂಕಾರಿಕರ ಮತ.

ಕರಗಿದ ಮೇಣ, ತಾಮ್ರ ಮೊದಲಾದ್ದನ್ನು ಅಚ್ಚಿನಲ್ಲಿ ಎರಕ ಹೊಯ್ದಾಗ, ಅದು ಅಚ್ಚಿನ ಆಕಾರವನ್ನೇ ತಳೆದುಬಿಡುತ್ತದೆ. ಹಾಗೆ ಮನಸ್ಸು ತನಗೆ ಮೆಚ್ಚಾದ ವಸ್ತುವನ್ನು ಕಂಡಾಗ, ಕೇಳಿದಾಗ ಅದರ ಆಕಾರವನ್ನೇ ತಳೆದು ನಿಂತುಬಿಡುತ್ತದೆ. ತನ್ಮಯೀಭಾವವೆಂದರೂ ಇದೇ. ವಸ್ತುಸೌಂದರ್ಯವೇ ಇದಕ್ಕೆ ಕಾರಣ. ಮಹಾಕವಿ ಮಾಘನು ತನ್ನ 'ಶಿಶುಪಾಲವಧ' ಕಾವ್ಯದಲ್ಲಿ ಹೇಳುತ್ತಾನೆ :

**ಕ್ಷಣೇ ಕ್ಷಣೇ ಯನ್ನವತಾಮುಪೈತಿ**
**ತದೇವ ರೂಪಂ ರಮಣೀಯತಾಯಾಃ ॥**

''ಒಂದೊಂದು ಕ್ಷಣದಲ್ಲಿಯೂ ಯಾವುದು ಹೊಸಹೊಸದಾಗಿ ಭಾಸವಾಗುತ್ತದೆಯೋ ಅದೇ ರಮಣೀಯತೆಯ ಸ್ವರೂಪ.'' ರಮಣೀಯತೆ, ಸೌಂದರ್ಯ - ಇವೆರಡೂ ಒಂದೇ. ಯಾವುದನ್ನು ನೋಡಿ ತೃಪ್ತಿಯೇ ಆಗುವುದಿಲ್ಲವೋ ಅಂತಹ ವಸ್ತುವನ್ನು 'ಆಸೇಚನಕ'ವೆಂದು 'ಅಮರಕೋಶ' ಹೇಳುತ್ತದೆ -

**ತದಾಸೇಚನಕಂ ತೃಪ್ತೇರ್ನಾಸ್ತ್ಯಂತೋ ಯಸ್ಯ ದರ್ಶನಾತ್ ॥**

ಸೂರ್ಯೋದಯ ಮುಂತಾದವುಗಳಲ್ಲಿ ಇಂತಹ ರಮಣೀಯತೆ ಇದೆಯೆಂದು ಈ ಶ್ಲೋಕದ ಅಭಿಪ್ರಾಯ. ಸೂರ್ಯಾಸ್ತ, ಪೂರ್ಣಚಂದ್ರ, ಹಸಿರು ತುಂಬಿದ ಹುಲ್ಲುಗಾವಲು, ಉದ್ಯಾನವನ, ಜಲಪಾತ - ಮುಂತಾದವುಗಳಿಗೆಲ್ಲ ಸೂರ್ಯೋದಯವೆಂಬುದು ಉಪಲಕ್ಷಣ. ತಾಂಬೂಲದಂತೆ ಬೀಡಿ ಸಿಗರೇಟು ಮೊದಲಾದ ಚಟದ ವಸ್ತುಗಳನ್ನೂ ಗ್ರಹಿಸಬಹುದಷ್ಟೆ. ಭಾರತಕಥೆಯೆಂದಿರುವುದು ಉತ್ತಮ ಕಾವ್ಯಗಳಿಗೆ ಉಪಲಕ್ಷಣ.

ಇವೆಲ್ಲವನ್ನೂ ಪ್ರಕೃತಿಯು ಒದಗಿಸಿಕೊಟ್ಟಿದೆ. ಇದನ್ನು ಕಾಣುವ ಕಣ್ಣು ಬೇಕು. ಅಂತಹ ಕಣ್ಣಿದ್ದವನು ಭಾಗ್ಯಶಾಲಿ. ಇಲ್ಲದವನು ಭಾಗ್ಯಹೀನ. ಡಾ॥ ಡಿ.ವಿ.ಜಿ.ಯವರು ಹೇಳುತ್ತಾರೆ:

**ಬಡವನಾರ್? ಮಡದಿಯೊಲವಿನ ಸವಿಯನರಿಯದನು**
**ಹುಡುಗರಾಟದಿ ಬೆರೆತು ನಗಲರಿಯದವನು ।**
**ಉಡುರಾಜನೋಲಗದಿ ಕುಳಿತು ಮೈಮರೆಯದನು**
**ಬಡಮನಸೆ ಬಡತನವೊ - ಮರುಳ ಮುನಿಯ ॥**

**ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಕ್ಷಿತೌ ।**
**ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥ ೩೨ ॥**

— *ಮನುಸ್ಮೃತಿ, ೪-೨೪೧*

"ಸತ್ತಮೇಲೆ ಈ ಶರೀರವನ್ನು ಕಟ್ಟಿಗೆ, ಮಣ್ಣುಹೆಂಟೆಗೆ ಸಮವೆಂದು ಭಾವಿಸಿ ಬಂಧುಗಳೆಲ್ಲರೂ ಅದನ್ನು ಶ್ಮಶಾನಭೂಮಿಯಲ್ಲಿ ವಿಸರ್ಜಿಸಿ ವಿಮುಖರಾಗಿ ಹೊರಟುಹೋಗುತ್ತಾರೆ. ಧರ್ಮವು ಮಾತ್ರ ಸತ್ತವನನ್ನು ಹಿಂಬಾಲಿಸಿ ಬರುತ್ತದೆ."

ಪಾಂಡವರು ರಾಜ್ಯಾಧಿಕಾರವನ್ನು ತ್ಯಜಿಸಿ ಮಹಾಪ್ರಸ್ಥಾನಕ್ಕೆ ಹೊರಟಾಗ ಅವರ ಹಿಂದೆಯೇ ನಾಯಿಯೊಂದು ಬಂದಿತೆಂದು ಮಹಾಭಾರತದಲ್ಲಿದೆ. ಆ ನಾಯಿಯೇ ಧರ್ಮಪುರುಷನಾಗಿದ್ದನು. ಮೇಲ್ಕಂಡ ಶ್ಲೋಕದ ಪ್ರತಿಧ್ವನಿ ಅದು. ಧರ್ಮನಿಷ್ಠ ನೆನಿಸಿದ ಯುಧಿಷ್ಠಿರನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ದಾರಿಯಲ್ಲಿ ಕುಸಿದು ಬಿದ್ದರು. ಭೀಮಾರ್ಜುನರಿಗೆ ಸಹ ನಡೆಯಲೂ ಕಾಲಿನಲ್ಲಿ ಶಕ್ತಿ ಇರಲಿಲ್ಲ. ಅವರ ಪರಾಕ್ರಮ ಕೊನೆಗೊಂಡಿತು. ಯುಧಿಷ್ಠಿರನು ಮುಂದೆ ಹೋಗುತ್ತಲೇ ಇದ್ದನು. ನಾಯಿ ಹಿಂಬಾಲಿಸಿ ಬಂದಿತ್ತು.

ಇಂತಹ ನೂರಾರು ಉದಾಹರಣೆಗಳು ಕಣ್ಣುಮುಂದಿದ್ದರೂ ಜನತೆಗೆ 'ಧರ್ಮ, ನೀತಿ, ನ್ಯಾಯ' ಎನ್ನುವುದು ಅದೇಕೋ ಹಿಡಿಸುವುದಿಲ್ಲ. ಅದು ಬಾಯಿಯಲ್ಲಿ ಉಳಿಯುತ್ತದೆಯೇ ಹೊರತು ಗಂಟಲಲ್ಲಿ ಇಳಿಯುವುದಿಲ್ಲ, ಕೈ ಕಾಲುಗಳವರೆಗೆ ಹರಿಯುವುದಿಲ್ಲ. ''ಅರ್ಥೋಽಸ್ತು ನಃ ಕೇವಲಂ'' ಎಂಬುದೇ ಅನುಕರಣೀಯವಾದ ಪರಮಾದರ್ಶವಾಗಿಬಿಡುತ್ತದೆ. ವ್ಯಾಸಮುನಿಗಳು ಕೌರವರಿಗೆ ಒಂದಲ್ಲ-ಹತ್ತು ಸಲ ನೀತಿಯನ್ನು ಉಪದೇಶಿಸಿದರು. ಧರ್ಮದಿಂದಲೇ ಅರ್ಥ-ಕಾಮಗಳನ್ನು ಪಡೆಯಬೇಕೆಂದೂ ಧರ್ಮಾರ್ಜಿತವಾದ ಧನವು ಸ್ಥಿರವಾಗಿ ನಿಲ್ಲುವುದೆಂದೂ ಉಪದೇಶಿಸಿದರು. ದುರ್ಯೋಧನನು ಅವರ ಬೋಧೆಯನ್ನು ಕಿವಿಯ ಮೇಲೂ ಹಾಕಿಕೊಳ್ಳಲಿಲ್ಲ. ದಾಯಾದಮಾತ್ಸರ್ಯವು ಪ್ರಬಲವಾಗಿ ನಿಂತು ಕ್ಷತ್ರಿಯಕುಲಕ್ಕೆ ಮಾರಕವಾಗಿಬಿಟ್ಟಿತು. ವ್ಯಾಸರು 'ನ ಚ ಕಶ್ಚಿತ್ ಶೃಣೋತಿ ಮೇ - ಒಬ್ಬನೂ ನನ್ನ ಮಾತನ್ನು ಕೇಳುವುದಿಲ್ಲ'' ಎಂದು ಉದ್ಗರಿಸಿದರು.

ದುರ್ಯೋಧನನು ''ನಾನು ಹೋಗುತ್ತಿರುವುದು ಅಧರ್ಮದ ದಾರಿಯಲ್ಲಿ ಎಂಬುದು ನನಗೆ ಗೊತ್ತಿದೆ. ಆದರೂ ಅದನ್ನು ಬಿಡಲು ಮನಸ್ಸಾಗುವುದಿಲ್ಲ - ಜಾನಾಮ್ಯಧರ್ಮಂ, ನ ಚ ಮೇ ನಿವೃತ್ತಿಃ'' ಎಂದು ಹೇಳಿದ್ದಾನೆ. ಅವನನ್ನು ಹುರಿದುಂಬಿಸುತ್ತಿದ್ದ ಕರ್ಣನು ''ಯುದ್ಧದಲ್ಲಿ ನಮಗೆ ಜಯವಾಗುವುದಿಲ್ಲ. ಅರ್ಜುನನ ಗಾಂಡೀವಧನುಸ್ಸಿನ ಜ್ವಾಲೆಯಲ್ಲಿ ನಾವೆಲ್ಲರೂ ಸಿಕ್ಕಿ ಸಾಯುತ್ತೇವೆ.

ಇದರಲ್ಲಿ ಸಂದೇಹವೇ ಇಲ್ಲ - ಗಾಂಡೀವಾಗ್ನಿಂ ಪ್ರವೇಕ್ಷ್ಯಾಮಃ ಇತಿ ಮೇ ನಾಸ್ತಿ ಸಂಶಯಃ'' ಎಂದು ಸ್ಪಷ್ಟವಾಗಿ ನುಡಿದಿದ್ದಾನೆ. ಆದರೂ ತನ್ನ ಹಟವನ್ನು ತ್ಯಜಿಸಲಿಲ್ಲ.

ಮಾನವನ ದುರ್ಮಾರ್ಗಪ್ರವೃತ್ತಿಗೆ ನಿಮಿತ್ತವೇನು? ಅಹಂಕಾರ-ಮಮಕಾರ ಗಳ ಪ್ರಾಬಲ್ಯವೇ ನಿಮಿತ್ತವಲ್ಲದೆ ಇನ್ನೊಂದಿರಲಾರದು. ನಾನು, ನಾನು (ಅಹಂ, ಅಹಂ) ಎಂಬ ಅಹಂಕಾರದಿಂದ ನನ್ನ, ನನ್ನ (ಮೇ, ಮೇ) ಎಂಬ ಮಮಕಾರ ಹುಟ್ಟುತ್ತದೆ. ಮನುಷ್ಯನು ಮೇ ಮೇ ಎಂದು ಮೇಕೆಯಂತೆ ಕಿರಿಚುತ್ತಲೇ ಕಟುಕನಾಗಿ ಬರುವ ಯಮನ ದಂಡಕ್ಕೆ ಬಲಿಯಾಗುತ್ತಾನೆ. ಯಾರಿಗಾಗಿ 'ಮೇ, ಮೇ' ಎನ್ನುತ್ತಿದ್ದನೋ ಆ ಹೆಂಡತಿ, ಮಕ್ಕಳು, ಬಾಂಧವರೆಲ್ಲರೂ ಸತ್ತವನನ್ನು ಒಣ ಕಟ್ಟಿಗೆಯೆಂದು ಭಾವಿಸಿ ಬೆಂಕಿಗೆ ಹಾಕಿ ಅಥವಾ ಮಣ್ಣುಹೆಂಟೆಯೋ ಎಂಬಂತೆ ಮಣ್ಣುಪಾಲು ಮಾಡಿ, ಹಿಂತಿರುಗಿ ನೋಡದೆ ಹೊರಟುಹೋಗುತ್ತಾರೆ.

**ಋಣಾನಿ ತ್ರೀಣ್ಯಪಾಕೃತ್ಯ ಮನೋ ಮೋಕ್ಷೇ ನಿವೇಶಯೇತ್ ।**
**ಅನಪಾಕೃತ್ಯ ಮೋಕ್ಷಂ ತು ಸೇವಮಾನೋ ವ್ರಜತ್ಯಧಃ ॥ ೩೩ ॥**

— ಮನುಸ್ಮೃತಿ, ೬-೩೫

''ಮೂರು ಋಣಗಳನ್ನು ತೀರಿಸಿದ ಮೇಲೆ ಮನಸ್ಸನ್ನು ಮೋಕ್ಷದ ಕಡೆಗೆ ತಿರುಗಿಸಬೇಕು. ಈ ಋಣಗಳನ್ನು ತೀರಿಸದೆ ಮೋಕ್ಷಮಾರ್ಗವನ್ನಾಶ್ರಯಿ ಸತಕ್ಕವನು ಪತಿತನಾಗುತ್ತಾನೆ.''

ಮಾನವಜನ್ಮದ ಗುರಿ ಮೋಕ್ಷವೇ ಹೌದು. ಅದೇ ಪರಮಪುರುಷಾರ್ಥವೆಂದು ನಮ್ಮ ಧರ್ಮಗ್ರಂಥಗಳು ಹೇಳುತ್ತವೆ. ಮೋಕ್ಷಮಾರ್ಗವೆಂದರೆ ಇಲ್ಲಿ ಸಂನ್ಯಾಸಿಯಾಗುವುದು. ಜನರೆಲ್ಲ ಸಂನ್ಯಾಸಿಗಳಾಗುತ್ತಹೋದರೆ ಜಗದ್ವ್ಯವಹಾರ ನಡೆಯುವುದೆಂತು? ಅಲ್ಲದೆ ಸಂನ್ಯಾಸಿಯಾಗಲು ತಕ್ಕ ಯೋಗ್ಯತೆ ಬೇಕು; ಎಲ್ಲ ಬಯಕೆಗಳನ್ನೂ ತೊರೆದ ವೈರಾಗ್ಯವಿರಬೇಕು. ಮೂರು ಋಣಗಳನ್ನು ತೀರಿಸಿದ ಮೇಲೆ ವೈರಾಗ್ಯ ಹುಟ್ಟಿದರೆ ಸಂನ್ಯಾಸಿಯಾಗಬಹುದು.

ದೇವಋಣ, ಋಷಿಋಣ, ಪಿತೃಋಣ-ಇವು ಮೂರು ಪ್ರತಿಯೊಬ್ಬನೂ ಹುಟ್ಟುವಾಗಲೇ ಕಟ್ಟಿಕೊಂಡು ಬಂದ ಸಾಲಗಳು. ಹುಟ್ಟುವಾಗಲೇ ನಮಗೆ ಹಾಲು, ಹಾಸಿಗೆ, ನೀರು, ಗಾಳಿ, ಬೆಳಕು, ಆರೈಕೆ ಮಾಡತಕ್ಕ ಜನ - ಇವೆಲ್ಲವೂ ಸಿದ್ಧವಾಗಿರುತ್ತವೆ. ಮುಂದೆ ಬೆಳೆಯುವಾಗ ಇಂತಹವು ಇನ್ನೆಷ್ಟೋ! ಇವೆಲ್ಲವನ್ನೂ ಒದಗಿಸಿದವನು ದೇವರೆಂದು ಹಿರಿಯರ ನಂಬಿಕೆ. ಇದು ದೇವಋಣ. ಎಲ್ಲವೂ ಅವನ ಸೃಷ್ಟಿಯೇ ಆಗಿರುವಾಗ ಯಾವುದನ್ನು ಅವನಿಗೆ ಕೊಟ್ಟು ಸಾಲವನ್ನು ತೀರಿಸಬಲ್ಲೆವು? ಅದಕ್ಕಾಗಿ ಪೂಜೆ, ಯಜ್ಞ-ಮುಂತಾದ ಕಲ್ಪನೆ; ದೈವಭಕ್ತಿ, ಸಚ್ಚಾರಿತ್ರ-ಇವೆರಡು ಕಾರ್ಯಗಳು. ದೈವಭಕ್ತಿ ಇಲ್ಲದೆ ಧರ್ಮದಲ್ಲಿ ಶ್ರದ್ಧೆ ಹುಟ್ಟದು. ಧರ್ಮಶ್ರದ್ಧೆ ಇಲ್ಲದೆ ಸಚ್ಚಾರಿತ್ರವು ಮೂಡದು.

ವೇದ, ವೇದಾಂತಾದಿದರ್ಶನಗಳು, ರಾಮಾಯಣ, ಮಹಾಭಾರತ ಮುಂತಾದ ವುಗಳಿಂದ ನಾವು ಪಡೆದ ಪ್ರಯೋಜನ ಅಪಾರವಾದದ್ದು. ಪ್ರತಿಫಲದ ಬಯಕೆಯೂ ಇಲ್ಲದೆ ಮಾನವಜಾತಿಯ ಒಳಿತಿಗಾಗಿ, ಜ್ಞಾನಾಭಿವೃದ್ಧಿಗಾಗಿ ಅವನ್ನು ನಮಗೆ ನೀಡಿದವರು ಋಷಿಗಳು. ಪಶುಜಾತಿಯಿಂದ ಮಾನವನನ್ನು ಬೇರ್ಪಡಿಸಿ ಅವನಲ್ಲೊಂದು ಹೆಚ್ಚುಗಾರಿಕೆಯನ್ನು ತುಂಬಿದವರು ಜ್ಞಾನಪ್ರದರಾದ ಋಷಿಗಳು. ವಿಜ್ಞಾನಿಗಳೂ ಒಂದು ದೃಷ್ಟಿಯಲ್ಲಿ ಋಷಿಗಳೇ. ಇವರೆಲ್ಲರಿಂದ ಉಪಕಾರವನ್ನು ಪಡೆದ ಮನುಷ್ಯನು ಇವರೆಲ್ಲರಿಗೂ ಋಣಿಯಾಗಿದ್ದಾನೆ. ಈ ಸಾಲವನ್ನು ತೀರಿಸುವುದು ಹೇಗೆ? ಈ ವಿದ್ಯೆಯನ್ನು ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ನೀಡುವುದೇ ಸಾಲತೀರಿಸುವ ವಿಧಾನ. 'ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ' ಎಂಬ ಉಪನಿಷತ್ತಿನ ಆದೇಶವನ್ನು ಪಾಲಿಸಿದರೆ ಋಷಿಋಣದಿಂದ ವಿಮೋಚನೆ ದೊರೆಯುತ್ತದೆ.

ಮೂರನೆಯದು ಪಿತೃಋಣ. ಮದುವೆಯಾಗಿ ಸಂತಾನವನ್ನು ಬೆಳೆಸುವುದರಿಂದ ಈ ಋಣವು ತೀರುವುದೆಂದು ಮನು ಹೇಳಿದ್ದಾನೆ. ಇದನ್ನು ಲಘುವಾಗಿ ಭಾವಿಸತಕ್ಕದ್ದಲ್ಲ. ಸಂತಾನಾಭಿವೃದ್ಧಿಯು ಪಶುಪಕ್ಷಿಗಳಲ್ಲಿಯೂ ಗಿಡಮರಬಳ್ಳಿ

ಗಳಲ್ಲಿಯೂ ವ್ಯಾಪಿಸಿರುವ ಪ್ರಕೃತಿನಿಯಮ. ಮಾನವನಲ್ಲೊಂದು ವಿಶೇಷ ಉಂಟು. ವಿಧಿನಿಯಮಗಳಂತೆ ಮದುವೆಯಾಗಿಯೇ ಸಂತಾನವನ್ನು ಬೆಳೆಸತಕ್ಕದ್ದು. ಅದಿಲ್ಲದೆ ಪಶುವೃತ್ತಿಗೆ ಇಳಿದರೆ, ಅನೈತಿಕತೆಯು ತುಂಬಿ ಸಮಾಜವು ಅಲ್ಲೋಲಕಲ್ಲೋಲ ವಾದೀತು. ಆ ಅನರ್ಥವನ್ನು ತಪ್ಪಿಸಿ, ವಿಧಿಪೂರ್ವಕವಾಗಿ ಮದುವೆಯಾಗಬೇಕೆಂಬ ನಿರ್ಬಂಧವನ್ನು ಹೇರುವುದಕ್ಕಾಗಿ ಪಿತೃಋಣದ ಕಲ್ಪನೆ. ಇನ್ನೂ ಹಲವಾರು ಪ್ರಯೋಜನಗಳುಂಟು. ತಂದೆಯು ಕಲಿತ ವಿದ್ಯೆ ಸುಲಭವಾಗಿ ಮಕ್ಕಳಲ್ಲಿ ಫಲಿಸುತ್ತದೆ. ನೆಯ್ಗೆಯವರ ಮಗ ನೆಯ್ಗೆಯನ್ನೂ ಅಕ್ಕಸಾಲಿಗನ ಮಗ ಆಭರಣ ಮಾಡುವ ವೃತ್ತಿಯನ್ನೂ ಸುಲಭವಾಗಿ ಕಲಿತು ಮುಂದುವರಿಸುತ್ತಾರೆ. ಈ ಪ್ರಕಾರ ಎಲ್ಲ ವೃತ್ತಿಗಳೂ ಮುಂದಿನ ಪೀಳಿಗೆಗೆ ಸಂಕ್ರಾಂತವಾಗುತ್ತಹೋಗುವುದರಿಂದ ಸಮಾಜ ದಲ್ಲೊಂದು ಸಮತೋಲನ ಏರ್ಪಡುತ್ತದೆ.

ಈ ಮೂರು ಋಣಗಳು ಆಯಾ ವ್ಯಕ್ತಿಗೂ ಕುಟುಂಬಕ್ಕೂ ಸಮಾಜಕ್ಕೂ ಉತ್ಸಾಹಶಕ್ತಿಯನ್ನು ತುಂಬಿ ಜೀವನಶ್ರದ್ಧೆಯನ್ನು ಬೆಳೆಸತಕ್ಕವು; ತಾತ್ಕಾಲಿಕವಾಗಿ ಒಣವೈರಾಗ್ಯವನ್ನು ದೂರೀಕರಿಸಿ ಸಮಾಜದ ರಕ್ಷಣೆಗೂ ಸಮೃದ್ಧಿಗೂ ಅತ್ಯಾವಶ್ಯಕವಾದವು.

**ಶೀತವಾತಾತಪಕ್ಲೇಶಾನ್ ಸಹಂತೇ ಯೇ ಪರಾಶ್ರಿತಾಃ।**
**ತದಂಶೇನಾಪಿ ಮೇಧಾವೀ ತಪಸ್ತಪ್ತ್ವಾ ಸುಖೀ ಭವೇತ್ ॥ ೩೪ ॥**

— *ಹಿತೋಪದೇಶ, ಸುಹೃದ್ಭೇದ - ೧೮*

''ಜನರು ಸೇವೆಗಾಗಿ ಪರರನ್ನಾಶ್ರಯಿಸಿ ಚಳಿ-ಗಾಳಿ-ಬಿಸಿಲುಗಳಿಂದಾಗುವ ವಿವಿಧ ಕಷ್ಟಗಳನ್ನು ಅನುಭವಿಸುತ್ತಾರೆ. ಬುದ್ಧಿಶಾಲಿಯಾದವನು ಆ ಕಷ್ಟಗಳಲ್ಲಿ ಒಂದು ಅಂಶವನ್ನಾದರೂ ಸಹಿಸಿಕೊಂಡು ತಪಸ್ಸು ಮಾಡಿದರೆ ಸುಖಿಯಾಗಿರಬಹುದು!''

ಮನುಷ್ಯನು ಹೊಟ್ಟೆಪಾಡಿಗಾಗಿ ಯಾವುದಾದರೊಂದು ವೃತ್ತಿಯನ್ನು

ಆಶ್ರಯಿಸಬೇಕಾಗುತ್ತದೆ. ತನ್ನ ಯೋಗ್ಯತೆ-ಅರ್ಹತೆಗಳಿಗೆ ತಕ್ಕಂತೆ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಬೇಕು. ಅವುಗಳಲ್ಲಿ ಸೇವಾವೃತ್ತಿ ಒಂದು ಬಗೆಯದು. ದಿನಗೂಲಿಯನ್ನೋ ಮಾಸಿಕವೇತನವನ್ನೋ ಪಡೆದು ಮಾಡಬೇಕಾದ ಕೆಲಸ ಅದು. ಒಡೆಯನ ಅಪ್ಪಣೆಯಂತೆ, ಅವನ ಇಚ್ಛೆಯಂತೆ ಸಲ್ಲಿಸಬೇಕಾದ ಸೇವೆ ಅದು. ಅವನು ಹೇಳಿದ ಹೊತ್ತಿಗೆ ಹೇಳಿದ ಸ್ಥಳಕ್ಕೆ ಹೋಗಿ ಕೆಲಸ ಮಾಡಬೇಕು. ನೆಲವನ್ನು ಅಗೆಯುವುದು, ಮರವನ್ನು ಕಡಿಯುವುದು, ಇಟ್ಟಿಗೆಯನ್ನು ಹೊರುವುದು, ಕಲ್ಲನ್ನು ಕೆತ್ತುವುದು - ಸುಲಭವಾದ ಕಾರ್ಯವೇನಲ್ಲ. ಚಳಿ, ಬಿಸಿಲುಗಳ ಲೆಕ್ಕವಿಲ್ಲದೆ ಶ್ರಮಿಸ ಬೇಕಾದದ್ದು ಕಷ್ಟದಾಯಕವೆಂಬುದು ಸ್ಪಷ್ಟ.

ಇನ್ನು ಗುಮಾಸ್ತ, ಉಪಾಧ್ಯಾಯ, ಬೇರೆ ಬೇರೆ ಅಧಿಕಾರ - ಇವೇನು ಸುಲಭವಾದವುಗಳೇನು? ನ್ಯಾಯಾಧಿಪತಿ, ಮಂತ್ರಿ, ಮುಖ್ಯಮಂತ್ರಿ - ಈ ಹುದ್ದೆಗಳೇನು ಸುಖದಾಯಕಗಳೆ? ಅನ್ಯರ ದೃಷ್ಟಿಯಲ್ಲಿ ಸಾಪೇಕ್ಷವಾಗಿ ಹಾಗೆನ್ನಿಸಬಹುದೇ ಹೊರತು ಅವೂ ಕ್ಲೇಶದಾಯಕಗಳೇ. ಜವಾಬ್ದಾರಿ, ಚಡಪಡಿಸುವುದು, ಮನೋವ್ಯಾಕುಲತೆ ಮುಂತಾದವು ಅವರಿಗೂ ತಪ್ಪಿದ್ದಲ್ಲ. ಕೃಷಿ, ವಾಣಿಜ್ಯ, ವಕಾಲತ್ತು - ಮುಂತಾದವು ಸ್ವತಂತ್ರ ವೃತ್ತಿಗಳೆಂದೂ ಆ ವೃತ್ತಿಯವರು ಸ್ವತಂತ್ರರಾದ್ದರಿಂದ ಪರಾಧೀನತೆಯ ಕಷ್ಟವಿಲ್ಲವೆಂದೂ ಕೆಲವರು ತಿಳಿದುಕೊಂಡಿದ್ದಾರೆ. ರೈತ, ವ್ಯಾಪಾರಿ, ವಕೀಲ ಮೊದಲಾದವರು ''ನಾವು ಸ್ವತಂತ್ರರು'' ಎಂದು ಹೇಳಿಕೊಳ್ಳುವುದುಂಟು. ಅದೊಂದು ಭ್ರಮೆಯೇ ಹೊರತು ಸತ್ಯವಲ್ಲ. ಅವರೆಲ್ಲರೂ ಪರಾಶ್ರಿತರೇ. ಅವರೆಲ್ಲರೂ ಗಿರಾಕಿಗಳಿಗೆ ಅಧೀನರೇ. ಆಹಾರಪದಾರ್ಥಗಳನ್ನು ಬೆಳೆಯುವುದೂ ಸುಲಭವಲ್ಲ. ಬೆಳೆದ ಮಾತ್ರದಿಂದ ಅವನ ಜೀವನವೂ ನಡೆಯದು. ಆ ಪದಾರ್ಥಗಳನ್ನು ಕೊಳ್ಳತಕ್ಕವರು ಬೇಕು. ವ್ಯಾಪಾರಿ, ವಕೀಲ, ವೈದ್ಯ ಇವರೆಲ್ಲರೂ ಪರಾಶ್ರಿತರೇ. ಗಿರಾಕಿಗಳ ಇಚ್ಛೆಯಂತೆ ಅವರಿಗೆ ಹಿತಕರವಾದ ಸೇವೆಯನ್ನು ಸಲ್ಲಿಸುತ್ತಿದ್ದರೆ ಮಾತ್ರ ಅವರ ಬದುಕು ಸಾಗುತ್ತದೆ. ಕಳ್ಳತನ, ದರೋಡೆಗಳೂ ಸಹ ಕಷ್ಟಕರವಾದವು, ಭಯಾನ್ವಿತವಾದವು.

ಹೀಗೆ ವಿಶ್ಲೇಷಣೆ ಮಾಡಿ ನೋಡಿದಾಗ, ಸುಭಾಷಿತಕಾರನಾದ ಭರ್ತೃಹರಿಯು ಹೇಳಿರುವ "ಸರ್ವಂ ವಸ್ತು ಭಯಾನ್ವಿತಂ ಭುವಿ ನೃಣಾಂ ವೈರಾಗ್ಯಮೇವಾಭಯಂ" - "ಜಗತ್ತಿನಲ್ಲಿ ಸಮಸ್ತ ವಸ್ತುವೂ ಭಯಾನ್ವಿತವಾದದ್ದು - ಕಷ್ಟದಾಯಕವಾದದ್ದು; ವೈರಾಗ್ಯವೊಂದೇ ಭಯವಿಲ್ಲದ್ದು" ಎಂಬ ಸೂಕ್ತಿಯ ಯಥಾರ್ಥತೆ ಅರಿವಿಗೆ ಬರುತ್ತದೆ. ಚಿತ್ತಶಾಂತಿಯೇ ವೈರಾಗ್ಯ. ಅದಕ್ಕೆ ಕಾರಣವಾದದ್ದು ತಪಸ್ಸು.

ತಪಸ್ಸಿಗಾಗಿ ಕಾಡಿಗೆ ಹೋಗಬೇಕಾದ್ದಿಲ್ಲ. ಪ್ರತಿದಿನ ಸ್ವಲ್ಪ ಹೊತ್ತಾದರೂ ದೇವತಾರ್ಚನೆ, ಅಧ್ಯಾತ್ಮಗ್ರಂಥಗಳ ಅವಲೋಕನ, ಧ್ಯಾನ - ಇವುಗಳಲ್ಲೊಂದು ಸಾಕು. ಎಲ್ಲ ಕಷ್ಟಗಳಿಂದಲೂ ಮನುಷ್ಯನನ್ನು ರಕ್ಷಿಸಬಲ್ಲದು.

**ಅನ್ಯಮಾಶ್ರಯತೇ ಲಕ್ಷ್ಮೀಸ್ತ್ವನ್ಯಮನ್ಯಂ ಚ ಮೇದಿನೀ ।**
**ಅನನ್ಯಗಾಮಿನೀ ಪುಂಸಾಂ ಕೀರ್ತಿರೇಕಾ ಪತಿವ್ರತಾ ॥ ೩೫॥**

— *ಸಮಯೋಚಿತಪದ್ಯಮಾಲಿಕಾ*

"ಲಕ್ಷ್ಮಿಯು ಒಬ್ಬನನ್ನು ಬಿಟ್ಟು ಇನ್ನೊಬ್ಬನ ಬಳಿಗೆ ಹೋಗಿ ಅವನನ್ನು ಆಶ್ರಯಿಸುತ್ತಾಳೆ. ಭೂಮಿಯೂ ಅಷ್ಟೆ, ಮತ್ತೊಬ್ಬನನ್ನು ಹುಡುಕುತ್ತ ಹೋಗುತ್ತಾಳೆ. ಆದರೆ ಕೀರ್ತಿಯು ಮಾತ್ರ ಹಾಗಲ್ಲ. ಯಾರನ್ನು ವರಿಸುತ್ತಾಳೋ ಅವನಲ್ಲಿಯೇ ಅನುರಕ್ತಳಾಗಿರುತ್ತಾಳೆ. ಅವಳೊಬ್ಬಳೇ ಪತಿವ್ರತೆ."

ಮನುಷ್ಯನು ಹೆಚ್ಚಾಗಿ ಪ್ರೀತಿಸುವುದು ಮೂವರನ್ನು: ಒಬ್ಬಳು ಲಕ್ಷ್ಮೀ, ಇನ್ನೊಬ್ಬಳು ಭೂದೇವಿ, ಮತ್ತೊಬ್ಬಳು ಕೀರ್ತಿ. ಮೂವರೂ ಸ್ತ್ರೀಯರೇ. ಲಕ್ಷ್ಮಿಯು ಚಂಚಲೆಯೆಂದು ಪ್ರಸಿದ್ಧವಾಗಿದೆ. ಐಶ್ವರ್ಯವು ಯಾರಲ್ಲಿ ಸ್ಥಿರವಾಗಿ ನಿಂತೀತು? ಚೋರಭಯ, ರಾಜಭಯ, ಶತ್ರುಭಯ - ಮುಂತಾದ ಭಯವು ತಪ್ಪಿದ್ದಲ್ಲ. ಅವಳು ಒಲಿದುಬಂದಾಗ ಅವಳನ್ನು ಪಾಲಿಸುವುದು ಕಷ್ಟ, ತೊರೆದುಹೋದಾಗ ವಿರಹದುಃಖ !

**ಸುಖಾತ್ತು ಯೋ ಯಾತಿ ನರೋ ದರಿದ್ರತಾಂ**
**ಮೃತಃ ಶರೀರೇಣ ಧೃತಃ ಸ ಜೀವತಿ ॥**

''ಐಶ್ವರ್ಯದ ಸುಖವು ಹೋಗಿ ಯಾವನು ದರಿದ್ರನಾಗುತ್ತಾನೋ, ಅವನು ಸತ್ತವನೇ! ದೇಹವು ಮಾತ್ರ ಉಳಿದಿರುತ್ತದೆ.'' ಯಾವ ಭಯದಿಂದ ತಪ್ಪಿಸಿಕೊಂಡರೂ ಯಮನ ಪಾಶದಿಂದ ತಪ್ಪಿಸಿಕೊಳ್ಳಲಾರ. ಸತ್ತ ಮೇಲೆ ಸರ್ವಶೂನ್ಯ. ಒಂದು ಬಿಡಿಗಾಸೂ ಅವನ ಜೊತೆಗೆ ಹೋಗದು.

ಹೈದರಾಬಾದ್ ನಿಜಾಮನ ಒಡವೆಗಳ ರಾಶಿಯನ್ನು ಈಚೆಗೆ ಪ್ರದರ್ಶನಕ್ಕೆ ಇಟ್ಟಿದ್ದರು. ಪ್ರೇಕ್ಷಕರು ಹೋಗಿ ನೋಡಿ ಆಶ್ಚರ್ಯಪಡಬಹುದು, ಸಂತೋಷಿಸಬಹುದು. ಆಮೇಲೆ ಹೊಟ್ಟೆಕಿಚ್ಚಿನಿಂದ ನೊಂದುಕೊಳ್ಳಬಹುದು! ಪ್ರೇಕ್ಷಕರಿಗೆ ಸಿಗುವುದಿಲ್ಲ, ನಿಜಾಮನಿಗೆ ದೊರೆಯುವುದಿಲ್ಲ. ಆತನ ಮೇದಿನಿಯೂ (ರಾಜ್ಯವೂ) ಅನ್ಯರ ಪಾಲಾಯಿತು; ಅವನ ಮಕ್ಕಳಿಗೂ ದೊರೆಯಲಿಲ್ಲ. ಈ ಭೂದೇವಿಯನ್ನು ಯಾರುಯಾರು ಎಷ್ಟೆಷ್ಟು ವರ್ಷ ಆಳಿ ತೊರೆದುಹೋದರೋ ಲೆಕ್ಕವಿಲ್ಲ. ಅವಳು ಬಂದಬಂದವರ ಜೊತೆ ಮೆರೆಯುತ್ತಲೇ ಇದ್ದಾಳೆ.

ಆದರೆ ಕೀರ್ತಿಯೊಬ್ಬಳು ಪತಿವ್ರತೆ. ಅವಳು ಒಲಿದು ಎಲ್ಲರಿಗೂ ಮಾಲೆಯನ್ನು ಹಾಕಳು. ಲಕ್ಷ್ಮಿಯನ್ನೊಲಿಸಬಹುದು, ಭೂಮಿಯನ್ನು ಒಲಿಸಬಹುದು. ಕೀರ್ತಿಯನ್ನು ಒಲಿಸುವುದು ಮಾತ್ರ ಕಠಿಣ. ಲಕ್ಷ್ಮಿಯಾಗಲಿ ಮೇದಿನಿಯಾಗಲಿ ಪಿತ್ರಾರ್ಜಿತವಾಗಿ ಮಗನಿಗೆ ಸುಲಭವಾಗಿ ಬಂದೀತು. ಕೀರ್ತಿಯು ಮಾತ್ರ ಪಿತ್ರಾರ್ಜಿತವಾಗುವುದೇ ಇಲ್ಲ. ಅದು ಯಾವಾಗಲೂ ಸ್ವಾರ್ಜಿತ : ವಿದ್ಯೆ ಇದ್ದಂತೆ. ವಿದ್ಯೆಯಿಂದ ಕೃತಿ, ಕೃತಿಯಿಂದ ಕೀರ್ತಿ. ವ್ಯಾಸ, ವಾಲ್ಮೀಕಿ, ಕಾಳಿದಾಸ, ಪಂಪ,ರನ್ನ, ಗದುಗಿನ ನಾರಣಪ್ಪ ಮುಂತಾದ ಮಹಾಕವಿಗಳ ಕೃತಿಗಳು ಅವರಿಗೆ ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಟ್ಟಿವೆ. ಕವಿಗಳು ಕಣ್ಮುಚ್ಚಿದರೂ ಕೃತಿಗಳನ್ನೋದಿದ ಜನರ ಸ್ತುತಿ ಇದ್ದೇ ಇರುತ್ತದೆ. ಕಾವ್ಯದ ಪ್ರಯೋಜನವನ್ನು ಹೇಳುವಾಗ 'ಕಾವ್ಯಂ ಯಶಸೇಽರ್ಥಕೃತೇ....' ಎಂಬಲ್ಲಿ ಯಶಸ್ಸನ್ನು ಮೊದಲು ಹೇಳಿರುವುದು ಯಶಸ್ಸಿನ ಪ್ರಾಧಾನ್ಯವನ್ನು ಕೀರ್ತಿಸುವುದಕ್ಕಾಗಿ. ಕೃತಿ

ಇರುವವರೆಗೆ ಕೀರ್ತಿ ಇದ್ದೇ ಇರುತ್ತದೆ.

**ಅಸಂಕಲ್ಪಾಜ್ಜಯೇತ್ ಕಾಮಂ ಕ್ರೋಧಂ ಕಾಮವಿವರ್ಜನಾತ್ ।**
**ಅರ್ಥಾನರ್ಥೇಕ್ಷಯಾ ಲೋಭಂ ಭಯಂ ತತ್ತ್ವವಿಮರ್ಶನಾತ್ ॥ ೩೬ ॥**

— *ಭಾಗವತ, ೭-೧೫-೨೨*

''ಭೋಗವಿಷಯಗಳ ಚಿಂತನೆಯನ್ನು ಬಿಡುವುದರಿಂದ ಕಾಮವನ್ನು ಗೆಲ್ಲಬೇಕು. ಹೀಗೆ ಕಾಮವನ್ನು ವರ್ಜಿಸುವುದರಿಂದ ಸಿಟ್ಟನ್ನು ಜಯಿಸಬಹುದು. ಹಣದಿಂದಾಗುವ ಅನರ್ಥಗಳನ್ನು ಪರ್ಯಾಲೋಚಿಸಿ ಲೋಭವನ್ನೂ ಪರಮಾರ್ಥವನ್ನೂ ವಿಮರ್ಶಿಸಿ ಭಯವನ್ನು ಜಯಿಸಬೇಕು.''

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ - ಈ ಆರನ್ನು ಅರಿಷಡ್ವರ್ಗಗಳೆಂದು ಕರೆಯುವುದುಂಟು. ಇವು ಮನುಷ್ಯನಲ್ಲಿರಬಾರದ ಕೆಟ್ಟ ಗುಣಗಳು; ಮನುಷ್ಯ ಅಭ್ಯುದಯಕ್ಕೆ ವೈರಿಗಳು. ಇವುಗಳಲ್ಲಿ ಮೊದಲನೆಯ ಮೂರು ಪ್ರಬಲವಾದವು. ಇವನ್ನು ಗೆದ್ದರೆ ಉಳಿದ ಮೂರು ತಾವಾಗಿ ಶಾಂತವಾಗುತ್ತವೆ. ಭಯದ ಸ್ವರೂಪ ಬೇರೆಯದು. ಇದು ಮನುಷ್ಯನ ಕಾರ್ಯೋತ್ಸಾಹವನ್ನು ಭಂಗಪಡಿಸಿ, ಆತನನ್ನು ಹೇಡಿಯನ್ನಾಗಿ ಮಾಡುವ ಸ್ವಭಾವ ಉಳ್ಳದ್ದು. ಆದ್ದರಿಂದ ಈ ನಾಲ್ಕನ್ನು ಗೆಲ್ಲುವ ಮಾರ್ಗವನ್ನು ನಾರದರು ಯುಧಿಷ್ಠಿರನಿಗೆ ಮೇಲ್ಕಂಡಂತೆ ಉಪದೇಶಿಸಿದ್ದಾರೆ.

ಶ್ರೇಯಸ್ಸನ್ನು ಬಯಸತಕ್ಕವನು ಕಾಮಕ್ರೋಧಾದಿಗಳನ್ನು ಗೆಲ್ಲಬೇಕು. ಅವುಗಳನ್ನು ಗೆಲ್ಲದೆ ಮನಃಶಾಂತಿ ಇಲ್ಲ. ಮನಃಶಾಂತಿಯಿಲ್ಲದಾಗ ಸುಖವೆಲ್ಲಿಯದು? ಸುಖಾಪೇಕ್ಷೆಯಿಂದ ಭೋಗಸಾಮಗ್ರಿಯನ್ನು ಬಯಸುವುದೇ ಕಾಮ. ಅದನ್ನು ಜಯಿಸುವುದು ಹೇಗೆ? ತಿಂಡಿಯ ಚಾಪಲ್ಯವಿರತಕ್ಕವನು ತಿನಿಸನ್ನೇ ಮನಸ್ಸಿನಲ್ಲಿ ಮೆಲುಕುಹಾಕುತ್ತಾನೆ. ಅದರಿಂದ ತಿನಿಸಿನ ಕಾಮ ಹೆಚ್ಚುತ್ತಲೇಹೋಗುತ್ತದೆ. ಇದು ಆಯುಧದಿಂದ ಗೆಲ್ಲಬಹುದಾದ ವೈರಿಯಲ್ಲ; ಔಷಧದಿಂದ ಶಮನವಾಗುವ

ರೋಗವೂ ಅಲ್ಲ. ಅಸಂಕಲ್ಪ ಒಂದೇ ಅದರ ಶಮನಕ್ಕೆ ಮಾರ್ಗ. ಅಸಂಕಲ್ಪವೆಂದರೆ ಆ ಭೋಗಸಾಮಗ್ರಿಯನ್ನು ಕುರಿತು ಚಿಂತಿಸದಿರುವುದು. ತಿಂಡಿಯ ಬಯಕೆ ಬಂದಾಗ ಯತ್ನದಿಂದ ಮನಸ್ಸನ್ನು ಅನ್ಯತ್ರ ತಿರುಗಿಸಬೇಕು. ಅದೊಂದೇ ಕಾಮವನ್ನು ಗೆಲ್ಲುವ ಉಪಾಯ. ಕಾಮವನ್ನು ಗೆದ್ದರೆ ಕ್ರೋಧವನ್ನು ಗೆದ್ದಂತೆಯೇ. 'ಕಾಮ ಏಷ ಕ್ರೋಧ ಏಷ ರಜೋಗುಣಸಮುದ್ಭವಃ' ಎಂದು ಭಗವದ್ಗೀತೆಯಲ್ಲಿ ಹೇಳಿದೆ. ಕಾಮಕ್ಕೆ ಯಾವುದೋ ನಿಮಿತ್ತದಿಂದ ಅಡ್ಡಿಯಾದರೆ ಕಾಮವೇ ಕ್ರೋಧವಾಗಿ ಪರಿಣಮಿಸುತ್ತದೆ. ಇವೆರಡೂ ಅನರ್ಥಕಾರಿಗಳು.

ಲೋಭವು ಆಸೆ-ಜಿಪುಣತೆಗಳ ಸಂಗಮದಿಂದ ಹುಟ್ಟುವ ವಿಕೃತಿ. ದುರ್ಮಾರ್ಗದಿಂದಾದರೂ ಧನಸಂಪಾದನೆ ಮಾಡಲು ಪ್ರೇರಿಸತಕ್ಕದ್ದು ಇದು. ಔದಾರ್ಯವನ್ನು ಅಡ್ಡಗಟ್ಟುವ ಸ್ವಭಾವವೂ ಇದರಲ್ಲಿದೆ. ಹಣವನ್ನು ಅನಾವಶ್ಯಕವಾಗಿ (ಅಗತ್ಯಕ್ಕಿಂತ ಅಧಿಕವಾಗಿ) ಕೂಡಿಹಾಕುವುದರಿಂದ ಯಾವ ಅನರ್ಥಗಳು, ವಿಪತ್ತುಗಳು ಅನ್ಯರಿಗೆ ಪ್ರಾಪ್ತವಾಗಿವೆಯೆಂಬುದನ್ನು ಪರ್ಯಾಲೋಚಿಸುತ್ತಿದ್ದರೆ, ಲೋಭವು ಹಿಮ್ಮೆಟ್ಟುತ್ತದೆ. ಈ ಕಾಮಕ್ರೋಧಲೋಭಗಳೇ ಮನುಷ್ಯನ ಪ್ರಬಲ ವೈರಿಗಳು. ಇವನ್ನು ಜಯಿಸಿದಾಗ ಉಳಿದ ಮೋಹ, ಮದ, ಮತ್ಸರಗಳು ಸಹಜವಾಗಿ ಅಡಗಿಹೋಗುತ್ತವೆ.

ಭಯವು ಈ ಪ್ರಕಾರದ್ದಲ್ಲ, ಅಲ್ಪಕಾರಣಗಳಿಂದಾಗುವ ಹೆದರಿಕೆಯಲ್ಲ. ಅದು ಕ್ಷುದ್ರವಾದದ್ದು. ಅಧಿಕಾರ ಹೋಗುವುದೆಂಬ ಭಯ, ಮಹಾವಿಪತ್ತಿನ ಭಯ, ಮರಣಭಯ - ಇವು ಇಲ್ಲಿ ವಿವಕ್ಷಿತವಾದ ಭಯ. ಮನುಷ್ಯನ ಉತ್ಸಾಹಶಕ್ತಿಯನ್ನೆ ತಣ್ಣಗೆ ಮಾಡುವ ಸಾಮರ್ಥ್ಯ ಇದಕ್ಕಿದೆ. ಇದು ಮಾನವನ ಏಳ್ಗೆಗೆ ಅಡ್ಡಗಟ್ಟೆ. ವೇದಾಂತವನ್ನೋದಿ ಪರಮಾರ್ಥವನ್ನು ಪರಿಶೀಲಿಸುವುದೊಂದೇ ಭಯದ ಪರಿಹಾರಕ್ಕೆ ಮಾರ್ಗ. ''ಆತ್ಮನಿಗೆ ಮರಣವಿಲ್ಲ. ಹಳೆಯ ಬಟ್ಟೆಯನ್ನೆಸೆದು ಹೊಸ ಬಟ್ಟೆಯನ್ನು ತೊಡುವಂತೆ, ಇನ್ನೊಂದು ಹೊಸ ಶರೀರವನ್ನು ಧರಿಸುವುದೇ ಮರಣ'' ಇತ್ಯಾದಿ ವಿಮರ್ಶನದಿಂದ ಭಯವನ್ನು ಗೆಲ್ಲಬೇಕು. ಇದು ನಾರದರ ಉಪದೇಶ.

**ಗೋಶತಾದಪಿ ಗೋಕ್ಷೀರಂ ಪ್ರಸ್ಥಂ ಧಾನ್ಯಶತಾದಪಿ ।**
**ಪ್ರಾಸಾದಾದಪಿ ಖಟ್ವಾರ್ಧಂ ಶೇಷಾಃ ಪರವಿಭೂತಯಃ ॥ ೩೭॥**

— ಮಹಾಭಾರತ

''ನೂರು ಹಸುಗಳಿದ್ದರೂ ಒಬ್ಬ ವ್ಯಕ್ತಿಯು ತಾನು ಬಳಸುವುದು ಒಂದು ಹಸುವಿನ ಹಾಲನ್ನು ಮಾತ್ರ. ನೂರು ಖಂಡುಗ ಅಕ್ಕಿಯಿದ್ದರೂ ತನಗೆ ಬೇಕಾದದ್ದು ಒಂದು ಸೇರು ಅಕ್ಕಿ. ದೊಡ್ಡ ಅರಮನೆಯಿದ್ದರೂ ತಾನು ಮಲಗುವುದು ಒಂದು ಮಂಚದ ಅರ್ಧಭಾಗದಲ್ಲಿ. ಉಳಿದುದೆಲ್ಲವೂ ಅನ್ಯರಿಗೆ ಸೇರಿದ ಸಂಪತ್ತು.''

ಎಲ್ಲದಕ್ಕೆ ಮಿತಿಯಿದ್ದರೂ ಮಾನವನ ಧನದ ಆಸೆಗೆ ಮಿತಿಯಿಲ್ಲ. ಮನುಷ್ಯನು 'ಹಣಮೆನಗೆ', 'ಧನಮೆನಗೆ' ಎಂದು ಮೇಕೆಯಂತೆ 'ಮೇ ಮೇ' ಎನ್ನುತ್ತಲೇ ಇರುತ್ತಾನೆ. ಹಣವು ಏತಕ್ಕಾಗಿ? ಸುಖಭೋಗಕ್ಕಾಗಿ. ಒಳ್ಳೆಯದು; ಇವನು ಎಷ್ಟು ತಿಂದಾನು? ಎಷ್ಟು ಕುಡಿದಾನು? ಎಷ್ಟು ಮೆರೆದಾನು? ತಾನಲ್ಲದೆ ತನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ತಿಂದು ತೇಗಿದರೂ ಉಳಿದು ಬೆಳೆಯುತ್ತಲೇ ಇರುವಷ್ಟಿದ್ದರೂ ಇನ್ನೂ ಆಸೆ ತಪ್ಪುವುದಿಲ್ಲವೇಕೆ?

ಇನ್ನು ಕಾರ್ಖಾನೆಗಳನ್ನು ಹೆಚ್ಚಿಸಿ ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡುವುದೆಂಬುದು ಉತ್ತಮ ಕಾರ್ಯವೇ ಹೌದು. ಅಲ್ಲಿಯೂ ದುಡಿಯುವವರನ್ನು ದೋಚಿ ಹಣವನ್ನು ಗಳಿಸುವ ಪ್ರವೃತ್ತಿಯೇನೂ ಕಡಮೆಯಾಗುವುದಿಲ್ಲ. ಇತರ ಧರ್ಮಕಾರ್ಯಗಳಿಗಾಗಿ ಮಾನವನು ದುಡಿಯುವುದಿಲ್ಲ. ಕೀರ್ತಿಲಾಭಕ್ಕಾಗಿಯೋ ಉಳಿದದ್ದನ್ನು ರಕ್ಷಿಸಿಕೊಳ್ಳಲಾರದೆಯೋ ಕೆಲವರು ಮಾತ್ರ ಧರ್ಮಕಾರ್ಯಗಳಿಗೆ ಬಳಸುವುದುಂಟು. ಮನುಷ್ಯನು ಒಂದು ಅಂಶವನ್ನು ನೆನಪಿನಲ್ಲಿಡಬೇಕು: ತಾನು ಬಳಸುವುದು, ತನಗೆ ಬೇಕಾದದ್ದು ಅತ್ಯಲ್ಪ, ಉಳಿದುದೆಲ್ಲವೂ ಪರರ ಪಾಲಾಗುತ್ತದೆ - ಎಂದು.

ಕೊಟ್ಟಿಗೆಯಲ್ಲಿ ನೂರು ಹಸುಗಳನ್ನು ಕಟ್ಟಿದ್ದರೂ ತನಗೆ, ತನ್ನ ಕುಟುಂಬಕ್ಕೆ ಬೇಕಾದದ್ದು ಒಂದು ಹಸುವಿನ ಹಾಲು. ಉಳಿದ ಹಾಲು ಅನ್ಯರಿಗೆ. ಪಣತದಲ್ಲಿ ಬತ್ತ, ಅಕ್ಕಿಗಳ ಮೂಟೆಗಳು ತುಂಬಿದ್ದರೂ ಈತನು ಅರ್ಧ ಕೆ.ಜಿ. ಅಕ್ಕಿಗಿಂತ ಹೆಚ್ಚನ್ನು ಬಳಸಲಾರ. ಅರಮನೆಯಂತಹ ಭವ್ಯವಾದ ಬಂಗಲೆಯನ್ನು ಕಟ್ಟಿಸಿಕೊಂಡು ಬಂದವರಿಗೆ ತೋರಿಸುತ್ತ ಹೆಮ್ಮೆ ಪಟ್ಟುಕೊಳ್ಳಬಹುದು. ಇವನು ಮಲಗುವುದು ಒಂದು ಕೋಣೆಯ ಒಂದು ಮಂಚದ ಅರ್ಧಭಾಗದಲ್ಲಿ! ಉಳಿದವುಗಳೆಲ್ಲವೂ ಅನ್ಯರ ಪಾಲಾದ ವೈಭವ ! ಮೃತ್ಯುವಂತೂ ಯಾರಿಗೂ ತಪ್ಪುವುದಿಲ್ಲವಷ್ಟೆ? ಆಗ, ಓ ಮಾನವ, ನೀನು ಉಟ್ಟ ಬಟ್ಟೆಯನ್ನೂ ಕಸಿದುಕೊಂಡು ನಿನ್ನ ಹೆಣವನ್ನು ಚಟ್ಟಕ್ಕೇರಿಸಿ ದಟ್ಟವಾದ ಬೆಂಕಿಯಲ್ಲಿ ದೂಡಿಬಿಡುತ್ತಾರೆ - ಎಂದು ಈ ಶ್ಲೋಕದ ತಾತ್ಪರ್ಯ.

**ಪಂಥಾ ದೇಯೋ ಬ್ರಾಹ್ಮಣಾಯ ಗವೇ ರಾಜ್ಞೇ ಹ್ಯಚಕ್ಷುಷೇ।**
**ವೃದ್ಧಾಯ ಭಾರತಪ್ತಾಯ ಗರ್ಭಿಣ್ಯೈ ದುರ್ಬಲಾಯ ಚ ॥ ೩೮॥**

— *ಬೋಧಾಯನಧರ್ಮಸೂತ್ರ, ೨-೩-೫೦*

"ಹೋಗುವಾಗ ನೇರವಾಗಿ ಎದುರಿಗೆ ಬ್ರಾಹ್ಮಣನು ಬರುತ್ತಿದ್ದರೆ, ಅವನಿಗೆ ದಾರಿಯನ್ನು ಬಿಟ್ಟು ಪಕ್ಕಕ್ಕೆ ಸರಿಯಬೇಕು. ಹಾಗೆಯೇ ಹಸು, ರಾಜ, ಕುರುಡ, ಮುದುಕ, ಹೊರೆಹೊತ್ತವನು, ಗರ್ಭಿಣಿ, ರೋಗಾದಿಗಳಿಂದ ದುರ್ಬಲನಾದವನು - ಇವರು ಬಂದರೂ ದಾರಿಯನ್ನು ಬಿಡಬೇಕು."

ಸಾಮಾನ್ಯನೀತಿ ಇದು. ನಯಪೂರ್ಣವಾದ ನಡತೆ. ವಿವೇಕಿಯಾದ ಸಭ್ಯನು ಆಚರಿಸುವ ಬಗೆ. ಈ ನುಡಿಯನ್ನು ಬೋಧಾಯನರು ಧರ್ಮಸೂತ್ರದಲ್ಲಿ ಸೇರಿಸಿದ್ದಾರೆ. ಮನ್ವಾದಿ ಸ್ಮೃತಿಗಳಲ್ಲಿಯೂ ಈ ಅಭಿಪ್ರಾಯದ ವಚನಗಳುಂಟು. ಸಾಮಾನ್ಯಲೋಕನೀತಿಯನ್ನು ಧರ್ಮಶಾಸ್ತ್ರದಲ್ಲಿ ಸೇರಿಸಿದ್ದೇಕೆ? ಇದೊಂದು ಧಾರ್ಮಿಕನಿಯಮವೆಂದು ತಿಳಿಸುವುದಕ್ಕಾಗಿ; ಈ ನಿಯಮವನ್ನು ಮೀರುವುದು ಅಧರ್ಮ, ಪಾಪಕರ ಎಂದು ಬೋಧಿಸುವುದಕ್ಕಾಗಿ. ಸಂಭಾಷಿತಗ್ರಂಥಗಳಲ್ಲಿರುವ

ನೀತಿಯಾದರೋ ಸಭ್ಯತೆಯ ರೀತಿಯನ್ನೂ ವ್ಯವಹಾರಮಾರ್ಗವನ್ನೂ ಲೋಕ ಸ್ವಭಾವವನ್ನೂ ತಿಳಿಸಿಕೊಡುತ್ತದೆ; ಅದು ಧಾರ್ಮಿಕನಿಯಮವಲ್ಲ.

ಮೇಲ್ಕಂಡ ಧರ್ಮಸೂತ್ರದಲ್ಲಿ ಬ್ರಾಹ್ಮಣ ಎಂಬ ಶಬ್ದವಿರುವುದನ್ನು ನೋಡಿ ಅನೇಕರಿಗೆ ಕಿರಿಕಿರಿಯಾಗಬಹುದು. ಬ್ರಾಹ್ಮಣಜಾತಿಯಲ್ಲಿ ಹುಟ್ಟಿದ ಈ ಕಾಲದ ಒಬ್ಬ ಮನುಷ್ಯನನ್ನು ಇಲ್ಲಿ ಬ್ರಾಹ್ಮಣ ಎಂದಿಲ್ಲ. ವೇದಾಧ್ಯಯನಸಂಪನ್ನನೂ ವಿದ್ವಾಂಸನೂ ತಪಸ್ವಿಯೂ ಸದಾಚಾರಶೀಲನೂ ಗುಣಾಢ್ಯನೂ ಆದ ಒಬ್ಬ ಪೂಜ್ಯವ್ಯಕ್ತಿಯು ಬೋಧಾಯನರ ದೃಷ್ಟಿಯಲ್ಲಿ ಬ್ರಾಹ್ಮಣ. ಅಂಥವನಿಗೆ ಯಾವನಾದರೂ ಗೌರವವನ್ನು ಸಲ್ಲಿಸಬೇಕು. 'ಗುಣಾಃ ಪೂಜಾಸ್ಥಾನಂ' ಎಂಬುದನ್ನು ಸಕಲ ಸಭ್ಯಸಮಾಜವೂ ಮನ್ನಿಸುತ್ತದೆ.

ಸ್ವಲ್ಪ ತಾಳ್ಮೆಯಿಂದ ಮುಂದಿನ ಮಾತನ್ನು ಆಲಿಸಬೇಕು. ''ಉತ್ತರೋತ್ತರಂ ಬಲೀಯಃ''. ಮೇಲೆ ಹೇಳಿದ ಎಂಟು ವ್ಯಕ್ತಿಗಳಲ್ಲಿ ಮುಂದೆಮುಂದಿನದಕ್ಕೆ ಪ್ರಾಬಲ್ಯ ಉಂಟು. ಬ್ರಾಹ್ಮಣನಿಗಿಂತ ಹಸು, ಹಸುವಿಗಿಂತ ರಾಜ, ರಾಜನಿಗಿಂತ ಕುರುಡ, ಅವನಿಗಿಂತ ವೃದ್ಧ - ಹೀಗೆ. ಹಸು ಎದುರಾದರೆ ಬ್ರಾಹ್ಮಣನು ದಾರಿ ಬಿಟ್ಟು ಸರಿಯಬೇಕೇ ಹೊರತು, ಕೋಲಿನಿಂದ ಹಸುವನ್ನು ಓಡಿಸಬಾರದು. ಕುರುಡನಿಗೆ ರಾಜನೇ ದಾರಿ ಬಿಡಬೇಕು. ಹೊರೆಹೊತ್ತವನು ಎದುರಾದರೆ ಮುದುಕನು ಸರಿದುಕೊಳ್ಳಬೇಕು. ಗರ್ಭಿಣಿ ಹೆಂಗಸು ಯಾವ ಜಾತಿಯವಳಾಗಿರಲಿ, ಎದುರಿಗೆ ಬಂದಾಗ ಬ್ರಾಹ್ಮಣ, ರಾಜ-ಎಲ್ಲರೂ ದಾರಿ ಬಿಡಬೇಕು.

ಇದು ಧರ್ಮಶಾಸ್ತ್ರ. ಧರ್ಮಶಾಸ್ತ್ರವು ಜಾತಿಯನ್ನು ಮೇಲೇರಿಸುವುದಕ್ಕಾಗಿ ಬಂದಿಲ್ಲ. ಪಕ್ಷಪಾತವಿಲ್ಲದೆ ನ್ಯಾಯವನ್ನು ಒದಗಿಸುವುದಕ್ಕಾಗಿ ಮಹರ್ಷಿಗಳು ಗೊತ್ತುಮಾಡಿದ ಕಾನೂನುಶಾಸ್ತ್ರವಿದು. ಧರ್ಮಸ್ವರೂಪವನ್ನರಿತು ಹೃದಯಪೂರ್ವಕ ವಾಗಿ ಅನುಮೋದಿಸಿರುವ ಶಾಸ್ತ್ರವಿದು.

**ನೀತಿಜ್ಞಾ ನಿಯಮಜ್ಞಾ ವೇದಜ್ಞಾ ಅಪಿ ಭವಂತಿ ಶಾಸ್ತ್ರಜ್ಞಾಃ ।**
**ಬ್ರಹ್ಮಜ್ಞಾ ಅಪಿ ಲಭ್ಯಾಃ ಸ್ವಾಜ್ಞಾನಜ್ಞಾನಿನೋ ವಿರಲಾಃ ॥ ೩೯ ॥**

— ಅಪ್ಪಯ್ಯದೀಕ್ಷಿತರ ವೈರಾಗ್ಯಶತಕ

''ನೀತಿಯನ್ನು ಬಲ್ಲವರೂ ಧರ್ಮಶಾಸ್ತ್ರದ ನಿಯಮವನ್ನರಿತವರೂ ವೇದಜ್ಞರೂ ಸಹ ಲೋಕದಲ್ಲಿದ್ದಾರೆ, ದೊರೆಯುತ್ತಾರೆ. ವಿವಿಧ ಶಾಸ್ತ್ರಗಳನ್ನು ಕಲಿತ ಪಂಡಿತರೂ ಇದ್ದಾರೆ, ಬ್ರಹ್ಮಜ್ಞಾನಿಗಳೂ ಇದ್ದಾರೆ. ಆದರೆ ತಮ್ಮ ಅಜ್ಞಾನವನ್ನು ತಿಳಿದುಕೊಂಡವರು ದೊರೆಯುವುದು ಕಷ್ಟ!''

ನೀತಿಯೆಂದರೆ ಸುಭಾಷಿತ. ಭರ್ತೃಹರಿಯ ಸುಭಾಷಿತ ಮೊದಲಾದ ಗ್ರಂಥಗಳನ್ನು ಕಲಿತವರು ಬಹುಸಂಖ್ಯೆಯಲ್ಲಿದ್ದಾರೆ. ಸುಭಾಷಿತಕ್ಕಿಂತ ಧರ್ಮಶಾಸ್ತ್ರದ ನಿಯಮಗಳನ್ನರಿತವರು ಕಡಮೆ. ಕಡಮೆಯಾದರೂ ಧರ್ಮಶಾಸ್ತ್ರವನ್ನರಿತವರು ದೊರೆಯುತ್ತಾರೆ. ವೇದವನ್ನು ಸಸ್ವರವಾಗಿ ಬಾಯಿಪಾಠ ಮಾಡುವುದು ಕಠಿಣವಾದದ್ದು. ಈ ಕಾಲದಲ್ಲಿ ಅದಕ್ಕೆ ತಕ್ಕ ಫಲವೂ ದೊರೆಯುವುದಿಲ್ಲ. ಆದರೂ ತಮ್ಮ ಕರ್ತವ್ಯವೆಂದು ಅಭ್ಯಾಸ ಮಾಡುವ ಘನಪಾಠಿಗಳೂ ಇರುತ್ತಾರೆ. ಅಂತೆಯೇ ತರ್ಕವ್ಯಾಕರಣಾದಿ ಶಾಸ್ತ್ರಗಳನ್ನು ಅಭ್ಯಾಸ ಮಾಡಿದ ವಿದ್ವಾಂಸರೂ ಇದ್ದಾರೆ.

ಇನ್ನು ವೇದಪ್ರತಿಪಾದ್ಯವಾದ ಪರಬ್ರಹ್ಮವಸ್ತುವನ್ನರಿತ ಬ್ರಹ್ಮಜ್ಞಾನಿಗಳೂ ಇದ್ದಾರೆ. ವೇದಾಂತಶಾಸ್ತ್ರವನ್ನೋದಿದವರು ಶಾಸ್ತ್ರಜ್ಞರಲ್ಲಿ ಸೇರಿಹೋಗುತ್ತಾರೆ. ಅವರು ಬ್ರಹ್ಮಜ್ಞಾನಿಗಳಲ್ಲ. ಬ್ರಹ್ಮಜ್ಞಾನಿಗಳು ಅತ್ಯಂತ ದುರ್ಲಭರು. ಆದರೂ ಅಂಥವರಿದ್ದಾರೆ. ಆದರೆ ತಮ್ಮ ಅಜ್ಞಾನವನ್ನು ತಿಳಿದುಕೊಂಡ ಜನರು ಮಾತ್ರ ದೊರೆಯುವುದಿಲ್ಲ! ಅಂತಹವರು ವಿರಳ - ಎಂದು ತಿಳಿಸುವುದಕ್ಕಾಗಿ ಈ ಅತಿಶಯೋಕ್ತಿ.

ಪ್ರತಿಯೊಬ್ಬರಲ್ಲಿಯೂ ಒಂದು ಬಗೆಯ 'ಅಹಂಬುದ್ಧಿ' ಸುಪ್ತವಾಗಿರುತ್ತದೆ. ಪ್ರತಿಯೊಂದು ವಸ್ತುಜ್ಞಾನದ ಹಿಂದೆಯೂ 'ನಾನು', 'ನನ್ನ' ಎಂಬ ಒಂದಂಶವು

ಸೇರಿಕೊಂಡೇ ಇರುತ್ತದೆ. ಮುಂದೆ ಏನಾದರೂ ಆಗಲಿ, ಇದು 'ನನ್ನ' ಹೇಳಿಕೆ, 'ನನ್ನ' ಅಭಿಪ್ರಾಯ - ಎಂಬುದಕ್ಕೆ ಚ್ಯುತಿ ಇಲ್ಲ. ಇದು ಅಹಂಕಾರವಲ್ಲ. ಪಶುಪಕ್ಷಿಗಳು ಸಹ ಈ 'ಅಹಂಬುದ್ಧಿ' ಇಲ್ಲದೆ ಅಲ್ಲಾಡುವುದಿಲ್ಲ.

ಸ್ವ=ತಾನು. ತಾನು ಎಂದರೆ ಯಾರು? ಮನುಷ್ಯದೇಹವಾದರೆ ಗಂಡೆ, ಹೆಣ್ಣೆ? ಪ್ರತಿಯೊಂದು ಪಶುವೂ ಪಕ್ಷಿಯೂ ಕೀಟವೂ ಸಹ ತನ್ನನ್ನು 'ಸ್ವ' ಎಂದೇ ಭಾವಿಸಿರುವುದರಿಂದ, 'ಸ್ವ' ಎಂದರೇನೆಂಬುದೇ ನಿಶ್ಚಿತವಾಗುವುದಿಲ್ಲ. ಆ ಶಬ್ದಕ್ಕೆ ಒಂದು ಅರ್ಥವಿರಲೇಬೇಕು. ಆದರೆ ಪ್ರತಿಯೊಬ್ಬನೂ ತನ್ನನ್ನು ತಾನು ತಿಳಿದುಕೊಂಡಿದ್ದೇನೆಂದೇ ಭಾವಿಸುತ್ತಾನೆ. ವಾಸ್ತವವಾಗಿ ತಾನು ಯಾರು ಎಂಬುದೇ ಗೊತ್ತಿಲ್ಲ. ಗೊತ್ತಿರುವಂತೆ ಎಲ್ಲರೂ ನಟಿಸುತ್ತಿದ್ದೇವೆ ! ಇದಕ್ಕಿಂತ ಆಶ್ಚರ್ಯದ ಸಂಗತಿ ಇನ್ನು ಯಾವುದಿದೆ?

**ಶ್ರುತೇನ ಶ್ರೋತ್ರಿಯೋ ಭವತಿ ತಪಸಾ ವಿಂದತೇ ಮಹತ್।**
**ಧೃತ್ಯಾ ದ್ವಿತೀಯವಾನ್ ಭವತಿ ಬುದ್ಧಿಮಾನ್ ವೃದ್ಧಸೇವಯಾ ॥ ೪೦॥**

— *ಮಹಾಭಾರತ, ಅರಣ್ಯಪರ್ವ, ಯಕ್ಷಪ್ರಶ್ನೆ*

"ಶ್ರುತದಿಂದ ಶ್ರೋತ್ರಿಯನಾಗುತ್ತಾನೆ. ತಪಸ್ಸಿನಿಂದ ಮಹತ್ತ್ವವನ್ನು ಪಡೆಯುತ್ತಾನೆ. ಧೀರತನದಿಂದ ಜೊತೆಯುಳ್ಳವನಾಗುತ್ತಾನೆ. ಹಿರಿಯರ ಸೇವೆಯಿಂದ ಬುದ್ಧಿವಂತನಾಗುತ್ತಾನೆ."

ಪಾಂಡವರು ವನವಾಸದಲ್ಲಿದ್ದಾಗ ಬಹಳ ಬಾಯಾರಿಕೆಯಾಯಿತು. ದೂರದಲ್ಲಿದ್ದ ಕೊಳದಿಂದ ನೀರನ್ನು ತರುವಂತೆ ಧರ್ಮರಾಯನು ಹೇಳಿದ. ಸಹದೇವನು ಅಲ್ಲಿಗೆ ಹೋಗಿ ತಾನು ಮೊದಲು ನೀರು ಕುಡಿಯೋಣವೆಂದು ನೀರಿನ ಬಳಿಗೆ ಹೋದನು. "ನನ್ನ ಪ್ರಶ್ನೆಗೆ ಮೊದಲು ಉತ್ತರ ಹೇಳು. ಉತ್ತರ ಹೇಳದೆ ನೀರು ಕುಡಿದರೆ ಸಾಯುತ್ತೀಯೆ!" - ಎಂಬ ಮಾತು ಕೇಳಿಸಿತು. ಸಹದೇವನು ಅದನ್ನು ಲಕ್ಷಿಸದೆ ನೀರು ಕುಡಿದ. ಮರುಕ್ಷಣದಲ್ಲಿ ಸತ್ತುಹೋದ. ಅನಂತರ

ಒಬ್ಬೊಬ್ಬರಾಗಿ ಬಂದ ನಕುಲ, ಅರ್ಜುನ, ಭೀಮ - ಇವರ ಪಾಡೂ ಅದೇ ಆಯಿತು. ಕಡೆಗೆ ಧರ್ಮರಾಜ ಬಂದ. ಅವನಿಗೂ ಮೊದಲಿನಂತೆ ಪ್ರಶ್ನೆಯು ಕೇಳಿಸಿತು. ಆಗ ಧರ್ಮರಾಯನು ನೀರಿಗಾಗಿ ದುಡುಕದೆ ಉತ್ತರ ಹೇಳುತ್ತಾನೆ. ಹೀಗೆ ಅನೇಕ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡುತ್ತಾನೆ. ಪ್ರಶ್ನೆ ಕೇಳಿದವನು ಅದೃಶ್ಯನಾಗಿದ್ದ ಒಬ್ಬ ಯಕ್ಷ. ಧರ್ಮರಾಯನ ಉತ್ತರಗಳಿಂದ ಸಂತುಷ್ಟನಾದ ಯಕ್ಷನು ನಕುಲಾದಿಗಳೆಲ್ಲರನ್ನೂ ಪುನಃ ಬದುಕಿಸುತ್ತಾನೆ.

ಮೇಲ್ಕಂಡ ಉತ್ತರಗಳಿಂದಲೇ ಪ್ರಶ್ನೆಯ ಸ್ವರೂಪವನ್ನು ಊಹಿಸಿಕೊಳ್ಳಬಹುದು. ಛಂದಸ್ಸನ್ನು (ವೇದವನ್ನು) ಅಧ್ಯಯನ ಮಾಡಿದವನು ಶ್ರೋತ್ರಿಯ ಎಂದು ಆ ಶಬ್ದದ ವ್ಯುತ್ಪತ್ತಿಯುಂಟು. ಆದರೆ ಯಕ್ಷನು ನಿರೀಕ್ಷಿಸುವ ಉತ್ತರ ಅದಲ್ಲ. ವ್ಯಾಕರಣವನ್ನು ಓದಿದ ಒಬ್ಬ ಹುಡುಗನು ಹಾಗೆ ಉತ್ತರಿಸಬಹುದು. ಶ್ರುತವೆಂದರೆ ವೇದಾರ್ಥಜ್ಞಾನಸಹಿತವಾದ ವೇದಾಭ್ಯಾಸ. ಅರ್ಥಜ್ಞಾನವಿಲ್ಲದ ವೇದಾಭ್ಯಾಸಿಯು ಹೊರೆಹೊತ್ತ ಕಂಭವಿದ್ದಂತೆ ಎಂದು ವೇದವೇ ಬರಿಯ ವೈದಿಕನನ್ನು ನಿಂದಿಸಿದೆ. ''ಶ್ರುತಂ ತು ಸರ್ವೇಭ್ಯೋ ಗರೀಯಃ'' ಎಂದು ಧರ್ಮಸೂತ್ರವಿದೆ. ಅರ್ಥವನ್ನರಿತು ವೇದಾಧ್ಯಯನ ಮಾಡಿದವನಿಗೆ ಎಲ್ಲರಿಗಿಂತ ಹೆಚ್ಚು ಗೌರವವನ್ನು ಸಲ್ಲಿಸಬೇಕೆಂದು ಧರ್ಮಶಾಸ್ತ್ರದ ವಿಧಿ. ಯಾವ ಪ್ರಯತ್ನವೂ ಫಲವನ್ನು ನೀಡದೆ ಇದ್ದಾಗ ''ಉಗ್ರಂ ತಪಃ ಸಮಾತಿಷ್ಠೇತ್ ತಪೋ ಹಿ ದುರತಿಕ್ರಮಂ'' ಎಂದು ನೀತಿಶಾಸ್ತ್ರ ಹೇಳುತ್ತದೆ. ತಪಸ್ಸಿಗೆ ಅಸಾಧ್ಯವಾದದ್ದೇ ಇಲ್ಲ. ವಿಶ್ವಾಮಿತ್ರನು ಕಠೋರತಪಸ್ಸಿನಿಂದಲೇ ದುರ್ಲಭವಾದ ಬ್ರಹ್ಮರ್ಷಿಪದವಿಯನ್ನು ಪಡೆದಿದ್ದಾನೆ. ಜೊತೆಗೆ ಇನ್ನೊಬ್ಬ ಮನುಷ್ಯನಿದ್ದ ಮಾತ್ರದಿಂದ ಜೊತೆಯುಳ್ಳವನಾಗಿಬಿಡುವುದಿಲ್ಲ. ಹೇಡಿಗೆ ಎಷ್ಟು ಜನರ ನೆರವಿದ್ದರೂ ಧೈರ್ಯವಿಲ್ಲದಿದ್ದರೆ ಫಲವಿಲ್ಲ. ಧೀರತೆಯೇ ಶ್ರೇಷ್ಠವಾದ ಗುಣ. ಜನರ ನೆರವಿಗಿಂತ ಸ್ವಯಂಧೀರತೆ ಮುಖ್ಯವಾದ್ದೆಂದು ಅಭಿಪ್ರಾಯ.

ಪುಸ್ತಕದ ಓದಿನಿಂದಲೇ ಬುದ್ಧಿ ಬೆಳೆಯದು. ಗಣಕಯಂತ್ರವೂ ಮಾಹಿತಿಗಳನ್ನು ತುಂಬಿಕೊಂಡಿರುತ್ತದೆ. ಸ್ವಯಂ ಏನು ಮಾಡಬೇಕೆಂಬ ವಿವೇಚನಾಶಕ್ತಿ ಮಾತ್ರ ಅದಕ್ಕಿರುವುದಿಲ್ಲ. ನೂರಾರು ಆಯುಧಗಳಿದ್ದರೂ ಒಂದು ಹಣ್ಣನ್ನು ಕತ್ತರಿಸಲು

ಚಾಕು ಬೇಕು. ಬಲಶಾಲಿಯಾದರೂ ಬಂದೂಕು ಹಣ್ಣನ್ನು ಕತ್ತರಿಸದು. ವಿದ್ಯೆಯನ್ನು ಸುಮ್ಮನೆ ಕಲಿತರೇನು? ವ್ಯವಹಾರಜ್ಞಾನವು ಮುಖ್ಯವಾದದ್ದು. ಹಿರಿಯರನ್ನು ಸೇವಿಸುತ್ತಿದ್ದರೆ, ವ್ಯವಹಾರಜ್ಞಾನವು ತಾನಾಗಿ ಬರುತ್ತದೆ. ಬುದ್ಧಿಯು ಪಕ್ವವಾಗುತ್ತದೆ. ವಯಸ್ಸಿನಿಂದ, ಅನುಭವದಿಂದ, ಜ್ಞಾನದಿಂದ ಅಧಿಕರಾದವರು ಹಿರಿಯರು. ಹಿರಿಯರ ಸೇವೆಯೇ ಟ್ರೈನಿಂಗ್ - ಎಂದು ಧರ್ಮರಾಯನ ಉತ್ತರ.

**ಪರದ್ರವ್ಯೇಷ್ವಭಿಧ್ಯಾನಂ ಮನಸಾऽನಿಷ್ಟಚಿಂತನಮ್।**
**ವಿತಥಾಭಿನಿವೇಶಶ್ಚ ತ್ರಿವಿಧಂ ಕರ್ಮ ಮಾನಸಮ್ ॥ ೪೧ ॥**

— *ಮನುಸ್ಮೃತಿ, ೧೨-೫*

''ಪರರ ದ್ರವ್ಯವನ್ನು ಹೇಗೆ ಪಡೆದೇನು ಎಂಬ ಚಿಂತೆ; ಮನಸ್ಸಿನಲ್ಲಿಯೇ ಇತರರಿಗೆ ಕೇಡನ್ನು ಬಯಸುವುದು; ದೇವರಿಲ್ಲ, ಆಚಾರಗಳೆಲ್ಲ ಬೂಟಾಟಿಕೆ ಎಂಬ ತಪ್ಪು ತಿಳಿವಳಿಕೆಯಲ್ಲಿ ಹಠ; - ಇವು ಮೂರು ಮಾನಸಿಕವಾದ ಪಾಪಕರ್ಮಗಳು.''

ಮನಸ್ಸು, ಮಾತು, ದೇಹ - ಇವು ಮೂರು ಒಂದು ಕ್ರಿಯೆಯನ್ನು ನಡೆಸಲು ಮನುಷ್ಯನಿಗಿರುವ ಸಾಧನಗಳು. ಇವನ್ನು ತ್ರಿಕರಣಗಳು ಎನ್ನುತ್ತಾರೆ. ಕೆಲಸವು ತ್ರಿಕರಣಶುದ್ಧವಾಗಿರಬೇಕು ಎನ್ನುವುದುಂಟು. ಮನಸ್ಸಿದ್ದಂತೆ ಮಾತು, ಮಾತು ಇದ್ದಂತೆ ಆಚರಣೆ - ಇದು ಋಜುತ್ವ ಎನಿಸುತ್ತದೆ. ಕೆಲವರು ಮನಸ್ಸಿನಲ್ಲಿ ಇದ್ದಂತೆ ಬಾಯಿಯಿಂದ ಹೇಳುವುದಿಲ್ಲ; ಹೇಳಿದಂತೆ ನಡೆಯುವುದಿಲ್ಲ. ಇದು ದಂಭ, ವಂಚಕತ್ವ; ಪರರನ್ನಿರಲಿ, ನಮ್ಮನ್ನು ನಾವೇ ವಂಚಿಸಿಕೊಂಡಂತೆ.

ಈ ತ್ರಿಕರಣಗಳಲ್ಲಿ ಮನಸ್ಸು ಮಾಡುವ ಪಾಪಕರ್ಮಗಳು ಮೂರು:

ಪರದ್ರವ್ಯಗಳಲ್ಲಿ ಅಭಿಧ್ಯಾನ - ಎಂದರೆ ಅವನ್ನು ಹೇಗೆ ಅಪಹರಿಸಲೆಂಬ ಚಿಂತೆ. ಕಳ್ಳತನ, ದರೋಡೆ-ಇವು ಎಲ್ಲರಿಗೂ ತಿಳಿದ ಪ್ರಕಟ ಮಾರ್ಗಗಳು. ಹೊರಗೆ ಹೇಳದ

ಗುಪ್ತಮಾರ್ಗಗಳೂ ಇರುತ್ತವೆ. ಸಭ್ಯತೆಯ ಸೋಗಿನಲ್ಲಿ ಇವು ನಡೆಯುತ್ತವೆ: ನಕಲಿ ಕಾಗದಪತ್ರಗಳು, ಸರ್ಕಾರಿ ಜಮೀನಿನ ಒತ್ತುವರಿ, ಇತ್ಯಾದಿ. ಪರಸ್ತ್ರೀಯರೂ ಪರದ್ರವ್ಯಗಳೇ. ಇನ್ನೊಬ್ಬರು ನಡೆಸುವ ಅಧಿಕಾರವೂ ಪರದ್ರವ್ಯ. ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿ - ಇವರ ಅಧಿಕಾರವನ್ನು ನಾನು ಹೇಗೆ ಪಡೆದೇನು, ಉಪಾಯವೇನು - ಎಂಬ ಚಿಂತೆಯೂ ಪರದ್ರವ್ಯದ ಅಭಿಧ್ಯಾನ.

ಇಂತಹ ಅಭಿಧ್ಯಾನಗಳು ತಲೆಯಲ್ಲಿ ಸೇರಿದಾಗ ಪರರಿಗೆ ಅನಿಷ್ಟವಾಗಲೆಂಬ ಆಲೋಚನೆ ಸ್ವಾಭಾವಿಕವಾಗಿ ಹುಟ್ಟುತ್ತದೆ. ಹೊಟ್ಟೆಕಿಚ್ಚಿನಿಂದ ಹುಟ್ಟುವ ಆಲೋಚನೆ ಇದು. ಕಿಚ್ಚಿನಿಂದ ಹೊರಡುವ ಹೊಗೆ ಇದು.

'ವಿತಥಾಭಿನಿವೇಶ'ವೆಂಬುದು ಇನ್ನೊಂದು ಪಾಪಕರ್ಮ. ವಿತಥವೆಂದರೆ ಸುಳ್ಳು, ಮಿಥ್ಯೆ. ಈ ವಿತಥವು ಎರಡು ವಿಧ: ಒಂದು ಲೌಕಿಕ, ಇನ್ನೊಂದು ಪಾರಮಾರ್ಥಿಕ. ತಾನು ಹೇಳಿದ ಸುಳ್ಳನ್ನು ಸತ್ಯವೆಂದು ಸಾಧಿಸುವ ಹಠವು ಲೌಕಿಕ. ಶಾಸ್ತ್ರೋಕ್ತವಾದದ್ದನ್ನು ಮಿಥ್ಯೆಯೆಂದು ಸಾಧಿಸುವ ಹಠವು ಪಾರಮಾರ್ಥಿಕ. ದೇವರಿಲ್ಲ, ಜೀವಾತ್ಮನಿಲ್ಲ, ಪಾಪಪುಣ್ಯಗಳಿಗೆ ಫಲವು ದೊರಕಿಯೇ ತೀರುತ್ತದೆ ಎಂಬುದು ಸುಳ್ಳು - ಮೊದಲಾದ ಮನಸ್ಸಿನ ಹಠ ಇದು. ಈ ಹಠವೂ ಸಹ ಪಾಪಕರ್ಮವೇ.

ಈ ಮೂರು ವಿಧವಾದ ಮಾನಸಿಕ ಪಾಪಕರ್ಮಗಳಿಗೆ ವಿರುದ್ಧವಾದವು ಪುಣ್ಯಕರ್ಮಗಳೆಂದು ತಾನಾಗಿ ಸಿದ್ಧವಾಗುತ್ತದೆ. ಪರದ್ರವ್ಯವನ್ನು ಎಂದೆಂದಿಗೂ ಬಯಸದಿರುವುದು; ಎಲ್ಲರಿಗೂ ಒಳ್ಳೆಯದಾಗಲಿ - ಸರ್ವೇ ಜನಾಃ ಸುಖಿನೋ ಭವಂತು - ಎಂದು ಹಾರೈಸುವುದು; ಸತ್ಯದಲ್ಲಿಯೂ ಶಾಸ್ತ್ರೋಕ್ತಿಗಳಲ್ಲಿಯೂ ಶ್ರದ್ಧೆ; - ಇವು ಮೂರು ಮಾನಸ ಪುಣ್ಯಕರ್ಮಗಳು.ಮನಸ್ಸಿನ ಶುಚಿತ್ವವೆಂದರೂ ಇದೇ.

**ವಿತ್ತಮೇವ ಕಲೌ ನೄಣಾಂ ಜನ್ಮಾಚಾರಗುಣೋದಯಃ ।**
**ಧರ್ಮನ್ಯಾಯವ್ಯವಸ್ಥಾಯಾಂ ಕಾರಣಂ ಬಲಮೇವ ಹಿ ॥ ೪೨ ॥**

— *ಭಾಗವತ, ೧೨-೨-೨*

''ಕಲಿಯುಗದಲ್ಲಿ ಮನುಷ್ಯರಿಗೆ ಜನ್ಮ, ಆಚಾರ, ಗುಣ - ಇವುಗಳ ಮೇಲ್ಮೆಗೆ ಹಣವೊಂದೇ ಕಾರಣವಾಗುತ್ತದೆ. ಧರ್ಮ, ನ್ಯಾಯಗಳ ವ್ಯವಸ್ಥೆಗೆ ಬಲವೇ ಕಾರಣವಾಗಿರುತ್ತದೆ.''

ಭಾರತೀಯರು ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ - ಎಂದು ನಾಲ್ಕು ಯುಗಗಳನ್ನು ಒಪ್ಪಿದ್ದಾರೆ. ನಮ್ಮ ಯಾವ ಪುರಾಣಗಳನ್ನು ನೋಡಿದರೂ ಈ ನಾಲ್ಕು ಯುಗಗಳ ಹೆಸರು ಬರುತ್ತದೆ. ಒಂದೊಂದು ಯುಗಕ್ಕೆ ಎಷ್ಟೋ ಲಕ್ಷ ವರ್ಷಗಳ ಅವಧಿ ಇದೆ. ಕೃತಯುಗದಲ್ಲಿ ಎಲ್ಲರೂ ಧರ್ಮಾತ್ಮರಾಗಿದ್ದ ರೆಂದೂ ಅನಂತರ ಇತರ ಯುಗಗಳಲ್ಲಿ ಕಾಲು ಭಾಗದಷ್ಟು ಧರ್ಮನಿಷ್ಠೆ ಕಡಮೆಯಾಗುತ್ತಾ, ಕಲಿಯುಗದಲ್ಲಿ ಕಾಲುಭಾಗದಷ್ಟು ಮಾತ್ರ ಧರ್ಮ ಉಳಿದಿರುತ್ತದೆಯೆಂದೂ ಬರೆದಿದ್ದಾರೆ. ಕಲಿಯುಗದಲ್ಲಿಯೂ ವರ್ಷಗಳು ಕಳೆದಷ್ಟೂ ಕಾಲುಭಾಗ ಧರ್ಮವೂ ಕ್ಷೀಣಿಸುತ್ತಾ ಹೋಗುವುದೆಂದು ತಿಳಿಸಿದ್ದಾರೆ. ಈಗ ಕಲಿಯುಗದಲ್ಲಿ ಐದು ಸಾವಿರ ವರ್ಷಗಳಿಗಿಂತ ಅಧಿಕ ಕಾಲವು ಗತಿಸಿದೆ.

ಮೇಲ್ಕಂಡ ಶ್ಲೋಕವನ್ನು ಶುಕಮಹರ್ಷಿಗಳು ಪರೀಕ್ಷಿದ್ರಾಜನಿಗೆ ಕಲಿಯುಗದ ಪ್ರಭಾವವನ್ನು ವರ್ಣಿಸುತ್ತ ಹೇಳಿದ್ದಾರೆ. ಇದರ ಅರ್ಥವನ್ನೇ ವಿವರಿಸುತ್ತ ಅವರು ಹೇಳಿದ ಮುಂದಿನ ಮಾತುಗಳು ಗಮನಾರ್ಹವಾದವು: ''ರಾಜ, ಕಲಿಯುಗದಲ್ಲಿ ಧರ್ಮ, ಸತ್ಯ, ಶೌಚ, ಕ್ಷಮೆ, ದಯೆ ಮುಂತಾದವು ಕ್ರಮವಾಗಿ ನಶಿಸುತ್ತಾ ಹೋಗುತ್ತವೆ. ಗಂಡಹೆಂಡಿರಾಗಲು ಪರಸ್ಪರ ಅಭಿರುಚಿ ಒಂದೇ ಸಾಕು, ಗೋತ್ರ ನಡತೆ ಮುಂತಾದವೇನೂ ಬೇಕಾಗುವುದಿಲ್ಲ. ಕ್ರಯವಿಕ್ರಯಾದಿ ವ್ಯವಹಾರಗಳಲ್ಲಿ ವಂಚನಾಕೌಶಲವೇ ಪ್ರಬಲವಾಗಿರುತ್ತದೆ. ಬ್ರಾಹ್ಮಣನೆನಿಸಲು ಜನಿವಾರ ಒಂದೇ ಸಾಕು. ಸಂನ್ಯಾಸಿಯಾಗಲು ಕಾಷಾಯವಸ್ತ್ರವನ್ನು ಧರಿಸಿದರಾಯಿತು. ಹಣವನ್ನು ಸುರಿಯಲು ಯಾರಿಗೆ ಶಕ್ತಿ ಇಲ್ಲವೋ ಅವರಿಗೆ ನ್ಯಾಯಸ್ಥಾನದಲ್ಲಿ ನ್ಯಾಯವು ದುರ್ಲಭವಾಗುತ್ತದೆ. ಪಂಡಿತನೆನಿಸಲು ವಾಚಾಳತನವೇ ಅರ್ಹತೆ. ಕೆಟ್ಟವನೆನಿಸಲು ಬಡತನವೇ ಕಾರಣ. ಕೇಶಾಲಂಕಾರವೇ ಸೌಂದರ್ಯಕ್ಕೆ ಸಾಧನ. ಕುಟುಂಬದವರ

ಹೊಟ್ಟೆಹೊರೆಯುವುದೇ ಮನುಷ್ಯನ ದಕ್ಷತೆ. ಯಾವನು ಪ್ರಬಲನೋ ಅವನು ರಾಜನಾಗಿ ಪ್ರಜೆಗಳನ್ನು ಪೀಡಿಸುವುದರಲ್ಲಿ ತೊಡಗುತ್ತಾನೆ. ಹಸಿವು-ಬಾಯಾರಿಕೆ ಗಳಿಂದಲೂ ಮಾನಸಿಕ ಚಿಂತೆಗಳಿಂದಲೂ ಜನರು ನೊಂದು ಬೆಂಡಾಗುತ್ತಾರೆ. ಮೋಡವು ಮಳೆಸುರಿಸುವುದಿಲ್ಲ, ಸುಮ್ಮನೆ ಮಿಂಚುತ್ತದೆ. ಧರ್ಮಕಾರ್ಯಗಳೊಂದೂ ನಡೆಯದೆ, ಮನೆಗಳು ಬರಿಯ ಬಿಡಾರಗಳಾಗುತ್ತವೆ. ಕಲಿಯುಗದಲ್ಲಿ ಜನರು ಬಿಡಿಗಾಸಿಗೋಸ್ಕರ ಸ್ನೇಹವನ್ನು ದೂರಮಾಡಿ ಪಿಶಾಚಿಗಳಂತೆ ವರ್ತಿಸುತ್ತಾರೆ. ಶಿಶ್ನೋದರಪರಾಯಣರಾದ ಈ ಕ್ಷುದ್ರಜನರು ಮುದುಕರಾದ ತಂದೆತಾಯಿಯರನ್ನು ಕಾಪಾಡುವುದಿಲ್ಲ.

''ಪಾಖಂಡರು ಜನರ ಬುದ್ಧಿಯನ್ನು ಕೆಡಿಸುತ್ತಾರೆ. 'ಜನೇ ಚ ಖರಧರ್ಮಿಣಿ' - ಜನರು ಕತ್ತೆಯಂತೆ ನಡೆದುಕೊಳ್ಳುತ್ತಾರೆ. ಅಯೋಗ್ಯರ ಕೈಯಲ್ಲಿ ರಾಜ್ಯದ ಆಡಳಿತ ಸೇರಿಕೊಳ್ಳುತ್ತದೆ. ನೀರು-ಮಣ್ಣುಗಳಿಂದಾದ ಈ ದೇಹವೇ ಆತ್ಮವೆಂದೂ, ಈ ಭೂಮಿಯೇ ನನ್ನದೆಂದೂ ಭಾವಿಸಿ ಜಗಳವಾಡುತ್ತ, ಕಡೆಗೆ ಇವೆರಡನ್ನೂ ಇಲ್ಲಿಯೇ ಬಿಟ್ಟು ಕಣ್ಣಿಗೆ ಕಾಣದಂತೆ ಒಂದು ದಿನ ಎಲ್ಲಿಗೋ ಹೊರಟುಹೋಗುತ್ತಾರೆ.''

**ಅತಿರೂಪಾದ್ ಹೃತಾ ಸೀತಾ ಅತಿಗರ್ವಾದ್ ರಾವಣೋ ಹತಃ ।**
**ಅತಿದಾನಾದ್ ಬಲಿರ್ಬದ್ಧಃ ಅತಿ ಸರ್ವತ್ರ ವರ್ಜಯೇತ್ ॥ ೪೩॥**

— ಸಮಯೋಚಿತಪದ್ಯಮಾಲಿಕಾ

''ಅತಿಯಾದ ಸೌಂದರ್ಯವಿದ್ದುದರಿಂದ ಸೀತೆಯು ಅಪಹೃತಳಾದಳು. ಅತಿಗರ್ವದಿಂದ ರಾವಣನು ಹತನಾದನು. ದಾನಕಾರ್ಯದಲ್ಲಿ 'ಅತಿ'ಯಾದ್ದರಿಂದ ಬಲಿಚಕ್ರವರ್ತಿಯು ಬದ್ಧನಾಗಿ ಕಷ್ಟಕ್ಕೆ ಸಿಕ್ಕಿದನು. ಆದ್ದರಿಂದ ಸಕಲ ವಿಷಯದಲ್ಲಿಯೂ ಅತಿಯನ್ನು ವರ್ಜಿಸಬೇಕು.''

ಸೀತಾದೇವಿಯು ಬ್ರಹ್ಮದೇವನ ಮಾಯಾಸೃಷ್ಟಿಯೋ ಎಂಬಷ್ಟು ಸುಂದರಿ

ಯಾಗಿದ್ದಳು (ದೇವಮಾಯೇವ ನಿರ್ಮಿತಾ); ರಾವಣನಿಂದ ಅಪಹೃತಳಾಗಿ ಕಷ್ಟಕ್ಕೆ ಒಳಗಾದಳು. ರಾವಣನೇನು ಸಾಮಾನ್ಯನೆ? ''ಏಷೋಽಹಿತಾಗ್ನಿಶ್ಚ ಮಹಾತಪಾಶ್ಚ ವೇದಾಂತಗಃ ಕರ್ಮಸು ಚಾಗ್ರ್ಯವೀರ್ಯಃ'' - ಆಹಿತಾಗ್ನಿ, ತಪಸ್ವಿ, ವೇದಾಂತಿ, ಕರ್ಮನಿಷ್ಠ. ಅಲ್ಲದೆ ಮಹಾವೀರ. ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸಿಬಿಡು - ಎಂದು ಯಾರು ಹೇಳಿದರೂ ಕೇಳಲಿಲ್ಲ. ''ಹೀಗೆಯೇ ಎರಡಾಗಿ ಸೀಳಿಹೋದೇನು! ಇನ್ನೊಬ್ಬನಿಗೆ ತಲೆಬಾಗುವುದಿಲ್ಲ'' ಎಂಬ ಅತಿಗರ್ವದಿಂದ ಹತನಾದನು. ಬಲಿಚಕ್ರವರ್ತಿ ದಾನವೀರ. ಯಾಗಸಮಯದಲ್ಲಿ ವಾಮನನು ''ಮೂರು ಹೆಜ್ಜೆಯಷ್ಟು ಭೂಮಿಯನ್ನು ದಾನಮಾಡು'' ಎಂದು ಕೇಳಿಕೊಂಡಾಗ ಶುಕ್ರಾಚಾರ್ಯನು ಬಲಿಯನ್ನು ತಡೆದರೂ ಕೇಳದೆ ಮಾತುಕೊಟ್ಟು ಸಿಕ್ಕಿಕೊಂಡು ಬಲಿಯು ಪಾತಾಳಕ್ಕೆ ಹೋಗಿ ನೆಲಸಬೇಕಾಯಿತು.

ಸತ್ಯದ ಅತಿಯಿಂದ ಹರಿಶ್ಚಂದ್ರ, ಧರ್ಮದ ಅತಿಯಿಂದ ಧರ್ಮರಾಜ, ದಾನದ ಅತಿಯಿಂದ ಕರ್ಣ, ದ್ವೇಷದ ಅತಿಯಿಂದ ದುರ್ಯೋಧನ - ಇವರೆಲ್ಲರೂ ಅತಿಯಿಂದಲೇ ಕಷ್ಟಕ್ಕೆ ಒಳಗಾದವರು. ಸರ್ವವ್ಯವಹಾರದಲ್ಲಿಯೂ ಮಿತಿ ಆವಶ್ಯಕ. ಅತ್ಯಾಹಾರ, ಅತಿವ್ಯಾಯಾಮ, ಅತಿಭಾಷಣ - ಮುಂತಾದವೂ ತ್ಯಾಜ್ಯಗಳೇ. ದುರ್ಗುಣಗಳ ಅತಿಯು ವಿಪತ್ಕಾರಿಯಾಗುವುದೇನೋ ಸಹಜ. ಆದರೆ ಸದ್ಗುಣಗಳ ಅತಿಯೂ ವಿಪತ್ಕಾರಿಯಾಗುತ್ತದೆ. ಧರ್ಮರಾಜನೇ ಅದಕ್ಕೆ ಉದಾಹರಣೆ. ಮಹಾತ್ಮಾಗಾಂಧಿಯವರನ್ನು ಸಹ ಧರ್ಮದ ಅತಿಗೆ ಉದಾಹರಣೆಯನ್ನಾಗಿ ಕೊಡಬಹುದು. ಅವರಲ್ಲಿದ್ದ ಸತ್ಯ, ಅಹಿಂಸೆ, ಕ್ಷಮೆ, ತ್ಯಾಗ, ಕಾರುಣ್ಯ, ನ್ಯಾಯಪಕ್ಷಪಾತ-ಇವೆಲ್ಲವೂ ಪರಮೋತ್ತಮ ಗುಣಗಳೆಂಬುದರಲ್ಲಿ ಎರಡು ಮಾತಿಲ್ಲ. ಇವುಗಳಿಂದಲೇ ಅವರನ್ನು ಮಹಾತ್ಮರೆಂದು ಜಗತ್ತು ಪೂಜಿಸಿತು. ಕಡೆಕಡೆಗೆ ಇವು ಅತಿಯಾದವು. ಮೂರು ಅಂಶಗಳನ್ನಿಲ್ಲಿ ಸ್ಮರಿಸಬಹುದು:

೧. ರಾಷ್ಟ್ರವು ವಿಭಕ್ತವಾಗಿ ಪಾಕಿಸ್ತಾನದ ನಿರ್ಮಾಣವಾದಾಗ ಪಾಕಿಸ್ತಾನದಲ್ಲಿ ಮೊದಲು ಹಿಂದೂಗಳ ಕಗ್ಗೊಲೆ, ಹಿಂದೂಸ್ತ್ರೀಯರ ಮಾನಭಂಗ-ಮುಂತಾದ

ದುಷ್ಕೃತ್ಯಗಳು ನಡೆದವಷ್ಟೆ. ಆ ಜನರ ಉಪದ್ರವವನ್ನು ಸಹಿಸಲಾರದೆ ಹಿಂದೂಗಳು ಓಡಿಬಂದು ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಗಾಂಧಿಯವರು ''ನೀವು ಓಡಿಬಂದದ್ದು ತಪ್ಪು. ಪಾಕಿಸ್ತಾನ ನಿಮ್ಮ ದೇಶ. ಸತ್ಯಾಗ್ರಹದಿಂದ ಅಲ್ಲಿಯ ಸರ್ಕಾರವನ್ನು ಎದುರಿಸಬೇಕು'' ಎಂದು ಉಪದೇಶಿಸಿದರು - ಎಂದು ವರದಿಯಿದೆ.

೨. ಓಡಿಬಂದ ಹಿಂದೂಗಳು ದೆಹಲಿಯಲ್ಲಿ ವಾಸಕ್ಕೆ ಸ್ಥಳವಿಲ್ಲದ್ದರಿಂದ ಮಶೀದಿಗಳನ್ನು ಪ್ರವೇಶಿಸಿ ಅಲ್ಲಿ ಉಳಿದರು. ಮಶೀದಿಗಳಿಂದ ದೂರು ಬಂದಿತು: ''ಮಶೀದಿಗಳು ಪ್ರಾರ್ಥನಾಸ್ಥಳಗಳು. ಅಲ್ಲಿಗೆ ಈ ಜನರು ಹೋದದ್ದು ತಪ್ಪು'' ಎಂದು ಹೇಳಿ ತಮ್ಮ ಸರ್ಕಾರವನ್ನು ಒತ್ತಾಯಿಸಿ ಹಿಂದೂಗಳನ್ನು ಹೊರಹಾಕಿದರು. ಅವರು ಬೀದಿಪಾಲಾದರು.

೩. ಕಾಶ್ಮೀರದಲ್ಲಿ ಪಾಕಿಸ್ತಾನಿಸೈನ್ಯವು ಅಕ್ರಮವಾಗಿ ನುಗ್ಗಿದ್ದರಿಂದ, ಭಾರತ ಸರ್ಕಾರವು ಪಾಕಿಸ್ತಾನಕ್ಕೆ ಕೊಡಬೇಕಾಗಿದ್ದ ೫೦ ಕೋಟಿ ರೂಪಾಯಿಗಳನ್ನು ಸಲ್ಲಿಸದೆ ತಾತ್ಕಾಲಿಕವಾಗಿ ತಡೆದಿತ್ತು. ಗಾಂಧಿಜೀಯವರು ಉಪವಾಸ ಸತ್ಯಾಗ್ರಹವನ್ನಾರಂಭಿಸಿ ಸರ್ಕಾರದ ಮೇಲೆ ಒತ್ತಡವನ್ನು ತಂದು ಆ ಹಣವನ್ನು ಪಾಕಿಸ್ತಾನಕ್ಕೆ ಕೊಡಿಸಿದರು.

'ದೇಶಕಾಲನಿಮಿತ್ತಾನಾಂ ಭೇದೈರ್ಧರ್ಮೋऽಪಿ ಭಿದ್ಯತೇ' ಎಂದು ಧರ್ಮಶಾಸ್ತ್ರವೇ ಹೇಳಿದೆ. ದೇಶಕಾಲಪರಿಸ್ಥಿತಿಗಳನ್ನನುಸರಿಸಿ ಧರ್ಮವನ್ನು ವಿವೇಚನೆಯಿಂದ ಬಳಸಬೇಕು. ''ಕೆಲವು ಸಂದರ್ಭಗಳಲ್ಲಿ ಸುಳ್ಳು ಸತ್ಯದ ಫಲವನ್ನೂ ಸತ್ಯವು ಸುಳ್ಳಿನ ಫಲವನ್ನೂ ಕೊಡುತ್ತದೆ'' ಎಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳಿದ್ದಾನೆ. 'ಪರಧರ್ಮೋ ಭಯಾವಹಃ' ಎಂಬುದೂ ಗೀತೆಯ ವಚನ. ವ್ಯಕ್ತಿಧರ್ಮ, ಆಪದ್ಧರ್ಮ, ಪರಧರ್ಮ, ರಾಜಧರ್ಮ-ಇತ್ಯಾದಿ ವಿವೇಚನೆಯಿಲ್ಲದೆ, ಲೋಕಾತೀತವಾದ ರೀತಿಯಲ್ಲಿ ಧರ್ಮದ ಅತಿಯನ್ನು ಬಳಸಿದಾಗ ವಿಪತ್ತು

ಎದುರಾಗುವುದು ನಿಶ್ಚಿತ. ಗಾಂಧಿಜೀಯವರು ಧರ್ಮದ ಅತಿಯಿಂದ ವಿಪತ್ತನ್ನು ತಂದುಕೊಂಡರು.

**ವಿಧಾಯ ವೈರಂ ಸಾಮರ್ಷೇ ನರೋಽರೌ ಯ ಉದಾಸತೇ ।**
**ಪ್ರಕ್ಷಿಪ್ಯೋದರ್ಚಿಷಂ ಕಕ್ಷೇ ಶೇರತೇ ತೇಽಭಿಮಾರುತಮ್ ॥ ೪೪ ॥**

— *ಶಿಶುಪಾಲವಧ, ೨-೪೨*

''ಮೊದಲೇ ಹೊಟ್ಟೆಕಿಚ್ಚು-ಕ್ರೋಧಗಳಿಂದ ತುಂಬಿದ ಶತ್ರುವಿನೊಡನೆ ಮತ್ತೆ ವೈರವನ್ನು ಬೆಳೆಸಿ ಯಾರು ಸುಮ್ಮನಾಗಿಬಿಡುತ್ತಾರೋ, ಅವರು ಒಣಗಿದ ಹುಲ್ಲುರಾಶಿಗೆ ಬೆಂಕಿಯನ್ನು ಹತ್ತಿಸಿ ಗಾಳಿಬೀಸುವ ಕಡೆಗೆ ಅಭಿಮುಖವಾಗಿ ಮಲಗಿರುತ್ತಾರೆ!''

ಇನ್ನೊಬ್ಬರ ಆಸ್ತಿ, ಐಶ್ವರ್ಯ, ಅಧಿಕಾರ ಮುಂತಾದ್ದನ್ನು ನೋಡಿದಾಗ ಕೆಲವರಿಗೆ ಅಸಹನೆ ಹುಟ್ಟುತ್ತದೆ. ಅದೇ ಹೊಟ್ಟೆಯಲ್ಲೆದ್ದ ಕಿಚ್ಚು. ಗುಡಿಸಲಿಗೆ ಬಿದ್ದ ಬೆಂಕಿ ಪಕ್ಕದ ಮನೆಗಳನ್ನೂ ಸುಟ್ಟು ತನ್ನನ್ನೂ ಸುಟ್ಟುಕೊಳ್ಳುತ್ತದೆ. ಇಷ್ಟಕ್ಕೆ ಅಡ್ಡಿ ಬಂದಾಗ ಕ್ರೋಧ ಹುಟ್ಟುತ್ತದೆ. 'ಕಾಮಾತ್ ಕ್ರೋಧೋಽಭಿಜಾಯತೇ.' ಹೊಟ್ಟೆಕಿಚ್ಚು, ಕ್ರೋಧ - ಇವುಗಳಿಂದ ಹುಟ್ಟತಕ್ಕದ್ದು ವೈರ. ಈ ಕಾರಣದಿಂದ ಎದುರಾದ ವೈರಿಗೆ ಪ್ರತೀಕಾರ ಮಾಡಿದರೆ ತಾತ್ಕಾಲಿಕವಾಗಿ ವೈರವು ಶಮನವಾದಂತಿರಬಹುದು. ಅದು ನಿರ್ಮೂಲವಾಗಿರುವುದಿಲ್ಲ. ಕ್ಷಯರೋಗವು ಸ್ವಲ್ಪ ಶಮನವಾದಂತೆ ಇದ್ದು ಮತ್ತೆ ಉಲ್ಬಣವಾಗುವುದು ನಿಶ್ಚಿತ.

ಋಣಶೇಷ, ರೋಗಶೇಷ, ಅಗ್ನಿಶೇಷ-ಇವನ್ನು ಉಳಿಸಬಾರದೆಂದು ನೀತಿಶಾಸ್ತ್ರ ಹೇಳುತ್ತದೆ. ಬಡ್ಡಿ-ಚಕ್ರಬಡ್ಡಿಗಳಿಂದ ಸಾಲವು ಶೂಲವಾಗಬಹುದು. ರೋಗವು ಮರುಕಳಿಸಿದರೆ ಗುಣವಾಗುವುದು ಕಷ್ಟ. ಬೆಂಕಿಯು ಒಳಗೊಳಗೇ ಹೊಗೆಯುತ್ತಿದ್ದು ಗಪ್ಪನೆ ಹತ್ತಿಕೊಳ್ಳಬಹುದು. ಇವುಗಳೊಡನೆ ಶತ್ರುಶೇಷವನ್ನೂ ಸೇರಿಸಬಹುದು.

ಮೇಲ್ಕಂಡ ಶ್ಲೋಕವನ್ನು ಬಲರಾಮನು ಶ್ರೀಕೃಷ್ಣನಿಗೆ ಹೇಳಿದ್ದಾನೆ. ''ನಾವು

ಈಗಲೇ ದಂಡೆತ್ತಿ ಹೋಗಿ ವೈರಿಯಾದ ಶಿಶುಪಾಲನನ್ನು ಮುಗಿಸಿಬಿಡಬೇಕು. ಇನ್ನು ತಡಮಾಡಿದರೆ ಅವನು ಕಾಲಯವನಾದಿಗಳೊಡನೆ ಸೇರಿ ಪ್ರಬಲನಾಗಿಬಿಡುತ್ತಾನೆ. ಅವನು ನಮ್ಮ ಸೋದರತ್ತೆಯ ಮಗನಾದರೂ ನಮಗೆ ಕೆಡುಕನ್ನೇ ಮಾಡುತ್ತಿದ್ದಾನೆ. ರುಕ್ಮಿಣಿಯು ನಿನ್ನನ್ನು ಮದುವೆಯಾಗಲು ಬಯಸಿದ್ದರೂ ಶಿಶುಪಾಲನು ಆಕೆಯ ತಂದೆಯ ರಾಜಧಾನಿಗೆ ಅವಳಿಗಾಗಿ ಹೋಗಿದ್ದನೆಂಬುದನ್ನು ಸ್ಮರಿಸಿಕೊ. ಆಗ ರುಕ್ಮಿಣಿಯ ಪತ್ರದಂತೆ ನೀನು ಹೋಗಿ ರುಕ್ಮಿಣಿಯನ್ನು ತಂದು ಮದುವೆಯಾಗಿದ್ದೀಯೆ. ಅನಂತರ ಆತನ ವೈರ ಬೆಳೆಯಿತು. ಬಭ್ರು ಎಂಬ ನಮ್ಮ ಯಾದವನ ಪತ್ನಿಯನ್ನು ಅಪಹರಿಸಿಕೊಂಡು ಹೋದ. ಆ ಶಿಶುಪಾಲನು ಹೀಗೆಯೇ ಕಿಡಿಗೇಡಿತನಗಳನ್ನು ಮಾಡುತ್ತಲೇ ಇದ್ದಾನೆ. ಇನ್ನು ನೀನು ಸುಮ್ಮನಾದರೆ ಹುಲ್ಲಿನ ಬಣವೆಗೆ ಬೆಂಕಿ ಹಚ್ಚಿ ಪಕ್ಕದಲ್ಲಿ ಮುಸುಕುಹಾಕಿ ಮಲಗಿದಂತಾದೀತು'' - ಎಂದು ಎಚ್ಚರಿಸಿದ್ದಾನೆ. ಮೇಲಿಂದ ಮೇಲೆ ಅಪಕಾರ ಮಾಡತಕ್ಕವನನ್ನು ಉಪೇಕ್ಷಿಸಬಾರದು.

ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ ಈ ಹೇಳಿಕೆ ಪಾಕಿಸ್ತಾನದೊಡನೆ ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತದೆ! ಶಿಶುಪಾಲನು ಶ್ರೀಕೃಷ್ಣನ ಸೋದರಭಾವ. ಪಾಕಿಸ್ತಾನವು ಭಾರತದ ದಾಯಾದಿ ಸೋದರ! ಕಾಶ್ಮೀರವು ರುಕ್ಮಿಣಿಯ ಸ್ಥಾನದಲ್ಲಿದೆ. ಅದನ್ನು ವಶಪಡಿಸಿಕೊಳ್ಳಲು ಪಾಕಿಸ್ತಾನ ಅಲ್ಲಿಗೆ ನುಗ್ಗಿತು. ಕಾಶ್ಮೀರವು ಪತ್ರದ ಮೂಲಕ ಭಾರತಕ್ಕೆ ಶರಣಾಯಿತು. ಭಾರತ-ಪಾಕಿಸ್ತಾನಗಳಿಗೆ ಯುದ್ಧಗಳೇ ನಡೆದು ವೈರವು ಉಲ್ಬಣಿಸಿತು. ಯುದ್ಧಗಳಲ್ಲಿ ಜಯಿಸಿದರೂ ಭಾರತವು ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿಕೊಳ್ಳದೆ ಉಪೇಕ್ಷಿಸಿತು. ತೊಂಬತ್ತು ಸಾವಿರ ಪಾಕಿಸ್ತಾನೀ ಸೈನಿಕರು ಸೆರೆಸಿಕ್ಕಿದ್ದರೂ ಆಕ್ರಮಿತ ಕಾಶ್ಮೀರವನ್ನು ಬಿಡಿಸಿಕೊಳ್ಳದೆ ಎಲ್ಲರ ಸೆರೆಯನ್ನೂ ಬಿಟ್ಟು ತನ್ನ ಔದಾರ್ಯವನ್ನು ತೋರಿಸಿಕೊಂಡಿತು. ಜಗತ್ತಿನಲ್ಲಿ ಈ ಬಗೆಯ ರಾಜನೀತಿಯೂ ಉಂಟೆ? 'ಶಾಂತಿಃ ಶಾಂತಿಃ ಶಾಂತಿಃ' ಎನ್ನುತ್ತ ಮುಸುಕುಹಾಕಿ ಮಲಗಿದ್ದರ ಫಲವಾಗಿ ಹುಲ್ಲುಬಣವೆಗೆ ಬೆಂಕಿ ಹತ್ತಿದೆ. ಶಿಶುಪಾಲನು ಅಣುಬಾಂಬುಗಳನ್ನು ಹಿಡಿದು ಹೆದರಿಸುತ್ತಿದ್ದಾನೆ. 'ಶತ್ರುಶೇಷಂ ನ ಶೇಷಯೇತ್' ಎಂದು ನಮ್ಮ ಪ್ರಾಚೀನರು ಸಾರುತ್ತಲೇ ಬಂದಿದ್ದಾರೆ.

**ಸ್ಥಾನಸ್ಥಿತಾ ಹಿ ಪೂಜ್ಯಂತೇ ಸರ್ವೇ ಲೋಕೇ ನರಾ ಯಥಾ ।**
**ಸ್ಥಾನಭ್ರಷ್ಟಾ ನ ಪೂಜ್ಯಂತೇ ಕೇಶಾ ದಂತಾಃ ಕುಶಾ ನಖಾಃ ॥ ೪೫॥**

— *ಗರುಡಪುರಾಣ, ೧-೧೧೫-೭೩*

''ಉತ್ತಮಸ್ಥಾನದಲ್ಲಿದ್ದಾಗ ಎಲ್ಲ ಬಗೆಯ ಜನರೂ ಗೌರವಕ್ಕೆ ಪಾತ್ರರಾಗಿಬಿಡುತ್ತಾರೆ. ಲೋಕದಲ್ಲಿ ಸರ್ವರೂ ಅವರನ್ನು ಗೌರವಿಸುತ್ತಾರೆ. ಅಂತಹ ಸ್ಥಾನವು ತಪ್ಪಿಹೋದಾಗ ಅವರಿಗೆ ಯಾವ ಗೌರವವೂ ಇರುವುದಿಲ್ಲ. ಉದಾಹರಣೆಗೆ - ತಲೆಕೂದಲು, ಹಲ್ಲು, ದರ್ಭೆ ಮತ್ತು ಉಗುರು!''

ಸಮಾಜದಲ್ಲಿ ಗೌರವಾದರಗಳು ತನಗೆ ಸಲ್ಲುತ್ತಿರಬೇಕೆಂಬುದು ಜನರ ಬಯಕೆಯಾಗಿರುತ್ತದೆ. ಹಣದ ಬಯಕೆಯಂತೆ ಇದಕ್ಕೆ ಮಿತಿಯಿಲ್ಲ. ಗೌರವಕ್ಕೆ ತಕ್ಕ ಯೋಗ್ಯತೆಯನ್ನು ಗಳಿಸಲು ಬೇಕಾದ ಪ್ರಯತ್ನವು ಮಾತ್ರ ಶೂನ್ಯವಾಗಿರುತ್ತದೆ. ಯೋಗ್ಯತೆಯಿದ್ದವರನ್ನು ಜನರು ಪುರಸ್ಕರಿಸುವುದೂ ವಿರಳವೇ. ಪುರಸ್ಕಾರವಿದ್ದರೂ ಅವರನ್ನರಿತ ಸಮೂಹದಲ್ಲಿ ಮಾತ್ರ. ಗೌರವಾದರಗಳನ್ನು ಪಡೆಯಲು ಹಲವಾರು ಮಾರ್ಗಗಳುಂಟು, ನಿಮಿತ್ತಗಳುಂಟು.

ಸಮಾಜಸೇವೆ, ವಿದ್ಯೆ, ಶಿಲ್ಪಕೌಶಲ, ಸಂಗೀತ, ಕವಿತೆ, ತ್ಯಾಗ, ಪರೋಪಕಾರ, ಅಧಿಕಾರ-ಮುಂತಾದವು ಗೌರವಸಂಪಾದನೆಯ ಮಾರ್ಗಗಳು. ಇವುಗಳಲ್ಲಿ ಅಧಿಕಾರವು ಹೆಚ್ಚು ಆಕರ್ಷಕವಾದದ್ದು. ಅದರಷ್ಟು ಆಕರ್ಷಣೆ ಉಳಿದವುಗಳಲ್ಲಿಲ್ಲ. ಗ್ರಾಮಪಂಚಾಯಿತಿ ಅಧ್ಯಕ್ಷತೆಯಿಂದ ಹಿಡಿದು ರಾಷ್ಟ್ರಪತಿ ಪದವಿಯವರೆಗೆ ಅದರ ಕ್ಷೇತ್ರ ವಿಶಾಲವಾದದ್ದು. ಎಲ್ಲರಿಗೂ ತೆರೆದಿರುವ ಆಕರ್ಷಣೆ ಅಧಿಕಾರದಲ್ಲಿದೆ. ಉಳಿದವು ಎಲ್ಲರಿಗೂ ತೆರೆದವಲ್ಲ. ಅವು ಮೀಸಲಾತಿಲಭ್ಯವಾದ ಸ್ಥಾನಗಳು (Reserved Vacancies), ನಿರ್ದಿಷ್ಟವಾದ ಅರ್ಹತೆಯಿಂದ ಮಾತ್ರ ಲಭ್ಯವಾಗತಕ್ಕವು. ಅಧಿಕಾರಕ್ಕೆ ಅರ್ಹತೆ ಮುಖ್ಯವಾದದ್ದೇನೂ ಅಲ್ಲ; ಕಾರ್ಯಸಾಧನೆಯ ಒಂದು ಚಾಕಚಕ್ಯತೆ ಮುಖ್ಯವಾದದ್ದು. ಆದರೆ

ಇವುಗಳಲ್ಲೊಂದು ವಿಶೇಷ ಉಂಟು. ವಿದ್ಯೆ, ಸಮಾಜಸೇವೆ - ಮುಂತಾದವುಗಳಿಂದ ಲಭಿಸಿದ ಕೀರ್ತಿ-ಗೌರವಗಳು ಶಾಶ್ವತವಾದವು. ಅವುಗಳಿಗೆ ಭ್ರಂಶವಿಲ್ಲ. ಅಧಿಕಾರವು ಸ್ಥಿರವಾದ್ದಲ್ಲ. ಅಧಿಕಾರದಲ್ಲಿರುವವರು ಸ್ಥಾನಭ್ರಷ್ಟರಾಗುವುದು ನಿಶ್ಚಿತ. ಅಧಿಕಾರದೊಡನೆ ಎಲ್ಲ ಗೌರವಾದರಗಳೂ ಆತನನ್ನು ಬೀಳ್ಕೊಂಡು ತೆರಳುತ್ತವೆ.

ಸ್ಥಾನಭ್ರಂಶದಿಂದಾಗುವ ಪರಿಣಾಮಕ್ಕೆ ದೃಷ್ಟಾಂತವಾಗಿ ತೋರಿಸಿದ ಉದಾಹರಣೆಗಳು ಬಹು ಸುಂದರವಾಗಿವೆ. ಈ ಶ್ಲೋಕವನ್ನು ರಚಿಸಿದವನು ಲೋಕದ ಸ್ಥಿತಿಗತಿಗಳನ್ನು ಚೆನ್ನಾಗಿ ಬಲ್ಲವನು; ರಸಿಕ. ಕೇಶವು ತಲೆಯಲ್ಲಿದ್ದಾಗ ಅಥವಾ ಗಡ್ಡ-ಮೀಸೆಗಳಾಗಿ ಮುಖದಲ್ಲಿದ್ದಾಗ ಅದಕ್ಕೆ ಶೋಭೆ. ತಲೆಯಿಂದ ಉದುರಿದಾಗ ಅಥವಾ ಕತ್ತರಿಸಿ ತೆಗೆದಾಗ ಅದು ಎಸೆಯಬೇಕಾದ ಕೊಳೆಯೆನಿಸಿಬಿಡುತ್ತದೆ. ಹಲ್ಲು ಬಾಯಿಯಲ್ಲಿದ್ದರೆ ಮುಖಕ್ಕೆ ಶೋಭೆ. ತಿಂಡಿಯನ್ನು ಅಗೆಯುವುದಕ್ಕೆ ಉಪಯುಕ್ತವಾದ್ದರಿಂದ ಅದಕ್ಕೆ ಗೌರವ. ದಂತವೈದ್ಯರು ಅದನ್ನು ಕಿತ್ತಮೇಲೆ, ಬಾಯಿಯಲ್ಲಿರಲು ಯೋಗ್ಯವಾದ ವಸ್ತುವನ್ನು ಕೈಯಲ್ಲಿ ಮುಟ್ಟಲೂ ಹೇಸಿಗೆಯಾಗಿಬಿಡುತ್ತದೆ! ದರ್ಭೆಗಳಿಗೆ ಹೋಮಕಾಲದಲ್ಲಿ ವೇದಿಕೆಯ ಮೇಲೆ ಗೌರವ, ಆದರ, ಪವಿತ್ರತೆ. ಹೋಮಕಾರ್ಯವು ಮುಗಿದು ವೇದಿಕೆಯನ್ನು ಶುದ್ಧಿಮಾಡಿದಮೇಲೆ ಅದು ಹುಲ್ಲುಕಡ್ಡಿಯೆನಿಸಿ ಬೂದಿಯೊಡನೆ ಸೇರಿ ಎಸೆಯುವ ವಸ್ತುವಾಗಿಬಿಡುತ್ತದೆ. ಉಗುರು ಬೆರಳಿನ ತುದಿಯಲ್ಲಿ ಯಥಾಸ್ಥಾನದಲ್ಲಿದ್ದಾಗ ಬೆರಳಿಗೆ ಶೋಭೆ. ತನ್ನ ಸ್ಥಾನದಿಂದ ಮುಂದೆ ಹೋದಲ್ಲಿ ಕತ್ತರಿಪ್ರಯೋಗಕ್ಕೆ ಸಿಕ್ಕ ಕಸವಾಗಿಬಿಡುತ್ತದೆ. ಅಧಿಕಾರಿಯು ಅಧಿಕಾರಸ್ಥಾನದಲ್ಲಿದ್ದಾಗ ಅನುಕಂಪ, ಸೌಜನ್ಯಗಳಿಂದ ವರ್ತಿಸಿ ಜನರಿಗೆ ಉಪಕಾರ ಮಾಡಿದರೆ, ಅದನ್ನು ಜನರು ಮರೆಯುವುದಿಲ್ಲ. ಅವನು ಅಧಿಕಾರಚ್ಯುತನಾದರೂ ಗೌರವಾದರಗಳು ಇದ್ದೇ ಇರುತ್ತವೆ.

**ಧನೇನ ಕಿಂ ಯೋ ನ ದದಾತಿ ನಾಶ್ನುತೇ**
**ಬಲೇನ ಕಿಂ ಯೇನ ರಿಪುಂ ನ ಬಾಧತೇ।**
**ಶ್ರುತೇನ ಕಿಂ ಯೇನ ನ ಧರ್ಮಮಾಚರೇತ್**
**ಕಿಮಾತ್ಮನಾ ಯೋ ನ ಜಿತೇಂದ್ರಿಯೋ ಭವೇತ್ ॥ ೪೬॥**

*— ಹಿತೋಪದೇಶ, ಸುಹೃದ್ಭೇದ -೯*

''ಯಾವಾತನು ಹಣವನ್ನು ಯಾರಿಗೂ ಕೊಡುವುದಿಲ್ಲವೋ, ತಾನೂ ಬಳಸುವುದಿಲ್ಲವೋ, ಆತನಿಗೆ ಹಣದಿಂದ ಪ್ರಯೋಜನವೇನು? ಯಾವನು ಬಲವಿದ್ದರೂ ಅದನ್ನು ಬಳಸಿ ವೈರಿಯನ್ನು ಎದುರಿಸುವುದಿಲ್ಲವೋ ಆತನಿಗೆ ಬಲದಿಂದ ಆಗುವ ಪ್ರಯೋಜನವೇನು? ಯಾವನು ಜ್ಞಾನಸಂಪತ್ತು ಇದ್ದರೂ ಧರ್ಮಮಾರ್ಗದಲ್ಲಿ ನಡೆಯುವುದಿಲ್ಲವೋ ಆತನ ಜ್ಞಾನದಿಂದ ಫಲವೇನು? ಜಿತೇಂದ್ರಿಯನಾಗದಿದ್ದಾಗ ಆತನಿಗೆ ಜೀವಿತದಿಂದ ಆಗುವ ಫಲವೇನು?''

ಈ ಶ್ಲೋಕದ ರಚನೆ ಅಷ್ಟೇನು ಉತ್ತಮವಲ್ಲದಿದ್ದರೂ ಅದು ಬೋಧಿಸುವ ನೀತಿ ಉತ್ತಮವಾಗಿದೆ. ಮನುಷ್ಯನಿಗೆ ಪ್ರಿಯವಾದ ವಸ್ತುಗಳು ನಾಲ್ಕು: ಹಣ, ದೇಹಬಲ, ವಿದ್ಯೆ ಮತ್ತು ಆತ್ಮ (ತಾನು). ಇವುಗಳ ಸದ್ವಿನಿಯೋಗವಾದರೆ ಸಾರ್ಥಕ. ದುರ್ವಿನಿಯೋಗವಾದರೆ ದುರರ್ಥಕ. ವಿನಿಯೋಗವಾಗದಿದ್ದರೆ ನಿರರ್ಥಕ. ಹಣವಿರುವುದು ಬಳಸುವುದಕ್ಕಾಗಿ. ತಾನು ಭೋಗಿಸಬೇಕು ಅಥವಾ ಸತ್ಪಾತ್ರವನ್ನು ನೋಡಿ ದಾನ ಮಾಡಬೇಕು. ತಾನು ಬಳಸಿದರೂ ಭೋಗಸಾಮಗ್ರಿಯನ್ನು ಕೊಳ್ಳುವುದರಿಂದ ಅದನ್ನು ತಯಾರಿಸತಕ್ಕವರಿಗೂ ಮಾರತಕ್ಕವರಿಗೂ ಕೂಡ ಪ್ರಯೋಜನವಾಗುತ್ತದೆ. ದೇಹಬಲವು ಮುಖ್ಯವಾಗಿ ಬೇಕಾಗತಕ್ಕದ್ದು ಯೋಧನಿಗೆ. ರಾಷ್ಟ್ರರಕ್ಷಣೆಗಾಗಿ ಅದರ ಸದ್ವಿನಿಯೋಗ ಇದ್ದೇ ಇದೆ. ಸಾಮಾನ್ಯಜನರಿಗೆ, ಅದರಲ್ಲಿಯೂ ಈ ಯಂತ್ರಯುಗದಲ್ಲಿ, ದೇಹಬಲದಿಂದಾಗುವ ವಿಶೇಷ ಪ್ರಯೋಜನ ಯಾವುದು? ಅಸಹಾಯಕರಾದವರಿಗೆ ದುಷ್ಟರಿಂದ, ರೌಡಿಗಳಿಂದ

ಪೀಡೆಯುಂಟಾದಾಗ ಅವರನ್ನು ರಕ್ಷಿಸುವುದಕ್ಕೆ ದೇಹಬಲವು ಆವಶ್ಯಕ. ಆಕಸ್ಮಿಕ ಘಟನೆಗಳಲ್ಲಿ ಸಹಾಯಕ್ಕೆ ಹೋಗದವರು ಹೇಡಿಗಳು. ಅಂತಹ ಮೂಕಸಾಕ್ಷಿಗಳು ಪಾಪಿಗಳೆಂದು ಧರ್ಮಶಾಸ್ತ್ರವು ಘೋಷಿಸಿದೆ. ರೈಲಿನಲ್ಲಿ ಹೋಗುವಾಗ ಒಬ್ಬ ನೀಚನು ಅಲ್ಲಿದ್ದ ಹುಡುಗಿಯ ಮೇಲೆ ಅತ್ಯಾಚಾರ ಮಾಡಿದನೆಂದೂ ಅದೇ ಗಾಡಿಯಲ್ಲಿದ್ದ ಪ್ರಯಾಣಿಕರೆಲ್ಲ ತೆಪ್ಪಗೆ ಕುಳಿತಿದ್ದರೆಂದೂ ಈಚೆಗೆ ಪತ್ರಿಕೆಗಳಲ್ಲಿ ಎಲ್ಲರೂ ಓದಿರಬಹುದು. ಚೈನನ್ನು ಎಳೆದು ರೈಲನ್ನು ನಿಲ್ಲಿಸುವುದಕ್ಕೂ ಅವರಿಗೆ ಆಗುತ್ತಿರಲಿಲ್ಲವೆ? ಆ ಜನರು ಮನುಷ್ಯಾಕೃತಿಯ ಪಶುಗಳೆನ್ನಲಡ್ಡಿಯಿಲ್ಲ.

ಧರ್ಮಾಧರ್ಮಗಳನ್ನು ತಿಳಿದ ವಿದ್ಯಾವಂತನೂ ಧರ್ಮನಿಷ್ಠನಾಗದಿದ್ದರೆ ಅವನ ವಿದ್ಯೆಯಿಂದ ಪ್ರಯೋಜನವೇನು? ವಿದ್ಯಾವಂತರೇ ಭ್ರಷ್ಟಕಾರ್ಯದಲ್ಲಿ ತೊಡಗಿರುವುದು ಈ ರಾಷ್ಟ್ರದ ದುರಂತ.

ತನಗಿಂತಲೂ ತನಗೆ ಪ್ರಿಯವಾದ ಇನ್ನೊಂದು ವಸ್ತು ಯಾರಿಗೂ ಇಲ್ಲ. ಆದರೆ ತಾನು ಯಾರು - ಎಂದು ತಿಳಿದವರು ಎಷ್ಟು ಜನರಿದ್ದಾರೆ? ತಿಳಿಯುವ ಇಚ್ಛೆಯುಳ್ಳವರೂ ವಿರಳವೇ. ದೇಹವೇ ಆತ್ಮ, ಇಂದ್ರಿಯಗಳೇ ತಾನು - ಎಂದು ಭ್ರಾಂತರಾಗಿರತಕ್ಕವರೇ ಅಧಿಕ. ''ಅಯ್ಯಾ, ಇಂದ್ರಿಯಗಳು ನಿನ್ನ ಅಂತರಂಗಶತ್ರುಗಳು. ಅವನ್ನು ಮೊದಲು ಗೆಲ್ಲು'' - ಎಂಬುದು ನೀತಿಶಾಸ್ತ್ರದ ಉಪದೇಶ.

**ವಯಮಿಹ ಪರಿತುಷ್ಟಾ ವಲ್ಕಲೈಸ್ತ್ವಂ ದುಕೂಲೈಃ**
**ಸಮ ಇಹ ಪರಿತೋಷೋ ನಿರ್ವಿಶೇಷೋ ವಿಶೇಷಃ ।**
**ಸ ತು ಭವತಿ ದರಿದ್ರೋ ಯಸ್ಯ ತೃಷ್ಣಾ ವಿಶಾಲಾ**
**ಮನಸಿ ಚ ಪರಿತುಷ್ಟೇ ಕೋಽರ್ಥವಾನ್ ಕೋ ದರಿದ್ರಃ ॥ ೪೭॥**

*- ವೈರಾಗ್ಯಶತಕ, ೪೯*

''ರಾಜ, ನೀನು ನಯವಾದ ರೇಷ್ಮೆವಸ್ತ್ರಗಳಿಂದ ಸಂತೋಷಪಡುವಂತೆ, ನಾವು ನಾರುಬಟ್ಟೆಗಳಿಂದ ಸಂತೋಷಪಡುತ್ತೇವೆ! ನಮ್ಮಿಬ್ಬರ

ಸಂತೋಷವೂ ಸಮತೂಕವಾಗಿದೆ. ಆದರಲ್ಲಿ ವಿಶೇಷವಿಲ್ಲದ್ದೇ ಒಂದು ವಿಶೇಷ! ಯಾವನ ಆಸೆ ಅತಿಯಾಗಿರುತ್ತದೆಯೋ ಅವನು ಯಾವಾಗಲೂ ದರಿದ್ರನೇ. ಮನಸ್ಸು ಸಂತೃಪ್ತವಾದಾಗ ಶ್ರೀಮಂತನು ಯಾರು, ಬಡವನು ಯಾರು ?''

ಸಂತೃಪ್ತಿ, ಸಂತುಷ್ಟಿ - ಇವೆರಡೂ ಜೋಡಿ ಶಬ್ದಗಳು. ಸಂತೃಪ್ತಿ ಇದ್ದಲ್ಲಿ ಸಂತುಷ್ಟಿ ಇರುತ್ತದೆ, ಸಂತುಷ್ಟಿಯಿದ್ದಲ್ಲಿ ಸಂತೃಪ್ತಿ ಇರುತ್ತದೆ, ರಾಮ-ಲಕ್ಷ್ಮಣರಿದ್ದ ಹಾಗೆ. ರಾಮನಿದ್ದಲ್ಲಿ ಲಕ್ಷ್ಮಣ, ಲಕ್ಷ್ಮಣನಿದ್ದಲ್ಲಿ ರಾಮ. ಆಸೆ ಹುಟ್ಟಿದಾಗ ಅದು ನೆರವೇರಿದರೆ ಮಾತ್ರ ಸಂತೋಷ, ನೆರವೇರದಿದ್ದರೆ ದುಃಖವೇ. ಆಸೆಯೇ ಹುಟ್ಟದಿದ್ದರೆ ತೃಪ್ತಿಯಿರುವುದರಿಂದ ಸದಾ ಸಂತೋಷವೇ; ದುಃಖದ ಸಂಭವವೇ ಇಲ್ಲ.

ಯಾರಿಗೆ ತೃಪ್ತಿ ಇಲ್ಲವೋ ಅವರ ಆಸೆಗಳಿಗೆ ತುದಿ ಇಲ್ಲ. ದುಃಖವು ತಪ್ಪುವುದೂ ಇಲ್ಲ. ಒಬ್ಬ ರಾಜ ಬೇಟೆಯಾಡಲು ಅರಣ್ಯಕ್ಕೆ ಹೋಗಿ ದಣಿದು ಒಬ್ಬ ಋಷಿಯ ಆಶ್ರಮಕ್ಕೆ ಬಂದ. ಋಷಿಯು ಹಣ್ಣುಹಂಪಲುಗಳನ್ನಿತ್ತು ರಾಜನನ್ನು ಸತ್ಕರಿಸಿದ. ರಾಜನು ಸಂತೃಪ್ತನಾಗಿ ವಾಪಸ್ಸು ಅರಮನೆಗೆ ಬಂದು ಕೆಲವು ರೇಷ್ಮೆವಸ್ತ್ರಗಳನ್ನೂ ಹಣವನ್ನೂ ಆ ಋಷಿಗೆ ಕಾಣಿಕೆಯಾಗಿ ಅರ್ಪಿಸುವಂತೆ ಹೇಳಿ ಮಂತ್ರಿಗಳ ಮೂಲಕ ಅವನ್ನು ಕಳಿಸಿದ. ಋಷಿಯು ಅವನ್ನು ಸ್ವೀಕರಿಸಲು ನಿರಾಕರಿಸಿದ. ಮಂತ್ರಿಗಳು ಎಷ್ಟು ಬೇಡಿಕೊಂಡರೂ ವಿರಕ್ತನಾದ ಆ ಋಷಿಯು ಕಾಣಿಕೆಗಳನ್ನು ತೆಗೆದುಕೊಳ್ಳದೆ ವಾಪಸ್ಸು ಕಳಿಸಿದನು. ಜೊತೆಗೆ 'ವಯಮಿಹ ಪರಿತುಷ್ಟಾಃ' ಎಂಬ ಶ್ಲೋಕವನ್ನು ಬರೆದು ರಾಜನಿಗೆ ಕಳಿಸಿದನಂತೆ.

ಒಬ್ಬ ಜಿಪುಣನಾದ ಶ್ರೀಮಂತನು ಜೋಯಿಸನೊಬ್ಬನಿಗೆ ತನ್ನ ಜಾತಕವನ್ನು ತೋರಿಸಿ ತನ್ನ ಭಾಗ್ಯಯೋಗವೆಷ್ಟೆಂಬುದನ್ನು ಹೇಳುವಂತೆ ಕೇಳಿಕೊಂಡನಂತೆ. ಆ ಜ್ಯೋತಿಷಿ ಜಾತಕವನ್ನು ಚೆನ್ನಾಗಿ ಪರಿಶೀಲಿಸಿ, ''ಅಯ್ಯಾ, ನೀನು ತುಂಬ ಶ್ರೀಮಂತನಾಗುವೆ. ಭಾಗ್ಯಯೋಗ ತುಂಬ ಉತ್ತಮವಿದೆ. ಇನ್ನು ಏಳು ತಲೆಮಾರುಗಳಿಗಾಗುವಷ್ಟು

ಧನರಾಶಿಯನ್ನು ಸಂಪಾದಿಸುತ್ತೀಯೆ'' - ಎಂದನು. ಶ್ರೀಮಂತನು ಪೆಚ್ಚುಮೋರೆ ಮಾಡಿಕೊಂಡು ಅಳತೊಡಗಿದನು. ಜ್ಯೋತಿಷಿಯು ಅಚ್ಚರಿಯಿಂದ ''ಏಕಯ್ಯಾ ಇಷ್ಟು ದೊಡ್ಡ ಧನಯೋಗವಿದೆಯೆಂದರೆ ಅಳುತ್ತೀಯೆ?'' ಎಂದು ಕೇಳಿದನಂತೆ. ಆ ಜಿಪುಣ ಶ್ರೀಮಂತ ''ಸ್ವಾಮಿ, ನನ್ನ ಎಂಟನೇ ತಲೆಯವರ ಗತಿ ಏನು? ಅವರಿಗೆ ಏನೂ ಉಳಿಯುವುದೇ ಇಲ್ಲವಲ್ಲ!'' - ಎಂದು ಹೇಳುತ್ತ ಅಳುತ್ತಲೇ ಹೊರಟು ಹೋದನಂತೆ! ಅವನು ಅಳುವುದನ್ನು ನೋಡಿ ಜ್ಯೋತಿಷಿಯು ತನ್ನ ಸಂಭಾವನೆಯನ್ನೂ ಕೇಳಲಿಲ್ಲ!

ಈ ಸುಭಾಷಿತವನ್ನಿಲ್ಲಿ ಸ್ಮರಿಸಿಕೊಳ್ಳಬಹುದು -

**ಅಣುಮಾತ್ರಂ ಮನಸ್ತಸ್ಮಾತ್ ಆಶಾ ನಾಮ ಲತೋದ್ಗತಾ ।**
**ತಸ್ಯಾ ನಾಲಮುಪಘ್ನಾಯ ಭುವನಾನಿ ಚತುರ್ದಶ ॥**

''ಮನಸ್ಸು ಪರಮಾಣುವಿನಷ್ಟು ಚಿಕ್ಕದು. ಅದರಿಂದ ಆಸೆಯೆಂಬ ಒಂದು ಬಳ್ಳಿ ಹುಟ್ಟುತ್ತದೆ. ಅದು ಹಬ್ಬಿ ಹರಡಿಕೊಳ್ಳುವುದಕ್ಕೆ ಹದಿನಾಲ್ಕು ಲೋಕಗಳೂ ಸಾಲವು!''

**ಪುರಾ ವಿದ್ವತ್ತಾಸೀದುಪಶಮವತಾಂ ಕ್ಲೇಶಹತಯೇ**
**ಗತಾ ಕಾಲೇನಾಸೌ ವಿಷಯಸುಖಸಿದ್ಧ್ಯೈ ವಿಷಯಿಣಾಮ್ ।**
**ಇದಾನೀಂ ತು ಪ್ರೇಕ್ಷ್ಯ ಕ್ಷಿತಿತಲಭುಜಃ ಶಾಸ್ತ್ರವಿಮುಖಾನ್**
**ಅಹೋ ಕಷ್ಟಂ ಸಾಪಿ ಪ್ರತಿದಿನಮಧೋಽಧಃ ಪ್ರವಿಶತಿ ॥ ೪೮ ॥**

— ಭರ್ತೃಹರಿ: ವೈರಾಗ್ಯಶತಕ

''ಪೂರ್ವಕಾಲದಲ್ಲಿ ಶಾಂತಸ್ವಭಾವದವರಿಗೆ ವಿದ್ಯೆ ಇತ್ತು. ಅದು ಜನರ ಕಷ್ಟಗಳನ್ನು ಪರಿಹರಿಸುವುದಕ್ಕೆ ಉಪಯುಕ್ತವಾಗುತ್ತಿತ್ತು. ಕೆಲವು ಕಾಲದ ಮೇಲೆ ಆ ವಿದ್ಯೆ ವಿಷಯಸುಖಲೋಲುಪರಿಗೆ ವಶವಾಗಿ ಅವರ ಸುಖಗಳನ್ನು ಈಡೇರಿಸಿಕೊಡುವುದಕ್ಕೆ ಮಾತ್ರ ಸಾಧನವಾಯಿತು.

ಈಗಲಾದರೋ ರಾಜ್ಯವನ್ನಾಳತಕ್ಕವರು ಶಾಸ್ತ್ರವಿಮುಖರಾಗಿಬಿಟ್ಟಿದ್ದಾರೆ. ಅಯ್ಯೋ ಕಷ್ಟವೇ! ಇವರನ್ನು ನೋಡಿದರೆ, ಇರುವ ಅಲ್ಪವಿದ್ಯೆಯೂ ಪ್ರತಿದಿನ ಕೆಳಕೆಳಗೆ ಇಳಿದುಹೋಗುತ್ತಿದೆ!''

ಭರ್ತೃಹರಿಯು ಎಷ್ಟು ಸೊಗಸಾಗಿ ಇಂದಿನ ಪರಿಸ್ಥಿತಿಯನ್ನು ಚಿತ್ರಿಸಿದ್ದಾನೆ! ಈ ಶ್ಲೋಕಕ್ಕೆ ವಿವರಣೆಯೇ ಬೇಡವೆನಿಸುತ್ತದೆ. ವಿದ್ಯೆಯಿಂದ ಮನುಷ್ಯನ ನಡೆನುಡಿಗಳು ಉತ್ತಮವಾಗಿ ವಿವೇಕವು ವರ್ಧಿಸಬೇಕೆಂಬುದು ಮುಖ್ಯವಾದ ಫಲ. ಗೋಣಿಚೀಲದಲ್ಲಿ ತುಂಬಿದಂತೆ ಹಲವಾರು ವಿಷಯಗಳನ್ನು ತುಂಬಿಕೊಳ್ಳುವುದು ಮುಖ್ಯವಾದ್ದಲ್ಲ. ಗಣಕಯಂತ್ರವು (ಕಂಪ್ಯೂಟರ್) ಇನ್ನೂ ಅತ್ಯಧಿಕವಾದ ವಿಷಯಗಳನ್ನು ತಪ್ಪಿಲ್ಲದಂತೆ ತುಂಬಿಕೊಳ್ಳಬಲ್ಲದು. ಅದರ ಸ್ಮರಣಶಕ್ತಿಯೂ ಸಾಟಿಯಿಲ್ಲದ್ದು! ''ವಿದ್ಯಾ ದದಾತಿ ವಿನಯಂ.'' ವಿನಯವೆಂದರೆ ವಿಶಿಷ್ಟವಾದ ನೀತಿ; ಅದು ಬರಿಯ ವಿಧೇಯತೆಯಲ್ಲ. ಇದು ನಿತ್ಯ-ಇದು ಅನಿತ್ಯ, ಇದು ಸತ್ಯ-ಇದು ಅನೃತ, ಇದು ನ್ಯಾಯ-ಇದು ಅನ್ಯಾಯ, ಇದು ಧರ್ಮ-ಇದು ಅಧರ್ಮ - ಎಂದು ವಿವೇಚಿಸಲು ಸಮರ್ಥವಾದ ವಿವೇಕದಿಂದ ವಿಶಿಷ್ಟವಾದ ವಿದ್ಯೆಯೇ ಸರಿಯಾದ ವಿದ್ಯೆಯೆಂದು ನಮ್ಮ ಪ್ರಾಚೀನರು ನಂಬಿದ್ದರು. ಇಂತಹ ವಿದ್ಯೆಯಿಂದ ಕೋಪ, ದ್ವೇಷ, ಅಸೂಯೆ ಮುಂತಾದ ಚಿತ್ತದೋಷಗಳು ಹಿಂದಕ್ಕೆ ಸರಿಯುತ್ತವೆ. ಅಲೆಗಳು ಅಳಿದಾಗ ಸಮುದ್ರವು ಶಾಂತವಾಗುವಂತೆ ಆಗ ಮಾತ್ರ ಚಿತ್ತವು ಶಾಂತವಾದೀತು. ''ಸ ಏವ ಸರ್ವಶಾಸ್ತ್ರಜ್ಞಃ ಯಸ್ಯ ಶಾಂತಂ ಮನಃ ಸದಾ'' - ಯಾವಾತನ ಮನಸ್ಸು ಸದಾ ಶಾಂತವಾಗಿರುತ್ತದೆಯೋ ಆತನೇ ಸರ್ವಶಾಸ್ತ್ರಗಳನ್ನು ಅರಿತವನೆಂದು ಹೇಳಬಹುದು. ಇಂತಹ ವಿದ್ಯಾವಂತನು ತನ್ನಂತೆ ಪರರು ಎಂಬುದನ್ನು ಮರೆಯದೆ, ಸ್ವಾರ್ಥಲೇಶವೂ ಇಲ್ಲದೆ, ಜನರ ಕಷ್ಟಕಾರ್ಪಣ್ಯಗಳನ್ನು ಹೋಗಲಾಡಿಸಲು ಹೃದಯಪೂರ್ವಕವಾಗಿ ಯತ್ನಿಸುತ್ತಿರುತ್ತಾನೆ.

ವ್ಯಾಸಮಹರ್ಷಿಗಳು ಮಹಾಭಾರತದಲ್ಲಿ ''ಶ್ವಃ ಶ್ವಃ ಪಾಪೀಯದಿವಸಾಃ ಸಮುಪಸ್ಥಿತದಾರುಣಾಃ'' ಎಂದು ಇಂದಿನ ಕಲಿಯುಗವನ್ನು ವರ್ಣಿಸಿದ್ದಾರೆ. ''ನಾಳೆ-ನಾಳೆಯು ಹಿಂದಿನ ದಿನಕ್ಕಿಂತ ಕೆಟ್ಟದಿನವಾಗುತ್ತ ಹೋಗುವುದು.'' ನಾಳೆಗಿಂತ

ಈ ದಿನ ಉತ್ತಮ; ನಿನ್ನೆಗಿಂತ ಇಂದು ಕೆಟ್ಟದಿನ - ಎಂದುಕೊಳ್ಳುವ ದಾರುಣ ಪರಿಸ್ಥಿತಿ ಒದಗುವುದು - ಎಂದು ತಾತ್ಪರ್ಯ. ಇದು ಕಲಿಯುಗದಲ್ಲಿ ಅನುಭವಕ್ಕೆ ಬರುತ್ತಿರುವ ಸತ್ಯವಾದ ಗಾಥೆ.

ವಿದ್ಯಾವಂತರು ವಿಷಯಭೋಗವನ್ನು ಲೋಕಹಿತಕ್ಕಿಂತಲೂ ಮುಖ್ಯವೆಂದೆಣಿಸಿದಾಗ ಸ್ವಾರ್ಥವು ಮೈಕೊಡವಿ ಮೇಲೆದ್ದು ನಿಂತುಬಿಡುತ್ತದೆ; ಹೀಗಿರುವಾಗ ''ವಿದ್ಯಾ ದದಾತಿ ವಿನಯಂ'' ಎಂಬ ನುಡಿ ಸುಳ್ಳಾಯಿತಲ್ಲವೆ? - ಎಂಬ ಪ್ರಶ್ನೆ ಹುಟ್ಟುತ್ತದೆ. ಸುಭಾಷಿತಕಾರರ ನುಡಿ ಅತ್ಯಂತ ವಿರಳವಾಗಿ ಒಂದೊಂದು ಸಲ ಎಡವಬಹುದು; ಸಾರ್ವತ್ರಿಕವಾಗಿ ಎಂದಿಗೂ ಸುಳ್ಳಾಗದು. ವಸ್ತುಸ್ಥಿತಿ ಇದು: ಪದವೀಧರರಾದ ಮಾತ್ರಕ್ಕೆ ಅಂಥವರನ್ನು ವಿದ್ಯಾವಂತರೆನ್ನಲಾಗದು. ಅವರು ಕಲಿತಿರುವುದು ಧನ ಮತ್ತು ಅಧಿಕಾರಗಳನ್ನು ಗಳಿಸಲು ಬೇಕಾದ ಒಂದು ಅರ್ಹತೆಯನ್ನು ಮಾತ್ರ. ಇಂದಿನ ಶಾಲಾಕಾಲೇಜುಗಳಲ್ಲಿ ಸಾಮಾನ್ಯನೀತಿಯನ್ನಾಗಲಿ ಧರ್ಮಾಧರ್ಮಗಳ ವಿವೇಕವನ್ನಾಗಲಿ ಕಲಿಸುವುದೇ ಇಲ್ಲವಷ್ಟೆ. ಕಥೆ, ಕಾದಂಬರಿ - ಮುಂತಾದ ಸಾಹಿತ್ಯದಲ್ಲಾಗಲಿ, ಪತ್ರಿಕೆಗಳಲ್ಲಾಗಲಿ, ಟಿ.ವಿ. ಸಿನೆಮಾ - ಮುಂತಾದ ಪ್ರದರ್ಶಕಗಳಲ್ಲಾಗಲಿ ನೀತಿ ಧರ್ಮಗಳಿಗೆ ಸ್ಥಾನವೇ ಇಲ್ಲದಾಗ ಪ್ರಜೆಗಳು ನೀತಿವಂತರಾಗುವುದು ಹೇಗೆ? ಧರ್ಮ-ನಾಸ್ತಿಕತೆಗಳು ಎಂದಿಗೂ ಒಂದೆಡೆಯಲ್ಲಿ ನಿಲ್ಲತಕ್ಕವಲ್ಲ. ಎಣ್ಣೆ-ಸೀಗೆಗಳಂತೆ ಅವು ಸದಾ ಹೋರಾಡತಕ್ಕವು. ಸಮಾಜದಲ್ಲಿ ವಿಷಯಸುಖಲೋಲುಪರ, ಮೂಢಮೂರ್ಖರ ಸಂಖ್ಯೆ ಯಾವಾಗಲೂ ಅಧಿಕವಾಗಿರುತ್ತದೆ. ಇಂಥವರ ಸಂಖ್ಯಾಬಲಕ್ಕೆ ಪ್ರಜಾಪ್ರಭುತ್ವವು ಮಣಿಯಬೇಕಾಗಿರುವುದರಿಂದ ನೀತಿ-ಧರ್ಮಗಳ ಸ್ಥಾನವು ದುರ್ಬಲವಾಗುತ್ತಲೇ ಹೋಗುವುದು.

**ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।**
**ಸಂಯೋಗಾ ವಿಪ್ರಯೋಗಾಂತಾ ಮರಣಾಂತಂ ಚ ಜೀವಿತಮ್ ॥ ೪೯ ॥**

*— ವಾಲ್ಮೀಕಿರಾಮಾಯಣ, ಅಯೋಧ್ಯಾ. ೧೦೫-೧೬*

"ಸಮಸ್ತ ಧನಾದಿರಾಶಿಗಳೂ ಕ್ಷಯದಲ್ಲಿ ಮುಕ್ತಾಯಗೊಳ್ಳುತ್ತವೆ. ಎತ್ತರಗಳನ್ನೇರುವುದೆಲ್ಲವೂ ಕೆಳಗೆ ಬೀಳುವುದರಲ್ಲಿ ಕೊನೆಗೊಳ್ಳುತ್ತವೆ. ಸಂಯೋಗಗಳು ವಿಯೋಗಗಳಲ್ಲಿ ಮುಗಿಯುತ್ತವೆ. ಜೀವಿತವು ಮರಣದಲ್ಲಿ ಅಂತ್ಯಗೊಳ್ಳುತ್ತದೆ."

ಶ್ರೀರಾಮನು ವನವಾಸಕ್ಕೆ ಹೋದಾಗ, ಆತನು ಹಿಂದಿರುಗಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾಗಬೇಕೆಂದು ಭರತನು ಹೋಗಿ ಪರಿಪರಿಯಾಗಿ ಪ್ರಾರ್ಥಿಸಿಕೊಳ್ಳುತ್ತಾನೆ. ಆಗ ಶ್ರೀರಾಮನು ಹೇಳಿದ ಸಮಾಧಾನದ ನುಡಿ ಇದು.

ಜಗತ್ತಿನಲ್ಲಿ ಯಾವುದೂ ಶಾಶ್ವತವಾದ್ದಲ್ಲ. ಧನ, ಧಾನ್ಯಾದಿಗಳ ರಾಶಿಯೇ ತುಂಬಿದ್ದರೂ ಒಂದು ದಿನ ಎಲ್ಲವೂ ಕ್ಷಯಿಸಿಹೋಗುತ್ತದೆ. ಧಾನ್ಯವು ತಿಂದು ಖರ್ಚಾಗಬಹುದು. ಧನದ ರಾಶಿಯೂ ನಿಲ್ಲತಕ್ಕದ್ದಲ್ಲ. ಬಳಸಿಯೂ ಉಳಿದರೆ ದರೋಡೆಕಾರರು ಅಪಹರಿಸಬಹುದು. ಹಾಗೂ ಆಗದಿದ್ದಲ್ಲಿ ಈ ಶ್ರೀಮಂತನೇ ಮನೆಮಠಗಳೆಲ್ಲವನ್ನೂ ತ್ಯಜಿಸಿ, ಇಷ್ಟವಿಲ್ಲದಿದ್ದರೂ ಶ್ಮಶಾನದ ಕಡೆಗೆ ಸಾಗುವುದು ನಿಶ್ಚಯ. ಅಲ್ಲಿ ಈತನ ಪ್ರಿಯಬಂಧುಗಳೇ ಅವನ ಬಟ್ಟೆಯನ್ನು ಕಿತ್ತುಹಾಕಿ ಚಿತೆಗೆ ಬೆಂಕಿಯನ್ನು ಹಚ್ಚುತ್ತಾರೆ ಅಥವಾ ಮಣ್ಣಿನ ಗುಂಡಿಯಲ್ಲಿ ಹೂಳಿ ಮನೆಗೆ ಹೋಗುತ್ತಾರೆ. ಸತ್ತವನ ಜೊತೆಗೆ ಹಣವೂ ಹೋಗುವುದಿಲ್ಲ. ಯಾರಿಗಾಗಿ ಧನರಾಶಿಯನ್ನು ಸಂಪಾದಿಸಿ ಇಟ್ಟಿದ್ದನೋ ಆ ಹೆಂಡತಿ ಮಕ್ಕಳೂ ಸಹ ಅವನ ಜೊತೆಗೆ ಹೋಗುವುದಿಲ್ಲ. "ಧರ್ಮಸ್ತಮನುಗಚ್ಛತಿ" - ಅವನ ಹಿಂದೆ ಕರ್ಮಫಲ ಒಂದೇ ತಪ್ಪದೆ ಬರುತ್ತದೆ.

ಅಧಿಕಾರದಲ್ಲಿ ಎಷ್ಟು ಎತ್ತರಕ್ಕೆ ಏರಿದರೂ ಕೆಳಗಿಳಿಯುವುದು ತಪ್ಪದು. ಮೇಲೇರಿದವನು ಹಗುರದ ವ್ಯಕ್ತಿಯಾಗಿದ್ದರೆ ಬಹುಬೇಗನೆ ಅವನ ಪತನವಾಗುತ್ತದೆ. ಒಣ ಎಲೆ ಗಾಳಿಗೆ ಹಾರಿ ಮರದ ತುದಿಯಲ್ಲಿ ಹೋಗಿ ಕುಳಿತರೂ ಇನ್ನೊಂದು ಸಲ ಅದೇ ಗಾಳಿ ಬೀಸಿದಾಗ ಒಣ ಎಲೆ ನೂರು ಗಜ ದೂರ ಹಾರಿ ಬೀಳುತ್ತದೆ.

ಎರಡು ವಸ್ತುಗಳ ಸಂಯೋಗವೂ ನಿತ್ಯವಲ್ಲ. ಒಂದು ದಿನ ಅವುಗಳ ವಿಯೋಗವಾಗಲೇಬೇಕು. ಒಬ್ಬನು ಕಾಂಗ್ರೆಸ್ಸಿಗೆ ಸೇರಿದರೆ ಬಿಜೆಪಿಯನ್ನು ಅಗಲಿ ಬಂದಿರುತ್ತಾರೆ. ಇನ್ನೊಬ್ಬನು ಬಿಜೆಪಿಗೆ ಸೇರಿದರೆ ಕಾಂಗ್ರೆಸ್ಸನ್ನು ಅವನು ತೊರೆದು ಬಂದಿರುತ್ತಾನೆ. ಇನ್ನೊಂದರ ವಿಯೋಗಮೂಲಕವಾದದ್ದು ಮತ್ತೊಂದರ ಸಂಯೋಗ. ಏವಂ ಚ ಸಂಯೋಗವು ವಿಯೋಗದಿಂದ ಆಗುತ್ತದೆ. ವಿಯೋಗವು ಇನ್ನೊಂದರ ಸಂಯೋಗದಿಂದ ಆಗುತ್ತದೆ.

''ಮರಣಾಂತಂ ಚ ಜೀವಿತಮ್''. ಇದು ಸರ್ವರಿಗೂ ತಿಳಿದ ಸತ್ಯ. ಶಾಶ್ವತವಾಗಿ ಬದುಕಿದವರು ಒಬ್ಬರೂ ಇಲ್ಲ. ಸಕಲ ಮಾನವರೂ ಪ್ರಾಣಿಗಳೂ ಕ್ರಿಮಿಕೀಟಗಳೂ ಮರಣದ ಕಡೆಗೆ ಧಾವಿಸುತ್ತವೆ ಎನ್ನಬಹುದು. ಒಂದು ದಿನ, ಒಂದು ಘಂಟೆ, ಒಂದು ನಿಮಿಷ ಕಳೆದರೂ ಆಯುಸ್ಸಿನ ಪ್ರಮಾಣದಲ್ಲಿ ಅಷ್ಟು ಕಡಿತವಾಯಿತೆಂದು ತಿಳಿಯಬೇಕು. ಮಗುವಿಗೆ ಒಂದು ವರ್ಷವಾಯಿತೆಂದರೆ ಅದರ ಆಯುಸ್ಸಿನಲ್ಲಿ ಒಂದು ವರ್ಷ ಕಡಮೆಯಾಯಿತೆಂದರ್ಥ! ಇದು ಕಾಲದ ಮಹಿಮೆ. ಯಾರಿಂದಲೂ ಎದುರಿಸಲಾರದ ಈಶ್ವರಶಕ್ತಿಯೇ ಕಾಲವೆನಿಸುತ್ತದೆ. ರಾಮಾಯಣದ ಉತ್ತರಕಾಂಡದ ಕಡೆಯಲ್ಲಿ ಕಾಲಪುರುಷನು ಮನುಷ್ಯವೇಷದಲ್ಲಿ ಶ್ರೀರಾಮನ ಬಳಿಗೆ ಬರುತ್ತಾನೆ. ''ಯಾರು ನೀನು?'' ಎಂದು ಕೇಳಿದಾಗ ಅವನು ಶ್ರೀರಾಮನಿಗೆ ''ಮಹಾರಾಜ, ನೀನು ಹಿಂದೆ ಸದ್ರೂಪದಲ್ಲಿದ್ದಾಗ ಮಾಯಾದೇವಿಯಲ್ಲಿ ಹುಟ್ಟಿದ ನಿನ್ನ ಮಗ ನಾನು ! 'ಕಾಲಃ ಸರ್ವಸಮಾಹರಃ' - ಸರ್ವರನ್ನೂ ಧ್ವಂಸಮಾಡತಕ್ಕ ಕಾಲಪುರುಷ ನಾನು !'' - ಎನ್ನುತ್ತಾನೆ.

''ಹೀಗಿರುವುದರಿಂದ ಭರತ, ನನಗೆ ಪಟ್ಟಾಭಿಷೇಕವು ತಪ್ಪಿತೆಂದಾಗಲಿ, ಅರಮನೆಯ ಸುಖದಿಂದ ನಾನು ವಂಚಿತನಾದೆನೆಂದಾಗಲಿ, ನಮ್ಮ ತಂದೆ ದಶರಥ ಮಹಾರಾಜನು ಮೃತನಾದನೆಂದಾಗಲಿ ಶೋಕಿಸಬೇಡ'' — ಎಂದು ಈ ಶ್ಲೋಕದ ತಾತ್ಪರ್ಯ.

**ಆಶಾಯಾ ಯೇ ದಾಸಾಸ್ತೇ ದಾಸಾಃ ಸರ್ವಲೋಕಸ್ಯ ।**
**ಆಶಾ ಯೇಷಾಂ ದಾಸೀ ತೇಷಾಂ ದಾಸಾಯತೇ ಲೋಕಃ ॥ ೫೦ ॥**

— ಸುಭಾಷಿತರತ್ನ-ಭಾಂಡಾಗಾರ

''ಆಸೆಗೆ ಯಾರು ದಾಸರಾಗಿದ್ದಾರೋ ಅವರು ಸರ್ವಜನರಿಗೂ ದಾಸರೇ ಸರಿ. ಆದರೆ ಆಸೆಯೇ ಯಾರಿಗೆ ದಾಸಿಯಾಗಿದೆಯೋ ಅವರಿಗೆ ಸರ್ವರೂ ದಾಸರಂತೆ ವರ್ತಿಸುತ್ತಾರೆ.''

ಪರಮಾಣುವಿನಷ್ಟಿರುವ ಮನಸ್ಸೆಂಬ ಬೀಜದಿಂದ ಆಸೆಯೆಂಬ ಬಳ್ಳಿ ಹುಟ್ಟುತ್ತದೆ. ಅದು ಹರಡಿಕೊಳ್ಳಲು ಹದಿನಾಲ್ಕು ಲೋಕಗಳೂ ಸಾಲವು ! - ಎಂದು ಒಂದು ಸುಭಾಷಿತ ಹೇಳುತ್ತದೆ. ಆಸೆಯಿಂದಾಗುವ ಅನರ್ಥಗಳನ್ನು ಸುಭಾಷಿತಗಳು ಎಷ್ಟು ವರ್ಣಿಸಿ ಹೇಳಿದರೂ ಮನುಷ್ಯನು ಅದನ್ನು ಬಿಡಲಾರದವನಾಗಿದ್ದಾನೆ. ''ವೃದ್ಧೋ ಯಾತಿ ಗೃಹೀತ್ವಾ ದಂಡಂ ತದಪಿ ನ ಮುಂಚತ್ಯಾಶಾಪಿಂಡಂ'' ಎಂದು ಶ್ರೀಶಂಕರಾಚಾರ್ಯರು ಹೇಳುತ್ತಾರೆ. ಮುದುಕನು ನಡೆಯಲಾರದವನಾದರೂ ದೊಣ್ಣೆಯನ್ನು ಊರುತ್ತ ಎಲ್ಲಿಗೋ ಯಾರ ಬಳಿಗೋ ಹೋಗುತ್ತಲೇ ಇದ್ದಾನೆ. ಆಗಲೂ ಅವನನ್ನು ಆಸೆಯೆಂಬ ಪಿಂಡವು ಬಿಡುವುದೇ ಇಲ್ಲ! ರಾಗಿಮುದ್ದೆ, ಒಂದು ಮುಷ್ಟಿ ಅನ್ನ ಮುಂತಾದ ಆಹಾರದ ಸೇವನೆಯು ಸಾಯುವವರೆಗೂ ಹೇಗೆ ಬಿಡುವುದಿಲ್ಲವೋ ಹಾಗೆಯೇ ಆಸೆಯೂ ಮನುಷ್ಯನನ್ನು ಬಿಡುವುದಿಲ್ಲ. ಇಂತಹ ಜನರು ಆಸೆಯ ದಾಸರು, ಆಸೆಯ ಆಣತಿಗೆ ತಲೆಬಾಗತಕ್ಕವರು.

ಆಸೆಯನ್ನು ಗೆದ್ದ ಧೀರರೂ ಇದ್ದಾರೆ. ಅಂತಹ ಒಬ್ಬ ವಿದ್ವಾಂಸನನ್ನು ರಾಜನೊಬ್ಬ ಧಿಕ್ಕರಿಸಿ ಮಾತಾಡಿದ. ಆಗ ವಿದ್ವಾಂಸನು ಹೇಳುತ್ತಾನೆ: ''ಎಲೈ ರಾಜನೆ, ನೀನು ಅರ್ಥಗಳಿಗೆ (ಐಶ್ವರ್ಯಕ್ಕೆ) ಒಡೆಯನಾಗಿರಬಹುದು. ನಾವು ಶಾಸ್ತ್ರಗ್ರಂಥಗಳ ಅರ್ಥಗಳಿಗೆ ಒಡೆಯರು. ನೀನು ಶತ್ರುಗಳನ್ನು ಗೆಲ್ಲುವುದರಲ್ಲಿ ಶೂರ. ನಾವು ವಾದಕ್ಕೆ ಬರುವ ವಿದ್ವಾಂಸರ ದರ್ಪವನ್ನು ಮರ್ದಿಸುವುದರಲ್ಲಿ ನಿಸ್ಸೀಮರು! ಹಣದ ಆಸೆಗಾಗಿ ನಿನ್ನನ್ನು ಸೇವಿಸತಕ್ಕವರು ಕೆಲವರಿದ್ದಾರೆ. ವಿದ್ಯೆಗಾಗಿ ನನ್ನನ್ನು ಸೇವಿಸತಕ್ಕ ಶಿಷ್ಯರೂ ಬಹುಸಂಖ್ಯೆಯಲ್ಲಿದ್ದಾರೆ. ನನ್ನಲ್ಲಿ ನಿನಗೆ ಗೌರವಬುದ್ಧಿ ಇಲ್ಲವಾದರೆ, ನಿನ್ನಲ್ಲಿ ನನಗೆ

ಗೌರವಬುದ್ಧಿ ಸುತರಾಂ ಇಲ್ಲ!'' ಇಂತಹ ಧೀರವಾಣಿಯಿಂದ ಮಾತಾಡತಕ್ಕವರು ಯಾರು? ಶ್ರೀರಾಮಕೃಷ್ಣ ಪರಮಹಂಸರು, ಶ್ರೀರಮಣಮಹರ್ಷಿಗಳು, ಮಹಾತ್ಮ ಗಾಂಧಿಯವರು - ಇಂತಹ ಫಲದ ಆಸೆಯನ್ನು ತೊರೆದ ನಿಷ್ಕಾಮಕರ್ಮಿಗಳಿಗೆ ಮಾತ್ರ ಅದು ಸಾಧ್ಯವಾಗುತ್ತದೆ.

ಅಚ್ಚರಿಯೇನೆಂದರೆ, ಉತ್ತಮ ಆಡಳಿತಗಾರರೂ ಸಮರ್ಥರೂ ದಕ್ಷರೂ ಅಧಿಕವಾದ ಅನುಭವವುಳ್ಳವರೂ ಎನಿಸಿಕೊಂಡ ವಿದ್ಯಾವಂತರೂ ಸಹ ತಮ್ಮ ಅರ್ಹತೆಯ ಒಂದಂಶವೂ ಇಲ್ಲದ ರಾಜಕಾರಣಿಗಳನ್ನು ಹಿಂಬಾಲಿಸುತ್ತ ಅವರ ದಾಸಾನುದಾಸರಂತೆ ನಡೆದುಕೊಳ್ಳುತ್ತಾರಲ್ಲ! - ಇದು ಆಶಾಪಿಶಾಚಿಯ ಚೇಷ್ಟೆಯಲ್ಲವೆ? ಈ ರಾಜಕಾರಣಿಗಳು ಚುನಾವಣೆಯ ಸಮಯದಲ್ಲಿ ವೋಟಿನ ಭಿಕ್ಷೆಗಾಗಿ ಹಳ್ಳಿಹಳ್ಳಿಗಳಲ್ಲಿ ಕಂಡಕಂಡವರಿಗೆ ಕೈಮುಗಿಯುತ್ತ ತಿರುಗಾಡುವುದು ಆಸೆಯ ದಾಸರಾದ್ದರಿಂದಲ್ಲವೆ?

ಆಸೆಯಿಲ್ಲದೆ ದಾಸರಾದವರೂ ಇದ್ದಾರೆ. ಉದಾಹರಣೆಗೆ, ಹನುಮಂತ. ಅವನು ಲಂಕೆಯಲ್ಲಿ ಅಶೋಕವನವನ್ನು ಧ್ವಂಸ ಮಾಡಿ ''ದಾಸೋಽಹಂ ಕೋಸಲೇಂದ್ರಸ್ಯ - ನಾನು ಶ್ರೀರಾಮನ ದಾಸ'' ಎಂದು ಘೋಷಿಸಿಕೊಂಡಿದ್ದಾನೆ. ಅವನು ಶ್ರೀರಾಮನಿಗಾಗಿ ಸಾಧಿಸಿದ ಮಹತ್ತರ ಕಾರ್ಯಗಳು ವಿಪುಲ ಸಂಖ್ಯೆಯಲ್ಲಿವೆ. ಆತನು ಯಾವ ಪ್ರತಿಫಲವನ್ನೂ ಬಯಸಲೂ ಇಲ್ಲ, ತೆಗೆದುಕೊಳ್ಳಲೂ ಇಲ್ಲ. ತನ್ನ ಪ್ರಭುವಿನ ಧೀರೋದಾತ್ತಗುಣಗಳಿಗೂ, ಧರ್ಮನಿಷ್ಠೆಗೂ ತಲೆಬಾಗಿ ಸೇವೆಸಲ್ಲಿಸಿ ಧನ್ಯನೆನಿಸಿ ದೇವತೆಯಾದ. ಭಾರತೀಯರು ಇಂದಿಗೂ ಹಳ್ಳಿಹಳ್ಳಿಗಳಲ್ಲಿ ಗುಡಿಗಳನ್ನು ಕಟ್ಟಿ ಹನುಮಂತನನ್ನು ಪೂಜಿಸುತ್ತಿದ್ದಾರೆ.

ಆಸೆಯಲ್ಲಿ ಪರಾರ್ಥವಾದ ಆಸೆಯೆಂಬುದೊಂದುಂಟು. ಕವಿಗಳು, ವಿಜ್ಞಾನಿಗಳು, ಶಿಲ್ಪಿಗಳು, ಯೋಧರು - ಮುಂತಾದವರಿಗೆ ಧನ-ಕೀರ್ತಿಗಳ ಲೋಭವಿದ್ದರೂ ಅವರ ಸಾಧನೆಗಳು ಪರಾರ್ಥವಾದವು. ಅವರ ಆಸೆ-ಪ್ರಯತ್ನಗಳು ಲೋಕೋಪಕಾರಿಯಾದವು. ಅವರನ್ನು ಜನತೆ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತದೆ.

* * *

# ಶ್ಲೋಕಗಳ ಮತ್ತು ಉದ್ಧೃತಗಳ ಅಕಾರಾದಿ ಸೂಚಿ


ಅಕರ್ದಮಮಿದಂ ತೀರ್ಥಂ ೫೨
ಅಣುಮಾತ್ರಂ ಮನಸ್ತಸ್ಮಾತ್ ೮೪
ಅತಿರೂಪಾದ್ ಹೃತಾ ಸೀತಾ ೭೪
ಅದ್ಭಿರ್ಗಾತ್ರಾಣಿ ಶುದ್ಧ್ಯಂತಿ ೪೩
ಅಧ್ಯಾತ್ಮವಿದ್ಯಾ ವಿದ್ಯಾನಾಂ ೪೭
ಅನ್ನಮಾಶ್ರಯತೇ ಲಕ್ಷ್ಮೀಃ ೬೧
ಅಭಾವಾವಧಯೋ ಭಾವಾಃ ೩೫
ಅರ್ಥಮನರ್ಥಂ ಭಾವಯ ೮
ಅರ್ಥೋಽಸ್ತು ನಃ ಕೇವಲಂ ೪೬, ೫೬
ಅಶನಾದಿಂದ್ರಿಯಾಣೀವ ೧೯
ಅಸಂಕಲ್ಪಾಜ್ಜಯೇತ್ ಕಾಮಂ ೬೩
ಅಹಿಂಸಾ ಪರಮೋ ಧರ್ಮಃ ೩೩
ಆಕಾಶಾತ್ ಪತಿತಂ ತೋಯಂ ೧೪
ಆತ್ಮನಃ ಕಾಮಾಯ ೨೪
ಆತ್ಮಾನಮನಭಿಜ್ಞಾಯ ೩೬
ಆದಿತ್ಯೋದಯಸ್ನಾತ ೫೩
ಆಶಾಯಾ ಯೇ ದಾಸಾಃ ೩೨, ೪೨, ೮೯
ಆಶಾ ಯೇಷಾಂ ದಾಸೀ ೪೩, ೮೯
ಇಂದ್ರಂ ಮಿತ್ರಂ ವರುಣಂ ೧೫
ಉಗ್ರಂ ತಪಃ ಸಮಾತಿಷ್ಠೇತ್ ೭೦
ಉಚ್ಛಿಷ್ಟಂ ಶಿವನಿರ್ಮಾಲ್ಯಂ ೧೬
ಉತ್ತರೋತ್ತರಂ ಬಲೀಯಃ ೬೭
ಋಣಾನಿ ತ್ರೀಣ್ಯಪಾಕೃತ್ಯ ೫೭
ಏಕೇನಾಪಿ ಸುಪುತ್ರೇಣ ೪
ಏಷೋಽಽಹಿತಾಗ್ನಿಶ್ಚ ೭೫
ಕಾಮ ಏಷ ಕ್ರೋಧ ಏಷ ೬೪
ಕಾಮಾತ್ ಕ್ರೋಧೋಽಭಿಜಾಯತೇ ೭೭
ಕಾಲಃ ಸರ್ವಸಮಾಹರಃ ೮೮
ಕಾಲಾಯ ತಸ್ಮೈ ನಮಃ ೨೧
ಕಾವ್ಯಂ ಯಶಸೇಽರ್ಥಕೃತೇ ೬೨
ಕೃತಯುಗದಲ್ಲಿ ಶ್ರೀಗುರು ೨೯
ಕೇಚಿದ್ದೈವಾತ್ ಸ್ವಭಾವಾದ್ವಾ ೨೧
ಕ್ಷಣೇ ಕ್ಷಣೇ ಯತ್ ೫೪
ಕ್ಷಮಾತುಲ್ಯಂ ತಪಃ ೩೧
ಖಂಡಿಕೋಪಾಧ್ಯಾಯಃ ೨೮
ಗತಾನುಗತಿಕೋ ಲೋಕಃ ೩೯
ಗಾಂಡೀವಾಗ್ನಿಂ ಪ್ರವೇಕ್ಷ್ಯಾಮಃ ೫೭
ಗುಣಾಃ ಪೂಜಾಸ್ಥಾನಂ ೬೭
ಗೃಹಾಸಕ್ತಸ್ಯ ನೋ ವಿದ್ಯಾ ೪೬
ಗೋಶತಾದಪಿ ಗೋಕ್ಷೀರಂ ೬೫
ಘಾತಯಿತುಮೇವ ನೀಚಃ ೮
ಚಾಣಕ್ಯೇನ ಯಥಾ ೩೦
ಜನೇ ಚ ಖರಧರ್ಮಿಣಿ ೭೪
ಜಂತೂನಾಂ ನರಜನ್ಮ ೨೭
ಜಾನಾಮಿ ಧರ್ಮಂ ೧೨
ಜಾನಾಮ್ಯಧರ್ಮಂ ೫೬
ತತ್ರ ದೈವಮಭಿವ್ಯಕ್ತಂ ೨೨
ತದಾಸೇಚನಕಂ ತೃಪ್ತೇಃ ೫೫
ತಸ್ಯ ಸರ್ವಾಣಿ ಭೂತಾನಿ ೪೯
ತಸ್ಯಾರ್ಥೇ ಸರ್ವಭೂತಾನಾಂ ೪೮
ತೇನಾಧೀತಂ ಶ್ರುತಂ ತೇನ ೪೧
ತ್ರೈವಿದ್ಯೇಭ್ಯಸ್ತ್ರಯೀ ವಿದ್ಯಾಂ ೫೦
ದಾನಂ ದರಿದ್ರಸ್ಯ ವಿಭೋಃ ೩
ದಾನಾಯ ಲಕ್ಷ್ಮೀಃ ೨೪
ದಾಸೋಽಹಂ ಕೋಸಲೇಂದ್ರಸ್ಯ ೯೦
ದೇವಮಾಯೇವ ನಿರ್ಮಿತಾ ೭೫
ದೇಶಕಾಲನಿಮಿತ್ತಾನಾಂ ೭೬
ದೈವಂ ನಿಹತ್ಯ ಕುರು ೧
ದ್ರವ್ಯಂ ಚ ಭವ್ಯೇ ೧೮
ದ್ವಿಧಾ ಭಜ್ಯೇಯಮಪಿ ೧೧

ಧನೇನ ಕಿಂ ಯೋ ನ ದದಾತಿ ೮೧
ಧರ್ಮಸ್ತಮನುಗಚ್ಛತಿ ೮೭
ಧರ್ಮಾರ್ಥಾವುಚ್ಯತೇ ಶ್ರೇಯಃ ೪೫
ಧರ್ಮೇಣೈವ ಪ್ರಜಾಃ ಸರ್ವಾಃ ೫೦
ನ ಕಶ್ಚಿತ್ ಕಸ್ಯಚಿನ್ಮಿತ್ರಂ ೨೨
ನ ಚ ಕಶ್ಚಿತ್ ಶೃಣೋತಿ ಮೇ ೫೬
ನ ಪಾಣಿಪಾದಚಪಲಃ ೨೬
ನ ಸಾ ಸಭಾ ಯತ್ರ ೫೩
ನಾಂತರಜ್ಞಾಃ ಶ್ರಿಯಃ ೬
ನಾಪೃಷ್ಟಃ ಕಸ್ಯಚಿತ್ ೪
ನಿಪುಣತಾ.... ೩೯
ನೀತಿಜ್ಞಾ ನಿಯಮಜ್ಞಾಃ ೬೮
ಪಂಕಂ ವಿನಾ ಸರೋ ಭಾತಿ ೫೨
ಪಂಥಾ ದೇಯೋ ಬ್ರಾಹ್ಮಣಾಯ ೬೬
ಪರದ್ರವ್ಯೇಷ್ವಭಿಧ್ಯಾನಂ ೭೧
ಪರಧರ್ಮೋ ಭಯಾವಹಃ ೭೬
ಪುರಾ ವಿದ್ವತ್ತಾಸೀತ್ ೮೪
ಪೂರ್ವಜನ್ಮಕೃತಂ ಕರ್ಮ ೨, ೨೨
ಪ್ರಯೋಜನಂ ವಿನಾ ೨೩
ಪ್ರಾಪ್ತಾರ್ಥಗ್ರಹಣಂ ೧೭
ಬಡವನಾರ್... ೫೫
ಬಲಃ ಸರ್ಷಪಮಾತ್ರಾಣಿ ೩೭
ಮಕ್ಕಳಿವರೇನಮ್ಮ ೬
ಮನಸಿ ಚ ಪರಿತುಷ್ಟೇ ೩೨, ೮೨
ಮೃಗ-ಮೀನ-ಸಜ್ಜನಾನಾಂ ೨೩
ಮೃತಂ ಶರೀರಮುತ್ಸೃಜ್ಯ ೫೫
ಯಃ ಪಠತಿ ಲಿಖತಿ ೩೮
ಯೋಗಃ ಕರ್ಮಸು ಕೌಶಲಂ ೨೫
ರಾಜಪ್ರಭಾವಜುಷ್ಟಾಂ ಹಿ ೫೧
ವಯಮಿಹ ಪರಿತುಷ್ಟಾಃ ೮೨
ವಿತ್ತಂ ಬಂಧುರ್ವಯಃ ೧೨
ವಿತ್ತಮೇವ ಕಲೌ ನೄಣಾಂ ೭೨
ವಿದ್ಯಾ ದದಾತಿ ವಿನಯಂ ೨೫, ೮೫, ೮೬
ವಿದ್ಯಾ ವಿವಾದಾಯ ೨೫
ವಿಧಾಯ ವೈರಂ ಸಾಮರ್ಷೇ ೭೭
ವಿಪರ್ಯಸ್ತಮನಶ್ಚೇಷ್ಟೈಃ ೩೦
ವಿಶ್ವಾಮಿತ್ರೇಣ ಮುನಿನಾ ೨
ವೃದ್ಧೋ ಯಾತಿ ಗೃಹೀತ್ವಾ ೮೯
ವೇದೋಽಖಿಲೋ ಧರ್ಮಮೂಲಂ ೪೮, ೫೦
ಶತ್ರುಶೇಷಂ ನ ಶೇಷಯೇತ್ ೭೮
ಶೀತವಾತಾತಪಕ್ಲೇಶಾನ್ ೫೯
ಶ್ರುತಂ ತು ಸರ್ವೇಭ್ಯಃ ೭೦
ಶ್ರುತೇನ ಶ್ರೋತ್ರಿಯೋ ಭವತಿ ೬೯
ಶ್ವಃ ಶ್ವಃ ಪಾಪೀಯದಿವಸಾಃ ೮೫
ಸ ಏವ ಸರ್ವಶಾಸ್ತ್ರಜ್ಞಃ ೮೫
ಸತ್ಯಾಯ ಮಿತಭಾಷಿಣಾಂ ೨೬
ಸಮುದ್ರಮಥನಾಲ್ಲೇಭೇ ೧
ಸರ್ವಃ ಕಾಂತಮಾತ್ಮೀಯಂ ೩೭
ಸರ್ವಂ ವಸ್ತು ಭಯಾನ್ವಿತಂ ೬೧
ಸರ್ವಜ್ಞನೆಂಬವನು ೩೯
ಸರ್ವೇ ಕ್ಷಯಾಂತಾ ನಿಚಯಾಃ ೮೬
ಸರ್ವೇ ಜನಾಃ ಸುಖಿನಃ ೭೨
ಸರ್ವೇಷಾಮಪ್ಯಧಿಕಾರಃ ೧೩
ಸರ್ವೇಷಾಮೇವ ಶೌಚಾನಾಂ ೪೪
ಸಾಮೃತೈಃ ಪಾಣಿಭಿಃ ೨೮
ಸುಖಾತ್ತು ಯೋ ಯಾತಿ ೬೨
ಸೂಕ್ಷ್ಮಃ ಪರಮದುರ್ಜ್ಞೇಯಃ ೩೪
ಸೂಕ್ಷ್ಮಯೋನೀನಿ ೩೩
ಸ್ಥಾನಸ್ಥಿತಾ ಹಿ ಪೂಜ್ಯಂತೇ ೭೯
ಸ್ವದೇಶಜಾತಂ ಮಂತ್ರಜ್ಞಂ ೧೯
ಸ್ವಭಾವೋ ನೋಪದೇಶೇನ ೧೦
ಸ್ವಾಧ್ಯಾಯಪ್ರವಚನಾಭ್ಯಾಂ ೫೮
ಹೆಸರು ಹೆಸರೆಂದು ನೀಂ ೧೭

# ವ್ಯಕ್ತಿತ್ವ-ವಿಕಾಸ ಪುಸ್ತಕಮಾಲೆ

| | | | |
|---|---|---|---|
| ೧. | ತಿಳಿವು ಗೆಲವು | ರೂ. | ೩೫-೦೦ |
| ೨. | ಗೆಲವಿನ ಗುಟ್ಟು | ರೂ. | ೨೫-೦೦ |
| ೩. | ಜೀವನ ಮೌಲ್ಯಗಳು (ಭಾಗ ೧) | ರೂ. | ೩೦-೦೦ |
| ೪. | ಜೀವನ ಮೌಲ್ಯಗಳು (ಭಾಗ ೨) | ರೂ. | ೩೦-೦೦ |
| ೫. | ಜೀವನ ಮೌಲ್ಯಗಳು (ಭಾಗ ೩) | ರೂ. | ೩೨-೦೦ |
| ೬. | ವಿಕಸಿತ ಜೀವನ | ರೂ. | ೩೦-೦೦ |
| ೭. | ಸೂಕ್ತಿ - ವ್ಯಾಪ್ತಿ (ಭಾಗ ೧) | ರೂ. | ೪೦-೦೦ |
| ೮. | ಸಫಲ ಜೀವನ ಸೋಪಾನ | ರೂ. | ೩೫-೦೦ |
| ೯. | ಸಾರ್ಥಕ ಜೀವನದ ಹಾಸುಹೊಕ್ಕು | ರೂ. | ೨೭-೦೦ |
| ೧೦. | ಬೆಳಲುಗಳು | ರೂ. | ೩೫-೦೦ |
| ೧೧. | ಸೂಕ್ತಿ - ವ್ಯಾಪ್ತಿ (ಭಾಗ ೨) | ರೂ. | ೩೫-೦೦ |
| ೧೨. | ಮನಸ್ಸೇ, ರಿಲ್ಯಾಕ್ಸ್ ಪ್ಲೀಸ್ ! | ರೂ. | ೭೫-೦೦ |
| ೧೩. | ಮನಸ್ಸು ಅರಳಲಿ ! | ರೂ. | ೧೦೦-೦೦ |
| ೧೪. | ಜಾಗೃತಾತ್ಮರಿಗಾಗಿ.... | ರೂ. | ೩೦-೦೦ |
| ೧೫. | ಸಾರ್ಥಕ ಜೀವನ | ರೂ. | ೫೦-೦೦ |

ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು - ೧೯

ISBN 81-7531-038-3

ರೂ. 35-00